ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 1 ಶನಿವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 284 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮುಡಾ ಹಗರಣಕ್ಕೂ ನಮ್ಮ ಕುಟುಂಬಕ್ಕೆ ನೀಡಿದ 14 ಸೈಟ್‌ಗೂ ಸಂಬಂಧ ಇಲ್ಲ

● ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟನೆ ● ತನಿಖಾ ಸಂಸ್ಥೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿಲ್ಲ



ಮೈಸೂರು,ಜ.31(ಎಂಟಿವೈ)– ಮುಡಾದಲ್ಲಿ ನಡೆದಿರುವ ಹಗರಣಕ್ಕೂ, ನಮ್ಮ ಜಮೀನಿಗೆ ಬದಲಾಗಿ ನೀಡಿದ್ದ 14 ನಿವೇಶನಕ್ಕೂ ಯಾವುದೇ ಸಂಬಂಧ ವಿಲ್ಲ ಎಂದು ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಮ್ಮ ಜಮೀನನ್ನು ಮುಡಾ ವಶಪಡಿಸಿಕೊಂಡಿದ್ದಕ್ಕೆ 14 ಬದಲಿ ನಿವೇಶನವನ್ನು ನಿಯಮಾನುಸಾರ ನೀಡಿತ್ತು. ಮುಡಾದಲ್ಲಿ ಆಗಿರುವ ಭ್ರಷ್ಟಾಚಾರಕ್ಕೂ ನಮ್ಮ 14 ನಿವೇಶನಗಳಿಗೂ ಸಂಬಂಧ ಇಲ್ಲ. ಇದೇ ಬೇರೆ ವಿಚಾರ. ಇಡಿಯವರು ಬೇಕಂತಲೇ ದುರುದ್ದೇಶದಿಂದ ನಮ್ಮ ಹೆಸರು ಬಳಸುತ್ತಿದ್ದಾರೆ. ನಮಗೆ ಕೊಟ್ಟಿರುವ ಸೈಟು ಕಾನೂನಾತ್ಮಕವಾಗಿದೆ ಎಂದು ಇಡಿಗೂ ಗೊತ್ತು. ಆದರೂ ರಾಜಕೀಯ ಪ್ರೇರಿತವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರನ್ನು ತಳಕು ಹಾಕುತ್ತಿದ್ದಾರೆ ಎಂದು ಕಿಡಿಕಾರಿದರು.

ಮುಡಾ ಪ್ರಕರಣದಲ್ಲಿ ಹೇಗಾದರೂ ಮಾಡಿ ಸಿದ್ದರಾಮಯ್ಯ ಅವರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಬೇಕು ಎಂದು ಕೇಂದ್ರ ಮತ್ತು ರಾಜ್ಯ ಬಿಜೆಪಿ ಇಡಿಗೆ ಒತ್ತಡ ಹೇರುತ್ತಿವೆ. ಕೇಂದ್ರ ತನಿಖಾ ಸಂಸ್ಥೆಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಬಿಜೆಪಿ ತಾಳಕ್ಕೆ ತಕ್ಕಂತೆ ಕುಣಿಯುತ್ತಿವೆ ಎಂದು ಆರೋಪಿಸಿದರು.

ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಪಾತ್ರ ಎಳ್ಳಷ್ಟು ಇಲ್ಲ. ಆದರೂ ಸುಳ್ಳು ಆರೋಪ ಮಾಡುವಲ್ಲಿ ಬಿಜೆಪಿ ಮಗ್ನವಾಗಿದೆ. ಈ ಪ್ರಕರಣದಲ್ಲಿ ಸತ್ಯ, ನ್ಯಾಯಕ್ಕೆ ಜಯ ಸಿಗುತ್ತದೆ ಎಂಬ ವಿಶ್ವಾಸವಿದೆ. ಸಿದ್ದರಾಮಯ್ಯ ಅವರು ಈ ಆರೋಪದಿಂದ ಮುಕ್ತರಾಗಿ ಹೊರ ಬರುತ್ತಾರೆ. ನಮ್ಮ ಕುಟುಂಬದ ಪ್ರಾಪರ್ಟಿ ಸೀಜ್ ಮಾಡಿಲ್ಲ. ಯಾವುದೇ ದಾಖಲೆ ಕೂಡ ಸಿಕ್ಕಿಲ್ಲ. ಇದೆಲ್ಲವು ಜನರ ಮನಸ್ಸಲ್ಲಿ ಸಿದ್ದರಾಮಯ್ಯ ಅವರನ್ನ ಆರೋಪಿ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನ ಅಷ್ಟೇ ಎಂದು ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರ ಪಕ್ಷದ ದೊಡ್ಡ ನಾಯಕರಿಗೆ ಬಿಟ್ಟಿದ್ದು. ಆ ಬಗ್ಗೆ ಮಾತನಾಡಲು ನಾನು ಚಿಕ್ಕವನು. ಅಧ್ಯಕ್ಷರಿಗೂ ಸಿಎಂಗೂ ಭಿನ್ನಾಭಿಪ್ರಾಯ ಇದೆ ಎಂದು ಬಿಜೆಪಿ ಸುಳ್ಳು ಹೇಳುತ್ತಲೇ ಇದೆ. ಇಂತಹ ಬೆಳವಣಿಗೆ ಕಾಂಗ್ರೆಸ್‌ನಲ್ಲಿ ಇಲ್ಲ. ಅದು ಬಿಜೆಪಿಯ ವ್ಯಾಖ್ಯಾನ ಅಷ್ಟೆ. ಸಿದ್ದರಾಮಯ್ಯ ಐದು ವರ್ಷ ಸಿಎಂ ಆಗಿರುತ್ತಾರೆ. ಹೈಕಮಾಂಡ್ ಮತ್ತು ಅಧ್ಯಕ್ಷರೂ ಸೇರಿದಂತೆ ಎಲ್ಲರೂ ಸಿದ್ದರಾಮಯ್ಯ ಅವರ ಪರವಾಗಿದ್ದಾರೆ. ಹಾಗಾಗಿ ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಸಿಎಂ ಆಗಿರುತ್ತಾರೆ ಎಂದು ತಿಳಿಸಿದರು.

ಇಷ್ಟ ಇದ್ದವರು ಹೋಗುತ್ತಾರೆ: ಕುಂಭಮೇಳದಲ್ಲಿ ಯಾರಿಗೆ ನಂಬಿಕೆ ಇರುತ್ತೆ ಅವರು ಹೋಗಿ ಸ್ನಾನ ಮಾಡುತ್ತಾರೆ. ನಂಬಿಕೆ ಇಲ್ಲದವರು ಸ್ನಾನ ಮಾಡಲ್ಲ.ಒಂದೇ ರೀತಿ ನಂಬಿಕೆ ಎಲ್ಲರಿಗೂ ಇರಬೇಕು ಎಂದು ಹೇಳಲು ಸಾಧ್ಯವಿಲ್ಲ. ಕುಂಭಮೇಳದ ವಿರುದ್ಧವಾಗಿ ಮಾತನಾಡುವವರು ಅಯೋಗ್ಯರು ಎಂಬ ವಿಜಯೇಂದ್ರ ಹೇಳಿಕೆ ಸರಿಯಲ್ಲ. ನಾವು ಯಾರು ಟೀಕೆ ಮಾಡುವುದಿಲ್ಲ. ಕುಂಭಮೇಳಕ್ಕೆ ಹೋಗಬಾರದು, ಸ್ನಾನ ಮಾಡಬಾರದು ಎಂದು ಯಾರಾದರೂ ಹೇಳಿದ್ದರಾ. ಎಲ್ಲರಿಗೂ ಅವರ ನಂಬಿಕೆಯ ಪ್ರಕಾರ ಬದುಕುವ ಸ್ವಾತಂತ್ರ್ಯ ಇದೆ. ಇದನ್ನ ಹೇಳಿರುವುದಕ್ಕೆ ಅಯೋಗ್ಯರು ಎಂದರೇ ಅವರೇ ನಿಜವಾದ ಅಯೋಗ್ಯರು ಎಂದು ಟೀಕಿಸಿದರು.

ಇಡಿಗೆ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣನೇ 'ಬಾಸ್'

ಕೆಪಿಸಿಸಿ ವಕ್ತಾರ ಲಕ್ಷ್ಮಣ ಗೇಲಿ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಜ.31(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದೂರು ಕೊಟ್ಟ ಕೂಡಲೇ ಪ್ರಕರಣ ದಾಖಲಿಸುವ ಇಡಿ (ಜಾರಿ ನಿರ್ದೇಶನಾಲಯ)ಗೆ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣನೇ 'ಬಾಸ್' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಗೇಲಿ ಮಾಡಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ನೇಹಮಯಿ ಕೃಷ್ಣ ದೂರು ಕೊಟ್ಟ ಕೂಡಲೇ ಇಡಿ ಪ್ರಕರಣ ದಾಖಲಿಸಿಕೊಳ್ಳುತ್ತದೆ. ಅಲ್ಲದೆ, ತ್ವರಿತ ತನಿಖೆ ಕೂಡ ಮಾಡುತ್ತದೆ. ಇದನ್ನೆಲ್ಲಾ ನೋಡಿದರೆ ಇಡಿ ಗೆ ಸ್ನೇಹಮಯಿ ಕೃಷ್ಣನೇ ಬಾಸ್ ಎಂದು ಲೇವಡಿ ಮಾಡಿದರು.

ಪೊಲೀಸರು ಸೇರಿದಂತೆ ಇಡಿಯವರು ಸ್ನೇಹಮಯಿ ಕೃಷ್ಣನ ಮಾತಿಗೆ ಇಷ್ಟೊಂದು ಮನ್ನಣೆ ನೀಡುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಚೆಕ್ ಬೌನ್ಸ್ ಕೇಸ್‌ನಲ್ಲಿ ಆತನಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿದೆ. ಇದನ್ನೆಲ್ಲಾ ನಾವು ಹೇಳಿದರೆ ನಮ್ಮ ವಿರುದ್ಧವೇ ಆತ ತಿರುಗಿ ಬೀಳುತ್ತಾನೆ. ಪೊಲೀಸರು ಸಾಫ್ಟ್ ಕಾರ್ನರ್ ತೋರಿಸದೆ ಸ್ನೇಹಮಯಿ ಕೃಷ್ಣನನ್ನು ಕೂಡಲೇ ಬಂಧಿಸಬೇಕು. ಇಲ್ಲದಿದ್ದರೆ ನಗರ ಪೊಲೀಸ್ ಆಯುಕ್ತರ ಕಚೇರಿ ಮುಂದೆ ಅಹೋರಾತ್ರಿ ಧರಣಿ ಮಾಡಬೇಕಾಗುತ್ತದೆ ಎಂದು ಲಕ್ಷ್ಮಣ್ ಎಚ್ಚರಿಸಿದರು.

ಬಿಜೆಪಿ ಮತ್ತು ಆರ್‌ಎಸ್‌ಎಸ್ ಅಣತಿಯಂತೆ ಕೆಲಸ ಮಾಡುತ್ತಿರುವ ಇಡಿ ಸತ್ಯಾಸತತೆ ತಿಳಿಸದೆ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಎಡಿಜಿಪಿಗೆ 104 ಪುಟಗಳ ವರದಿ ಸಲ್ಲಿಸಿದೆ. ಮುಡಾ ನಿವೇಶನ ಪಡೆದಿರುವ ಸಂಬಂಧ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿಯವರ ವಿರುದ್ಧ ಲೋಕಾಯುಕ್ತರು ತನಿಖೆ ನಡೆಸುತ್ತಿದ್ದಾರೆ. ಈ ಮಧ್ಯೆ ಇಡಿ ವಿನಾಕಾರಣ ತನಿಖೆ ನಡೆಸುತ್ತಿದೆ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಮತ್ತು ಪಾರ್ವತಿ ಅವರು ಹಣಕಾಸು ವರ್ಗಾವಣೆಯಲ್ಲಿ ತೊಡಗಿರುವ ಬಗ್ಗೆ ಇಡಿ ಯಾವುದೇ ದಾಖಲೆ ನೀಡಿಲ್ಲ. ಆದರೆ ತನಿಖೆ ನೆಪದಲ್ಲಿ ಲೋಕಾಯುಕ್ತ ಮೇಲೆ ಪ್ರಭಾವ ಬೀರಲು ಮುಂದಾಗಿದೆ. ಸಿದ್ದರಾಮಯ್ಯಗೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಇಡಿ ಅನಗತ್ಯವಾಗಿ ವಿಚಾರಣೆ ಮಾಡುತ್ತಿದೆ ಎಂದು ಲಕ್ಷ್ಮಣ ಆರೋಪಿಸಿದರು.

ಈ ವಿಚಾರವಾಗಿ ಸಿದ್ದರಾಮಯ್ಯ ಒಪ್ಪಲಿ, ಬಿಡಲಿ ಕಾಂಗ್ರೆಸ್ ಪಕ್ಷವಂತೂ ಇಡಿ ವಿರುದ್ಧ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು.

ಬಿಜೆಪಿಯಲ್ಲೇ ಬಣ ಬಡಿದಾಟ: ಬಿಜೆಪಿಯಲ್ಲಿ ದಿನನಿತ್ಯ ಭಿನ್ನಮತ ಸ್ಫೋಟಗೊಳ್ಳುತ್ತಿದೆ. ಬಹಳಷ್ಟು ಗೊಂದಲ, ಬಣ ಬಡಿದಾಟ ಇರುವಾಗ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಮಧ್ಯೆ ಏನೋ ನಡೆಯುತ್ತಿದೆ ಎಂದು ಕೇಸರಿ ನಾಯಕರು ಟೀಕಿಸುತ್ತಿದ್ದಾರೆ ಎಂದು ಲಕ್ಷ್ಮಣ ಆಕ್ರೋಶ ವ್ಯಕ್ತಪಡಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕಾಂಗ್ರೆಸ್ ನಗರ ಕಾರ್ಯದರ್ಶಿ ಶಿವಣ್ಣ, ವಕ್ತಾರ ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ 6 ದಿನಗಳ ಸಿಲ್ಕ್ ಇಂಡಿಯಾ ಪ್ರದರ್ಶನ, ಮಾರಾಟ

ಬೆಳಗ್ಗೆ 10.30ರಿಂದ ರಾತ್ರಿ 8.30ರವರೆಗೆ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ



ಮೈಸೂರಿನ ನಂಜರಾಜ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿರುವ ಸಿಲ್ಕ್ ಇಂಡಿಯಾ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ನಟಿ ಸಾರಿಕಾ ರಾವ್ ಚಾಲನೆ ನೀಡಿದರು.

ಮೈಸೂರು, ಜ.31(ಜಿಎ)– ಮೈಸೂರಿನ ನಂಜರಾಜ ಬಹದ್ದೂರ್ ಸಭಾಂಗಣ ದಲ್ಲಿ ಆಯೋಜಿಸಿರುವ 6 ದಿನಗಳ ಸಿಲ್ಕ್ ಇಂಡಿಯಾ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ನಟಿ ಸಾರಿಕಾ ರಾವ್ ಚಾಲನೆ ನೀಡಿದರು.

ಫೆ.3ರವರೆಗೆ ಆಯೋಜಿಸಿರುವ ಮೇಳದಲ್ಲಿ ಭಾರತದಾದ್ಯಂತ ನುರಿತ ನೇಕಾರರಿಂದ ತಂಪಾದ ಹತ್ತಿ ಕೈಮಗ್ಗದ ಸಾಂಪ್ರದಾಯಿಕ ರೇಷ್ಮೆ, ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಿದ್ದು, ಕರ್ನಾಟಕದ ಟೈ ಮತ್ತು ಡೈ ಡ್ರೆಸ್ ಮೆಟೀರಿಯಲ್ ಮತ್ತು ಒರಿಸ್ಸಾ ರಾಜ್ಯದಿಂದ ವ್ಯಾಪಕ ಸಂಗ್ರಹಗಳನ್ನು ಒಳಗೊಂಡಿದೆ. ಪಶ್ಚಿಮ ಬಂಗಾಳದ ಕಾಟನ್ ಸೀರೆಗಳನ್ನು ಒಳಗೊಂಡಿದೆ.

ಭಾರತದ ವಿವಿಧ ಭಾಗಗಳ ಗ್ರಾಮೀಣ ನೇಕಾರರನ್ನು ಒಟ್ಟುಗೂಡಿಸುವ ಈ ಪ್ರದರ್ಶನವು ಕೈಮಗ್ಗಗಳು, ಉಡುಗೆ ಸಾಮಗ್ರಿಗಳು ಮತ್ತು ಸೀರೆಗಳ ವ್ಯಾಪಕ ಸಂಗ್ರಹಗಳನ್ನು ಒಳಗೊಂಡಿದೆ. ಪಶ್ಚಿಮ ಬಂಗಾಳದ ಕಾಟನ್ ಸೀರೆಗಳು, ಆಭರಣಗಳು, ಬೆಳ್ಳಿ, ಕುಂದನ್ ಮತ್ತು ಮೀನಕರಿ, ಜವಳಿ, ಕೈಯಿಂದ ಮಾಡಿದ ಅಮೂಲ್ಯ ಮತ್ತು ಅರೆ ಅಮೂಲ್ಯ ಕಲ್ಲುಗಳು, ರತ್ನದ ಕಲ್ಲು, ಕೈಯಿಂದ ತಯಾರಿಸಿದ ವಸ್ತುಗಳಾದ ಮರ, ದಂತ, ಲ್ಯಾಕ್, ಗಾಜು, ಹಿತ್ತಾಳೆ, ಬೆಳ್ಳಿ ಮತ್ತು ಚಿನ್ನ ಲಭ್ಯವಿದೆ.

ಕೈಯಿಂದ ಮಾಡಿದ ಆಭರಣಗಳು, ರತ್ನಗಂಬಳಿಗಳು, ಡ್ಯೂರಿಗಳು, ಮೊಜಾರಿಸ್ ಜೂಟಿಸ್, ಮಾರ್ಬಲ್ ಕ್ರಾಫ್ಟ್ಸ್, ಐವರಿ, ಪೇಂಟಿಂಗ್‌ಗಳು, ಬಾಂದನಿ ಮತ್ತು ಬಂಧೇಜ್‌ನಂತಹ ವರ್ಣರಂಜಿತ ಬಟ್ಟೆಗಳ ಜವಳಿಗಳು ಗುಜರಾತ್‌ನ ಶ್ರೀಮಂತ ಸಂಸ್ಕೃತಿಯನ್ನು ಬಿಂಬಿಸುವ ಬಹುಕಾಂತೀಯ ರೂಪಗಳಾಗಿವೆ. ವರ್ಣರಂಜಿತ ಕೈಮಗ್ಗ ಉತ್ಪನ್ನಗಳು ಗಮನ ಸೆಳೆಯುತ್ತವೆ. ಪ್ರದರ್ಶನವು ಸಮಕಾಲೀನ ಜೀವನಶೈಲಿ ಉತ್ಪನ್ನಗಳನ್ನು ರಚಿಸಲು ಸಾಂಪ್ರದಾಯಿಕ ಕೈಮಗ್ಗ ಕೌಶಲ್ಯಗಳ ಬಳಕೆಯಾಗಿದೆ. ಸೆಣಬು–ಮಸ್ಲಿನ್ ಸೀರೆಗಳು, ಪ್ರದರ್ಶನದಲ್ಲಿ ಉಡುಗೊರೆ ಉತ್ಪನ್ನಗಳು ದೊರೆಯಲಿದ್ದು, ಪ್ರದರ್ಶನ ಬೆಳಿಗ್ಗೆ 10.30 ರಿಂದ ಸಂಜೆ 8.30 ರ ವರೆಗೆ ಲಭ್ಯವಿರುತ್ತದೆ.

ಸುಯೋಗ್ ಆಸ್ಪತ್ರೆ ವತಿಯಿಂದ ನಾಳೆ 'ಸುಯೋಗವಾಣಿ' ಕೌಟುಂಬಿಕ ಮಾಸ ಪತ್ರಿಕೆ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಧಾನ ಸಂಪಾದಕರಾದ ಡಾ.ಎಸ್.ಪಿ.ಯೋಗಣ್ಣ ಮಾತನಾಡಿದರು.

ಮೈಸೂರು, ಜ.30(ಜಿಎ)– ಆರೋಗ್ಯದ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಮೂಡಿಸುವ ಉದ್ದೇಶದಿಂದ ಸುಯೋಗ್ ಆಸ್ಪತ್ರೆ ವತಿಯಿಂದ ತಾಯಮ್ಮ ಪ್ರಕಾಶನದ ಅಡಿಯಲ್ಲಿ 'ಸುಯೋಗ ವಾಣಿ' ಎಂಬ ಕೌಟುಂಬಿಕ ಮಾಸಪತ್ರಿಕೆ ಹೊರ ತರಲಾಗುತ್ತಿದೆ ಎಂದು ಪ್ರಧಾನ ಸಂಪಾದಕರಾದ ಡಾ.ಎಸ್.ಪಿ. ಯೋಗಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.2ರಂದು ಬೆಳಗ್ಗೆ 10.30ಕ್ಕೆ ರಾಮಕೃಷ್ಣ ನಗರದಲ್ಲಿರುವ ಸುಯೋಗ್ ಆಸ್ಪತ್ರೆ ಆವರಣದಲ್ಲಿ ಹಿರಿಯ ಪತ್ರಕರ್ತ ರವೀಂದ್ರ ಭಟ್ ಪತ್ರಿಕೆ ಲೋಕಾರ್ಪಣೆಗೊಳಿಸುವರು, ಥಟ್ ಅಂತ ಹೇಳಿ ಖ್ಯಾತಿಯ ಡಾ.ನಾ. ಸೋಮೇಶ್ವರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಪತ್ರಿಕೆಯ ಸಂಪಾದಕರಾದ ಡಾ. ಸೀಮಾ ಯೋಗಣ್ಣ, ಸಹ ಸಂಪಾದಕ ಡಾ.ಆರ್.ರಾಜೇಂದ್ರ ಪ್ರಸಾದ್, ಸಹ ಸಂಪಾದಕರಾದ ಡಾ.ಸುಯೋಗ್ ಯೋಗಣ್ಣ, ಡಾ.ಯಶಿತಾ ರಾಜ್ ಉಪಸ್ಥಿತರಿರಲಿದ್ದಾರೆ ಎಂದರು. 'ಸುಯೋಗ ವಾಣಿ' ಪತ್ರಿಕೆಯೂ ಇಂಗ್ಲಿಷ್ ಹಾಗೂ ಕನ್ನಡದಲ್ಲಿ ವೈದ್ಯಕೀಯ ಲೇಖನ ಹೊಂದಿರುವ ಸುಮಾರು 64 ಪುಟಗಳ ಪತ್ರಿಕೆಯಾಗಿದೆ. ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಜನಸಾಮಾನ್ಯರಿಗೆ ಉಪಯುಕ್ತವಾಗಲಿದೆ. ಸ್ತ್ರೀಯರು, ಮಕ್ಕಳು, ವಯಸ್ಸಾದವರ ಆರೋಗ್ಯ, ಪರಿಸರ, ಆಹಾರ, ಮಾನಸಿಕ ಕಾಯಿಲೆಗಳು ಮೊದಲಾದವುಗಳ ಬಗ್ಗೆ ತಜ್ಞರು, ಇನ್ನಿತರ ಲೇಖಕರು ಬರೆದ ಲೇಖನಗಳು ಇರಲಿವೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಪಾದಕರಾದ ಡಾ. ಸೀಮಾ ಯೋಗಣ್ಣ, ಡಾ. ಸುಯೋಗ್ ಯೋಗಣ್ಣ, ಡಾ.ಆರ್. ರಾಜೇಂದ್ರ ಪ್ರಸಾದ್, ಡಾ.ಯಶಿತಾ ರಾಜ್ ಉಪಸ್ಥಿತರಿದ್ದರು.

ಇಂದು ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪ್ರದಾನ

ಮೈಸೂರು, ಜ.31(ಜಿಎ)– ಅಶೋಕಪುರಂ ಆದಿ ಕರ್ನಾಟಕ (ಛಲವಾದಿ) ಮಹಾ ಸಂಸ್ಥಾನ ಗುರುಪೀಠದ ವತಿಯಿಂದ ಫೆ.1ರಂದು ಮಧ್ಯಾಹ್ನ 3 ಗಂಟೆಗೆ ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುಪೀಠದ ಡಾ.ಜ್ಞಾನ ಸ್ವರೂಪಾನಂದ ಸ್ವಾಮೀಜಿ ಈ ವಿಷಯ ತಿಳಿಸಿ, ಮಾಜಿ ಸಂಸದ ಡಾ.ವಿ. ಶ್ರೀನಿವಾಸ ಪ್ರಸಾದ್ ಗೌರವಾರ್ಥ ವೇದಿಕೆಗೆ ಅವರ ಹೆಸರನ್ನೇ ಇಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಶಾಸಕ ಎ.ಆರ್. ಕೃಷ್ಣಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಭಾಗ್ಯಲಕ್ಷ್ಮಿ ವಿ.ಶ್ರೀನಿವಾಸಪ್ರಸಾದ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಮ.ನ.ಜವರಯ್ಯ ಅವರಿಗೆ ಡಾ.ಬಿ.ಆರ್. ಅಂಬೇಡ್ಕರ್ ಶ್ರೇಷ್ಠ ಮಾನವ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜೊತೆಗೆ ಇನ್ನಿತರ ಸಾಧಕರಿಗೆ ಡಾ.ಬಿ.ಆರ್. ಅಂಡಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಮಹದೇವು, ಸಿದ್ದಸ್ವಾಮಿ ಉಪಸ್ಥಿತರಿದ್ದರು.

ಅಕಾಡೆಮಿ ಫಾರ್ ಎಕ್ಸ್‌ಲೆನ್ಸ್ ವಿದ್ಯಾಶಾಲೆ ವಾರ್ಷಿಕೋತ್ಸವ




ಮೈಸೂರು, ಜ. 31– ಮೈಸೂರಿನ ಕೇರ್ಗಳ್ಳಿಯ ವಿದ್ಯಾಮಿತ್ರ ಅಕಾಡೆಮಿ ಫಾರ್ ಎಕ್ಸ್‌ಲೆನ್ಸ್ ವಿದ್ಯಾಶಾಲೆ ವಾರ್ಷಿಕೋತ್ಸವ ಕಲಾಸಂಜೆ ಕಾರ್ಯಕ್ರಮವನ್ನು ವೈಭವದಿಂದ ಆಚರಿಸಲಾಯಿತು.

ಕೇರ್ಗಳ್ಳಿಯಲ್ಲಿರುವ ಶ್ರೀ ಹೊಂಬಾಳಮ್ಮ ಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿದ್ಯಾಮಿತ್ರ ಎಜುಕೇಷನ್ ಅಂಡ್ ಕಲ್ಚರಲ್ ಟ್ರಸ್ಟ್‌ನ ಅಧ್ಯಕ್ಷ ಎಸ್. ರಾಧಕೃಷ್ಣ ಮಾತನಾಡಿ, ಶಾಲೆಯಲ್ಲಿ ಮುಂಬರುವ ದಿನಗಳಲ್ಲಿ ಪಿಯುಸಿ ತರಗತಿಗಳನ್ನು ಆರಂಭಿಸುವುದರೊಂದಿಗೆ ಶಾಲೆಯ ಸರ್ವತೋಮುಖ ಬೆಳವಣಿಗೆಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ಭರವಸೆ ನೀಡಿದರು. ಎಂಐಟಿ ಅಧ್ಯಕ್ಷ ಡಾ.ಎಸ್. ಮುರಳಿ ಮಾತನಾಡಿ, ವಿದ್ಯೆ ಐಶ್ವರ್ಯಕ್ಕಿಂತ ಮಿಗಿಲಾದುದು. ಆದ್ದರಿಂದ ಎಲ್ಲರೂ ವಿದ್ಯಾವಂತರಾಗುವ ಮೂಲಕ ಸಮಾಜದ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಶ್ರೀ ಹೊಂಬಾಳಮ್ಮ ಸಿದ್ದರಾಮೇಶ್ವರ ಟ್ರಸ್ಟ್ ಅಧ್ಯಕ್ಷ ಎಂ.ಕೆಂಚಪ್ಪ, ಶಾಲೆ ನಡೆಸಲು ಅಗತ್ಯವಿರುವ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಿ ಟ್ರಸ್ಟ್ ವತಿಯಿಂದ ಶಾಲೆಯನ್ನು ಚೆನ್ನಾಗಿ ನಡೆಸಲು ಅವಕಾಶ ಮಾಡಿಕೊಡುವುದಾಗಿ ಭರವಸೆ ನೀಡಿದರು.


ಶಾಲೆಯ ಛೇರ್ಮನ್ ವಿ.ಜಯಂತ್ ಸ್ವಾಗತಿಸಿದರು. ಆಡಳಿತಾಧಿಕಾರಿ ಶ್ರೀಮತಿ ಚಂದ್ರಕಲಾ ವಂದಿಸಿದರು. ಮುಖ್ಯೋಪಾಧ್ಯಾಯರಾದ ಎಸ್.ಮಹಾದೇವ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು. ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಸರಸ್ವತಿ, ಕೇರ್ಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಬಸವೇಗೌಡ ಸೇರಿದಂತೆ ಹಲವು ಮುಖಂಡರು, ಗ್ರಾಮಸ್ಥರು ಭಾಗವಹಿಸಿದ್ದರು.

ವಿಕ್ರಾಂತ್ ಕಾರ್ಖಾನೆ ಮಾಜಿ ಛೇರ್ಮನ್–ಎಂಡಿ ಕೃಷ್ಣಕುಮಾರ್ ನಿಧನ



ಮೈಸೂರು, ಜ.31–ನಿವೃತ್ತ ಐಎಎಸ್ ಅಧಿಕಾರಿ (1969ರ ಬ್ಯಾಚ್) ಮತ್ತು ಮೈಸೂರಿನ ವಿಕ್ರಾಂತ್ ಕಾರ್ಖಾನೆಯ ಛೇರ್ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಎಸ್.ಕೃಷ್ಣಕುಮಾರ್(79) ಜ.29ರಂದು ರಾತ್ರಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.ಬೆಂಗಳೂರು ನಗರದ ಆರ್‌ಎಂವಿ ಎಕ್ಸ್‌ಟೆನ್ಷನ್ ನಿವಾಸಿಯಾದ ಶ್ರೀಯುತರು, ಪತ್ನಿ ವಿಲಾಸಿನಿ ಕುಮಾರ್, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. 1969 ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿದ್ದ ಅವರು ಮೈಸೂರು ಜಿಲ್ಲಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದರು. 1989ರಿಂದ 92ರವರೆಗೂ ಮೈಸೂರಿನ ವಿಕ್ರಾಂತ್ ಕಾರ್ಖಾನೆಯ ಛೇರ್ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು. ಇದರೊಂದಿಗೆ ಹಲವು ಉನ್ನತ ಹುದ್ದೆಗಳಲ್ಲಿಯೂ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಶುಕ್ರವಾರ(ಜ.31) ಬೆಂಗಳೂರಿನ ಹೆಬ್ಬಾಳು ಬಡಾವಣೆಯ ರುದ್ರಭೂಮಿಯಲ್ಲಿ ಇವರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.02.2025 ಶನಿವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತ ಪಿತ್ತ) ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಶ್ವಾಸ (ಉಬ್ಬಸ, ದಮ್ಮು ಕಾಯಿಲೆ) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಬೆಳಗ್ಗೆ 10ರಿಂದ.

■ **ಅಖಿಲ ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ ಎನ್‌ಹೆಚ್‌ಎಂ ಗುತ್ತಿಗೆ ನೌಕರರ ಸಂಘ :** ರಾಜ್ಯ ಮಟ್ಟದ ಸಮುದಾಯ ಆರೋಗ್ಯ ಅಧಿಕಾರಿಗಳ ಸಂರಕ್ಷಣಾ ಸಮಾವೇಶ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 10 ರಿಂದ.

■ **ಶಾರದಾ ವಿಲಾಸ ಶಿಕ್ಷಣ ಸಂಸ್ಥೆ, ಸಮರ್ಥನಂ ಅಂಗವಿಕಲರ ಸಂಸ್ಥೆ :** ಉದ್ಯೋಗ ಮೇಳ, ಮುಖ್ಯ ಅತಿಥಿಗಳು: ಕೆ.ಸತೀಶ್, ಎಸ್. ಸುಭಾಷ್‌ಚಂದ್ರ, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ಶಾರದಾ ವಿಲಾಸ ಕಾಲೇಜು ಆವರಣ, ಬೆಳಗ್ಗೆ 9 ರಿಂದ.

■ **ಶಾಲಾ ಶಿಕ್ಷಣ ಇಲಾಖೆ, ಸರ್ಕಾರಿ ಪದವಿಪೂರ್ವ ಕಾಲೇಜು :** ಸಮಾರೋಪ ಸಮಾರಂಭ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಪ್ರತಿಭಾ ಪುರಸ್ಕಾರ: ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಮುಖ್ಯ ಅತಿಥಿಗಳು: ಸಹಾಯಕ ಕಾರ್ಯಪಾಲಕ ಅಭಿಯಂತರ ಎಸ್.ರಾಜೇಶ್, ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಭಾಗ್ಯ ಮಾದೇಶ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಎಂ. ಜಯರಾಮ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣ ಸಂಸ್ಕೃತ ಕಾವೇರಿ:** ಪ್ರಾಂತ ಸಮ್ಮೇಳನ–ಮೈಸೂರು, ಬೆಳಗ್ಗೆ 10ಕ್ಕೆ ಸಮ್ಮೇಳನ ಉದ್ಘಾಟನೆ, ಉದ್ಘಾಟನೆ: ಮೇಘಾಲಯ ರಾಜ್ಯಪಾಲ ಸಿ.ಎಚ್. ವಿಜಯಶಂಕರ್, ಸಾನ್ನಿಧ್ಯ : ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದಜೀ ಮಹಾರಾಜ್, ಮುಖ್ಯ ವಕ್ತಾರ: ದೆಹಲಿ ಅಖಿಲ ಭಾರತೀಯ ಸಂಘಟನೆ ಮಂತ್ರಿ ಸಂಸ್ಕೃತ ಭಾರತಿ ಜಯಪ್ರಕಾಶ್ ಗೌತಮ್, ಸಂಸ್ಕಾರ ಭಾರತಿ, ಕರ್ನಾಟಕ ದಕ್ಷಿಣ ಅಧ್ಯಕ್ಷ ಪ್ರೊ. ಪ.ನಾ. ಶಾಸ್ತ್ರಿ; ಸಂಜೆ 4ಕ್ಕೆ ಶೋಭಾಯಾತ್ರೆ ಚಾಮುಂಡಿಪುರಂ ಭೂತಾಳೆ ಮೈದಾನದಿಂದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದವರೆಗೆ; ಸಂಜೆ 6ಕ್ಕೆ ಸಾರ್ವಜನಿಕ ಸಭೆ, ಮುಖ್ಯ ವಕ್ತಾರ : ಅಖಿಲ ಭಾರತೀಯ ಸಂಸ್ಕೃತ ಭಾರತಿ ಉಪಾಧ್ಯಕ್ಷ ದಿನೇಶ್ ಕಾಮತ್, ಅತಿಥಿಗಳು : ವೀಣಾವಾದಕರಾದ ಶ್ರೀಮತಿ ರೇವತಿ ಕಾಮತ್, ಅಧ್ಯಕ್ಷತೆ : ಸಂಸ್ಕೃತ ಭಾರತಿ ಟ್ರಸ್ಟ್, ಕರ್ನಾಟಕ ದಕ್ಷಿಣ ಅಧ್ಯಕ್ಷ ಮಹಾಬಲೇಶ್ವರರಾವ್; ಸಂಜೆ 7.15ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ನಿತಿನ್ಸ್ ನಾದಾಮೃತ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ನೃತ್ಯರೂಪಕ; ಚಂಪಕ ಅಕಾಡೆಮಿ ವಿದ್ಯಾರ್ಥಿಗಳಿಂದ ಕ್ಷೇಮೇಂದ್ರನ ದರ್ಪದಲನ; ಭಾರತೀ ಯೋಗಧಾಮ ಗುರುಕುಲದ ವಿದ್ಯಾರ್ಥಿಗಳಿಂದ ಬಾಲರಾಮ ನಾಟಕ; ಕು.ಅವನಿ ಎಂ.ಭಟ್ ಅವರಿಂದ ಏಕಪಾತ್ರಾಭಿನಯ ಕುರು ಕೃಷಿಮ್, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಕುಮಾರವ್ಯಾಸ ಗುರುಕುಲ ಮತ್ತು ಕಾವ್ಯರಂಜನಿ ಸಭಾ :** ಕುಮಾರವ್ಯಾಸ ಜಯಂತಿ, ಬೆಳಗ್ಗೆ 10.30 ರಿಂದ ಗಮಕಿಗಳಿಂದ ನಾಂದಿ ಪದ್ಯಗಳ ವಾಚನ; ಬೆಳಗ್ಗೆ 11 ರಿಂದ ಕುಮಾರವ್ಯಾಸ ಭಾರತ–ವಾಚನ ವ್ಯಾಖ್ಯಾನ, ಭೀಷ್ಮ ಪರ್ವ–ಕೃಷ್ಣ ಭೀಷ್ಮರ ಮುಖಾಮುಖಿ, 'ಗಾಂಗೇಯ ಭಯ ಭಕುತಿಯಲಿ ಗೆಲಿದನು ವರಸುದರ್ಶನವ' ಗಮಕಿ ಮಂಜುನಾಥ ಕೊಳ್ಳೇಗಾಲ ಅವರಿಂದ, ಮಧ್ಯಾಹ್ನ 12 ರಿಂದ ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಹಿರಿಯ ಗಮಕಿ ವಿದುಷಿ ಶ್ರೀಮತಿ ಎಚ್.ಆರ್. ಲೀಲಾವತಿ, ನಿವೃತ್ತ ಮುಖ್ಯ ಇಂಜಿನಿಯರ್ ಎಚ್.ಆರ್. ಬಾಪು ಸತ್ಯನಾರಾಯಣ, ಸ್ಥಳ: ಹರಿಪ್ರಿಯ, 1315/2, 3ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ.

■ **ದಲಿತ ಸಾಹಿತ್ಯ ಪರಿಷತ್ತು, ದಲಿತ ವಿದ್ಯಾರ್ಥಿ ಪರಿಷತ್ :** ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಶಾಸಕ ಕೆ. ಹರೀಶ್‌ಗೌಡ, ಪುಷ್ಪಾರ್ಚನೆ: ಮಾಜಿ ಸಚಿವ ಬಿ.ಬಿ. ನಿಂಗಯ್ಯ, ಕ್ಯಾಲೆಂಡರ್ ಬಿಡುಗಡೆ: ನರೇಂದ್ರ ನಾಗವಾಲ, ಅಧ್ಯಕ್ಷತೆ: ಅರ್ಜುನ ಗೊಳಸಂಗಿ, ಪುಸ್ತಕ ಲೋಕಾರ್ಪಣೆ: ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ಕೃತಿ ಕುರಿತು: ಲೇಖಕ ಶಿವಸುಂದರ್, ಪ್ರೊ.ನಂಜಯ್ಯ ಹೊಂಗನೂರು, ಮುಖ್ಯ ಅತಿಥಿಗಳು: ಮಾಜಿ ಮೇಯರ್ ಪುರುಷೋತ್ತಮ್, ಪ್ರಕಾಶ್, ಬಿ.ಇ. ಯೋಗೇಶ್ವರ, ನರಸಿಂಹಮೂರ್ತಿ, ಸ್ಥಳ: ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ಆದಿಕರ್ನಾಟಕ, ಛಲವಾದಿ ಮಹಾಸಂಸ್ಥಾನ ಗುರುಪೀಠ:** ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಪ್ರೊ.ಜ್ಞಾನಸ್ವರೂಪಾನಂದ ಸ್ವಾಮೀಜಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು: ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಶ್ರೀಮತಿ ಭಾಗ್ಯಲಕ್ಷ್ಮೀ ವಿ. ಶ್ರೀನಿವಾಸ ಪ್ರಸಾದ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಧ್ಯಾಹ್ನ 2.30ಕ್ಕೆ.

■ **ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್:** ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಗೌರವ ಅತಿಥಿಗಳು: ಐಸಿಎಆರ್ ನಿವೃತ್ತ ಡೈರೆಕ್ಟರ್ ಜನರಲ್ ಡಾ.ಸುಬ್ಬಣ್ಣ ಅಯ್ಯಪ್ಪನ್, ಪಿಎಡಿಸಿ ಅಧ್ಯಕ್ಷ ಬಿ.ಲೋಹಿಯಾ, ಸ್ಥಳ: ಕೆ.ಕೆ. ಶ್ರೀನಿವಾಸನ್ ಸಭಾಂಗಣ, ಬೋಗಾದಿ, ಮಧ್ಯಾಹ್ನ 3.30ಕ್ಕೆ.

■ **ಕಲಾಸುರುಚಿ ಸಂಸ್ಥೆ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಸದಸ್ಯೆ ಶ್ರೀಮತಿ ಆರ್. ಸ್ನೇಹಾ, ಸ್ಥಳ: ಸುರುಚಿ ರಂಗ ಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ.

■ **ಅದಮ್ಯ ರಂಗಶಾಲೆ, ಸ್ಪಂದನಾ ಸಾಂಸ್ಕೃತಿಕ ಪರಿಷತ್, ದಕ್ಷ ಪಿಯು ಕಾಲೇಜು :** ಪಿಯುಸಿ ಪಠ್ಯಾಧಾರಿತ ನಾಟಕ ಪ್ರದರ್ಶನದ ಸಮಾರೋಪ ಸಮಾರಂಭ, ಉದ್ಘಾಟನೆ : ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಅಧ್ಯಕ್ಷತೆ : ಕನ್ನಡ ಪ್ರಾಧ್ಯಾಪಕರಾದ ಪ್ರೊ. ಷಹಸೀನಾ ಬೇಗಂ, ಆಶಯ ನುಡಿ : ಟಿ. ಸತೀಶ್ ಜವರೇಗೌಡ, ಸಮಾರೋಪ ನುಡಿ : ಸಾಹಿತಿ ಡಾ. ಹಾಲತಿ ಸೋಮಶೇಖರ್, ಉಪಸ್ಥಿತರು: ಕಾಲೇಜು ಅಧ್ಯಕ್ಷ ಡಾ. ಪಿ. ಜಯಚಂದ್ರ ರಾಜು, ಸ್ಥಳ: ದಕ್ಷ ಪಿಯು ಕಾಲೇಜು ಆವರಣ, ಸಂಜೆ 5ಕ್ಕೆ.

■ **ಶಿಕ್ಷಾ ಶಾಲೆ ಮತ್ತು ಪದವಿಪೂರ್ವ ಕಾಲೇಜು :** ಶಿಕ್ಷೋತ್ಸವ ಕಾರ್ಯಕ್ರಮ, ಉದ್ಘಾಟನೆ : ಸಂಗೀತ ನಿರ್ದೇಶಕ ಡಾ. ಹಂಸಲೇಖ, ಸಾನ್ನಿಧ್ಯ: ಶ್ರೀ ತ್ರಿಲೋಚನ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ನರೆಡ್ಕೋ ಮೈಸೂರು ಚಾಪ್ಟರ್ ಅಧ್ಯಕ್ಷ ವಿ.ಸಿ.ರವಿಕುಮಾರ್, ಶರಭೇಶ್ವರ ವಿದ್ಯಾಪೀಠದ ಅಧ್ಯಕ್ಷ ಎಸ್.ಎಂ. ದಕ್ಷಿಣಮೂರ್ತಿ, ಉಪಾಧ್ಯಕ್ಷ ಎಸ್.ಎಂ.ಶಿವನಾಗ, ಸ್ಥಳ:ಕಾಲೇಜು ಆವರಣ, ಸಂಜೆ 5.30ಕ್ಕೆ.

■ **ಗಾನಭಾರತೀ:** ಸಂಜೆ 6 ರಿಂದ ವಿದ್ವಾನ್ ಚಕ್ರಕೋಡಿ ನಾರಾಯಣಮೂರ್ತಿ ಅವರ ರಚನೆಗಳು, ಪ್ರಸ್ತುತ ಪಡಿಸುವವರು: ವಿದ್ವಾನ್ ಎನ್. ಶ್ರೀನಾಥ್; ಸಂಜೆ 7 ರಿಂದ ವಿದ್ವಾನ್ ನಾರಾಯಣ ಉಡುಪ ಶಾಸ್ತ್ರಿ ಅವರ ರಚನೆಗಳು, ಪ್ರಸ್ತುತ ಪಡಿಸುವವರು : ವಿದುಷಿ ಅಂಬಿಕಾ ಗುರುದತ್ ಮತ್ತು ವಿದುಷಿ ಕಲಾಧರಿ; ರಾತ್ರಿ 8 ರಿಂದ ವಿದ್ವಾನ್ ಪದ್ಮಚರಣ್ ಅವರ ರಚನೆಗಳು, ಪ್ರಸ್ತುತ ಪಡಿಸುವವರು : ವಿದ್ವಾನ್ ಎಸ್.ಆರ್. ವಿನಯ್ ಶರ್ಮ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಸರಗೂರು ರಮೇಶ್ ಅವರಿಂದ ಶ್ರೀ ರಾಮಕೃಷ್ಣ : ಪ್ರಾಚೀನವಾದರೂ ಆಧುನಿಕ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.

ನೇರಳೆಯಲ್ಲಿಂದು (ಹೆಚ್.ಡಿ.ಕೋಟೆ ತಾ.)

■ **ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, ಬೆಳಗ್ಗೆ 7ಕ್ಕೆ ಸರಳ ವ್ಯಾಯಾಮ, ಬೆಳಗ್ಗೆ 8.30 ರಿಂದ ಶ್ರಮದಾನ, ಸಂಜೆ 4ಕ್ಕೆ ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಬಿ.ಭೈರೇಗೌಡ, ಸ್ಥಳ: ನೇರಳೆ ಗ್ರಾಮ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ–ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ.ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಮೈಸೂರಿನ ಶ್ರೀನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಪಾಂಡವಪುರ ತಾಲೂಕು ರಾಗಿಮುದ್ದನಹಳ್ಳಿ ಗ್ರಾಮದ ಎಂ.ಪಿ. ಜಯರಾಮೇಗೌಡ ಹಾಗೂ ಅವರ ಸಹೋದರ ಎಂ.ಪಿ. ನೀಲಕಂಠಬಾಬು. ಪ್ರಸ್ತುತಿ : ಎನ್. ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಜುವ್ವಲದಿನ್ನೆ ವೆಂಕಟ ಸುರೇಶ್–ಸ್ಯಾಕ್ಸೋಫೋನ್ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
45
ಫೆಬ್ರವರಿ 1 ಶನಿವಾರ 2025
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 45 | ಸಂಚಿಕೆ: 284 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಇಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸತತ 8ನೇ ಬಜೆಟ್ ಮಂಡನೆ



ನವದೆಹಲಿ, ಜ.31–ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆ.1ರಂದು ಪ್ರಧಾನಿ ನರೇಂದ್ರ ಮೋದಿ ಸರ್ಕಾರದ 3ನೇ ಅವಧಿಯ ಎರಡನೇ ಬಜೆಟ್ ಮಂಡಿಸಲಿದ್ದಾರೆ. ಈ ಮೂಲಕ ಸೀತಾರಾಮನ್ ಅವರು ಸತತ 8ನೇ ಬಾರಿ ಬಜೆಟ್ ಮಂಡಿಸಿದ ದಾಖಲೆ ನಿರ್ಮಿಸಲಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ದುರ್ಬಲ ಗೊಂಡಿರುವ ಆರ್ಥಿಕ ಬೆಳವಣಿಗೆಗೆ ಬಲ ತುಂಬುವ ಹಾಗೂ ಬೆಲೆ ಏರಿಕೆ ಮತ್ತು ಸ್ಥಿರ ಆದಾಯ ದಂತಹ ಸಮಸ್ಯೆಗಳಿಂದ ಬಳಲುತ್ತಿರುವ ಮಧ್ಯಮ ವರ್ಗದವರಿಗೆ ಅನುಕೂಲ ವಾಗುವಂತಹ ನಿರ್ಧಾರಗಳನ್ನು ಕೈಗೊಳ್ಳುವ ■6ನೇ ಪುಟಕ್ಕೆ

ರಾಜ್ಯದಲ್ಲೂ ಘನತೆಯ ಸಾವು!

●ಕಾನೂನು ಜಾರಿ ●ಆರೋಗ್ಯ ಇಲಾಖೆ ಮಹತ್ವದ ಆದೇಶ

■ಮಾರಣಾಂತಿಕ ಖಾಯಿಲೆಯಿಂದ ಬಳಲುತ್ತಿದ್ದು, ಚೇತರಿಕೆಯೇ ಕಾಣದೆ ಜೀವನಪೂರ್ತಿ ಸಂಕಷ್ಟ ಅನುಭವಿಸುವ ಸ್ಥಿತಿಯಲ್ಲಿ ಇರುವವರಿಗೆ ದಯಾ ಮರಣ ■ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಕಾನೂನು ಜಾರಿ

ಬೆಂಗಳೂರು, ಜ.31–ತೀವ್ರ ಅನಾರೋಗ್ಯಕ್ಕೊಳಗಾಗಿ ಯಾವುದೇ ಚಿಕಿತ್ಸೆ ನೀಡಿದರೂ ಗುಣಮುಖರಾಗಲು ಸಾಧ್ಯವೇ ಇಲ್ಲದ ರೋಗಿಗಳಿಗೆ ಘನತೆಯಿಂದ ಸಾಯುವ ಹಕ್ಕನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಸುಪ್ರೀಂ ಕೋರ್ಟ್‌ನ ಆದೇಶದಂತೆ ಕರ್ನಾಟಕದಲ್ಲಿ ಈ ಐತಿಹಾಸಿಕ ಕಾನೂನು ಜಾರಿ ಮಾಡಲಾಗಿದ್ದು, ಈ ಸಂಬಂಧ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಮಾರಣಾಂತಿಕ ಖಾಯಿಲೆಯಿಂದ ಬಳಲುತ್ತಿದ್ದು, ಚೇತರಿಕೆಯೇ ಕಾಣದೆ ಜೀವನಪೂರ್ತಿ ಸಂಕಷ್ಟ ಅನುಭವಿಸುವ ಸ್ಥಿತಿಯಲ್ಲಿ ಇರುವವರಿಗೆ ಈ ಅವಕಾಶ ಕಲ್ಪಿಸಲಾಗಿದೆ. ದಯಾ ಮರಣಕ್ಕೆ ಅವಕಾಶ ನೀಡುವುದನ್ನು ನಿರ್ಧರಿಸಲು ಮೂವರು ವೈದ್ಯರನ್ನು ಒಳಗೊಂಡ ಎರಡು ಬೋರ್ಡ್‌ಗಳ ಸ್ಥಾಪನೆ ಮಾಡುವ ಬಗ್ಗೆಯೂ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ರೋಗಿಯು ಘನತೆಯಿಂದ ಸಾಯುವ ಹಕ್ಕಿನ ಸಂಬಂಧ ಜಿಲ್ಲಾ ಮಟ್ಟದಲ್ಲಿ ತಜ್ಞ ವೈದ್ಯರನ್ನೊಳಗೊಂಡ ಸಮಿತಿ ರಚಿಸಲಾಗುತ್ತದೆ ಈ ಸಮಿತಿಯು ರೋಗಿ ಯಾವುದೇ ಚಿಕಿತ್ಸೆ ನೀಡಿದರೂ ಬದುಕುಳಿಯುವುದಿಲ್ಲ ಎಂದು ದೃಢಪಡಿಸಿದ ನಂತರ ಘನತೆಯಿಂದ ಸಾಯಲು ಅವಕಾಶ ಕೊಡುವ ನಿರ್ಧಾರ ಕೈಗೊಳ್ಳಲಿದೆ. ಒಬ್ಬ ರೋಗಿಯು ಗಂಭೀರ ಕಾಯಿಲೆಯಿಂದ ಅಸ್ವಸ್ಥನಾಗಿ ಚೇತರಿಕೆ ಅಥವಾ ಗುಣಮುಖರಾಗುವ ಆಶಾಭಾವನೆ ಹೊಂದಿಲ್ಲದೆ, ಸುದೀರ್ಘ ಅವಧಿಯಿಂದ ಚಿಕಿತ್ಸೆ ಪಡೆಯುತ್ತಿದ್ದರೆ ಹಾಗೂ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿಲ್ಲದಿದ್ದ ಸಂದರ್ಭದಲ್ಲಿ ನಿಗದಿತ ಕಾರ್ಯವಿಧಾನಕ್ಕೆ ಪೂರಕವಾಗಿ ಸೂಕ್ತ ತೀರ್ಮಾನ ಕೈಗೊಳ್ಳುವುದು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತ್ತು. ಈಗ ರಾಜ್ಯ ಸರ್ಕಾರ ಕೋರ್ಟ್‌ನ ನಿರ್ದೇಶನವನ್ನು ಅನುಷ್ಠಾನಗೊಳಿಸುವ ಸಂಬಂಧ ಈ ಆದೇಶ ಹೊರಡಿಸಿದೆ.

ಚೇತರಿಕೆಯ ಭರವಸೆ ಇಲ್ಲದೇ ಮಾರಕ ರೋಗದಿಂದ ಬಳಲುತ್ತಿರುವವರಿಗೆ ಅಥವಾ ನಿರಂತರ ಕೋಮಾ ಸ್ಥಿತಿಯಲ್ಲಿರುವವರು ಮತ್ತು ಯಾವುದೇ



ಚಿಕಿತ್ಸೆ ನೀಡಿದರೂ ಬದುಕುವುದಿಲ್ಲ ಎಂಬ ರೋಗಿಗಳಿಗೆ ಈ ಆದೇಶದಿಂದ ಅವರು ಘನತೆಯಿಂದ ಸಾವನ್ನಪ್ಪಲು ಅವಕಾಶ ಸಿಕ್ಕಿದಂತಾಗುತ್ತದೆ.

ವೈದ್ಯರ ತಂಡದ ನಿರ್ಧಾರ: ಗಂಭೀರ ಮತ್ತು ಮಾರಣಾಂತಿಕ ಖಾಯಿಲೆಯಿಂದ ಬಳಲುತ್ತಿರುವವರ ಕುಟುಂಬಸ್ಥರ ಮನವಿ ಮೇರೆಗೆ ವೈದ್ಯರ ತಂಡ ಕಾರ್ಯ ನಿರ್ವಹಿಸಬೇಕು. ಇದಕ್ಕಾಗಿ ಪ್ರೈಮರಿ ಹಾಗೂ ಸೆಕೆಂಡರಿ ಎಂಬ ಎರಡು ವೈದ್ಯರ ಬೋರ್ಡ್‌ಗಳನ್ನು ಸ್ಥಾಪಿಸಲಾಗುತ್ತದೆ. ಪ್ರೈಮರಿ ಬೋರ್ಡ್‌ನಲ್ಲಿ ಮೂವರು ವೈದರು ಇರುತ್ತಾರೆ. ಸೆಕೆಂಡರಿ ಬೋರ್ಡ್‌ನಲ್ಲಿ ಸಹ ಮೂವರು ವೈದ್ಯರು ಇರಲಿದ್ದಾರೆ. ಈ ಪೈಕಿ ಒಬ್ಬರು ಸರ್ಕಾರಿ ವೈದ್ಯರು ಇರುತ್ತಾರೆ. ದಯಾಮರಣಕ್ಕೆ ರೋಗಿಯ ಕುಟುಂಬಸ್ಥರು ಮಾಡಿದ ಮನವಿಯನ್ನು ಮೊದಲು ಪ್ರೈಮರಿ ಬೋರ್ಡ್ ಪರಿಶೀಲನೆ ನಡೆಸಿ ವರದಿ ನೀಡುತ್ತದೆ. ನಂತರ ಆ ವರದಿಯನ್ನು ಸೆಕೆಂಡರಿ ಬೋರ್ಡ್ ಪರಿಶೀಲನೆ ನಡೆಸುತ್ತದೆ. ನಂತರ ನ್ಯಾಯಾಲಯಕ್ಕೆ ಆ ವರದಿಯ ಪ್ರತಿ ನೀಡಲಾಗುತ್ತದೆ. ನ್ಯಾಯಾಲಯ ಅನುಮತಿ ನೀಡಿದ ಬಳಿಕ ರೋಗಿಯ ಲೈಫ್ ಸಪೋರ್ಟ್ ಸಿಸ್ಟಮ್ ಅನ್ನು ವೈದ್ಯರು ತೆಗೆಯುತ್ತಾರೆ.



▶ ರೋಗಿಯು ಘನತೆಯಿಂದ ಸಾಯುವ ಹಕ್ಕಿಗಾಗಿ ಸುಪ್ರೀಂಕೋರ್ಟ್‌ನ ನಿರ್ದೇಶನವನ್ನು ಜಾರಿಗೆ ತರಲು ಐತಿಹಾಸಿಕ ಆದೇಶ ಹೊರಡಿಸಿದ್ದೇವೆ. ಚೇತರಿಕೆಯ ಭರವಸೆ ಇಲ್ಲದ ಮಾರಕ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಮುಂದೆ ಜೀವ ಉಳಿಸುವ ಚಿಕಿತ್ಸೆಯಿಂದ ಪ್ರಯೋಜನ ಆಗಲ್ಲ ಎಂಬುದನ್ನು ದೃಢೀಕರಿಸಿದ ನಂತರ ಘನತೆಯಿಂದ ಸಾಯುವ ಅವಕಾಶವನ್ನು ಈ ಕಾನೂನು ನೀಡುತ್ತದೆ. ಇದರಿಂದ ಅನೇಕ ಕುಟುಂಬಗಳು ಮತ್ತು ವ್ಯಕ್ತಿಗಳಿಗೆ ಹೆಚ್ಚಿನ ಅನುಕೂಲವಾಗಲಿದ್ದು, ಗೌರವಯುತವಾದ ಸಾವು ಬಯಸುವವರಿಗೂ ಅನುಕೂಲವಾಗುತ್ತದೆ. ಕರ್ನಾಟಕ ರಾಜ್ಯ ಪ್ರಗತಿಪರ ರಾಜ್ಯವಾಗಿದ್ದು, ಹೆಚ್ಚು ಮತ್ತು ನ್ಯಾಯಯುತ ಸಮಾಜಕ್ಕಾಗಿ ಉದಾರ ಮತ್ತು ಸಮಾನ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ನಾವು ಯಾವಾಗಲೂ ಮುಂಚೂಣಿಯಲ್ಲಿದ್ದೇವೆ.
–ದಿನೇಶ್ ಗುಂಡೂರಾವ್,
ಆರೋಗ್ಯ ಸಚಿವರು, ಎಕ್ಸ್‌ಪೋಸ್ಟ್‌ನಲ್ಲಿ

ಈ ಸಾರಿಯಾದರೂ ರಾಜ್ಯಕ್ಕೆ ಸೂಕ್ತ ಅನುದಾನ ಕೊಡಿ

ನಿರ್ಮಲಾ ಸೀತಾರಾಮನ್ ಅವರಲ್ಲಿ ಮನವಿ



ಬೆಂಗಳೂರು, ಜ.31(ಕೆಎಂಶಿ)– ಕರ್ನಾಟಕ ರಾಜ್ಯಕ್ಕೆ ಆಗುತ್ತಿರುವ ಸರಣಿ ಅನ್ಯಾಯಗಳನ್ನು 2025–26ನೇ ಸಾಲಿನ ಮುಂಗಡ ಪತ್ರದಲ್ಲಾದರೂ ಸರಿಪಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದ್ದಾರೆ. ಈ ಸಂಬಂಧ ಸುದೀರ್ಘ ಪತ್ರ ಬರೆದಿರುವ ಅವರು, ಈ ಬಾರಿಯ ಮುಂಗಡ ಪತ್ರದಲ್ಲಿ ರಾಜ್ಯಕ್ಕೆ ಕೆಲವು ಕಾರ್ಯಕ್ರಮಗಳು ಮತ್ತು ಅನುದಾನ ನೀಡುವಂತೆ ಕೋರಿದ್ದಾರೆ. ■6ನೇ ಪುಟಕ್ಕೆ

ಭಾರತ ಶೀಘ್ರದಲ್ಲೇ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ದೇಶ

ಸಂಸತ್ ಬಜೆಟ್ ಅಧಿವೇಶನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು

ನವದೆಹಲಿ,ಜ.31–ಶೀಘ್ರದಲ್ಲೇ ಭಾರತ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಹೆಚ್ಚಿಸಲು ಸರ್ಕಾರವು ಪ್ರಮುಖ ನಿರ್ಧಾರಗಳನ್ನು ತ್ವರಿತಗತಿಯಲ್ಲಿ ಜಾರಿಗೆ ತರುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

ಶುಕ್ರವಾರ ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗಿದ್ದು, ಉಭಯ ಸದನಗಳ ಜಂಟಿ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದ ಅವರು, ಸರ್ಕಾರವು ದೇಶದಲ್ಲಿ ಮಹಿಳೆಯರ ನೇತೃತ್ವದ ಅಭಿವೃದ್ಧಿಯಲ್ಲಿ ನಂಬಿಕೆ ಇಡುತ್ತದೆ. ಸರ್ಕಾರವು 3 ಕೋಟಿ 'ಲಖ್ಪತಿ ದೀದಿ'ಗಳನ್ನು ಹೊಂದುವ


ರಾಷ್ಟ್ರಪತಿ ದ್ರೌಪದಿ ಮುರ್ಮು

ಗುರಿಯನ್ನು ಹೊಂದಿದೆ. ಸ್ವಂತ ಮನೆ ಹೊಂದುವ ಮಧ್ಯಮ ವರ್ಗದ ಕನಸನ್ನು ನನಸಾಗಿಸಲು ಬದ್ಧವಾಗಿದೆ. ಸರ್ಕಾರವು ಯುವಕರ ಶಿಕ್ಷಣ ಮತ್ತು ಅವರಿಗೆ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೇಲೆ ವಿಶೇಷ ಗಮನ ಹರಿಸಿದೆ ಎಂದರು. ಭಾರತದ ಮೆಟ್ರೋ ರೈಲು ಜಾಲವು ಈಗ 1,000 ಕಿಲೋ ಮೀಟರ್ ಮೈಲಿಗಲ್ಲನ್ನು ದಾಟಿದೆ. ಭಾರತವು ವಿಶ್ವದ ಮೂರನೇ ಅತಿದೊಡ್ಡ ಮೆಟ್ರೋ ಜಾಲವನ್ನು ಹೊಂದಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಅದರಲ್ಲಿ ಹಲವು ವಿಷಯಗಳನ್ನು ಅವರು ಪ್ರಸ್ತಾಪಿಸಿದ್ದಾರೆ. ಕೇಂದ್ರ ■6ನೇ ಪುಟಕ್ಕೆ

ಯಡಿಯೂರಪ್ಪ ಬಿಟ್ಟರೆ ರಾಜ್ಯದಲ್ಲಿ ಬಿಜೆಪಿಯೇ ಇಲ್ಲ ಎಂಬ ಕಾಲ ಹೋಯ್ತು!

●ಮತ್ತೊಮ್ಮೆ ಸೆಡ್ಡು ಹೊಡೆದ ಬಸನಗೌಡ ಪಾಟೀಲ್ ಯತ್ನಾಳ್ ●ಕುಮಾರ್ ಬಂಗಾರಪ್ಪ ನಿವಾಸದಲ್ಲಿ ಪ್ರತ್ಯೇಕ ಸಭೆ ●ರಾಜ್ಯಾಧ್ಯಕ್ಷ ಸ್ಥಾನಕ್ಕೆ ತಮ್ಮದೇ ಬಣದ ಪ್ರಬಲ ಅಭ್ಯರ್ಥಿ ಕಣಕ್ಕಿಳಿಸಲು ನಿರ್ಧಾರ

ಬೆಂಗಳೂರು, ಜ.31– ಯಡಿಯೂರಪ್ಪ ಬಿಟ್ಟರೆ ರಾಜ್ಯದಲ್ಲಿ ಬಿಜೆಪಿಯೇ ಇಲ್ಲ ಎಂಬ ವಾತಾವರಣ ಸೃಷ್ಟಿ ಮಾಡಿಬಿಟ್ಟಿದ್ದರು. ಆದರೆ ಈಗಿನ ಸ್ಥಿತಿ ಹಾಗಿಲ್ಲ. ಯಡಿಯೂರಪ್ಪ ಅವರ ಕುಟುಂಬ ಇಲ್ಲದಿದ್ದರೂ ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸುವ ಶಕ್ತಿ ನಮಗಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಯಡಿಯೂರಪ್ಪ ಕುಟುಂಬದ ವಿರುದ್ಧ ತೊಡೆತಟ್ಟಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರ ಚುನಾವಣೆಯ ಹಿನ್ನೆಲೆಯಲ್ಲಿ ಬಿ.ವೈ.ವಿಜಯೇಂದ್ರ ಹಾಗೂ ಬಸನಗೌಡ ಪಾಟೀಲ್ ಯತ್ನಾಳ್ ಬಣಗಳ ನಡುವೆ ಜಿದ್ದಾಜಿದ್ದಿ ಜೋರಾಗಿದೆ. ರಾಜ್ಯಾಧ್ಯಕ್ಷರ ಚುನಾವಣೆಗೆ ಯತ್ನಾಳ್ ಬಣದಿಂದ ಪ್ರಬಲ ಅಭ್ಯರ್ಥಿ ಕಣಕ್ಕಿಳಿಸಲು ಭರ್ಜರಿ ತಯಾರಿ ನಡೆದಿದ್ದು, ಇಂದು ಯತ್ನಾಳ್ ಬಣ ಮಾಜಿ ಸಚಿವ ಕುಮಾರ್


ಯತ್ನಾಳ್

ಬಂಗಾರಪ್ಪ ಅವರ ನಿವಾಸದಲ್ಲಿ ಸಭೆ ನಡೆಸಿದೆ. ಈ ಸಭೆಯಲ್ಲಿ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ, ಬಿ.ಪಿ.ಹರೀಶ್ ಸೇರಿದಂತೆ ಬಿಜೆಪಿಯ ಬಂಡಾಯ ನಾಯಕರು ಹಾಜರಾಗಿದ್ದರು.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಯತ್ನಾಳ್, ದೆಹಲಿಯಲ್ಲೇ ರಾಜ್ಯಾಧ್ಯಕ್ಷರ ಸ್ಥಾನಕ್ಕೆ ನಮ್ಮ ಬಣದ ಅಭ್ಯರ್ಥಿ ಆಯ್ಕೆ ನಡೆಯಲಿದೆ ಎಂದರು. ಯಡಿಯೂರಪ್ಪ ಅವರನ್ನು ಬಿಟ್ಟರೆ ಬಿಜೆಪಿ ಉಳಿಯಲ್ಲ ಅನ್ನೋ ಕಾಲ ಹೋಯ್ತು. ಯಡಿಯೂರಪ್ಪ ಅವರು ಇಲ್ಲದಿದ್ದರೂ ಬಿಜೆಪಿ ನಡೆಯುತ್ತೆ. ಯಡಿಯೂರಪ್ಪ ಮತ್ತು ಅವರ ಮಗನನ್ನು ಇಟ್ಟುಕೊಂಡರೆ ರಾಜ್ಯದಲ್ಲಿ ಬಿಜೆಪಿ ಸಮಾಧಿಯಾಗುತ್ತದೆ ಎಂದರು. ಈಗಿರುವ ಹಾಲಿ ರಾಜ್ಯಾಧ್ಯಕ್ಷರು ಉದ್ಧಟತನ ■6ನೇ ಪುಟಕ್ಕೆ

ಈ ಸಾಲಿನ ಐತಿಹಾಸಿಕ ಸುತ್ತೂರು ಜಾತ್ರೆಗೆ ಅದ್ದೂರಿ ತೆರೆ

ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿ; ಮಹತ್ವದ ಯೋಜನೆಗೆ ಚಾಲನೆ

ಸುತ್ತೂರು, ಜ.31(ಎಂಟಿವೈ)– ಹಳೆ ಮೈಸೂರು ಭಾಗದ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿರುವ ನಂಜನಗೂಡು ತಾಲೂಕಿನ ಸುತ್ತೂರು ಮಠದ ವತಿಯಿಂದ ಜ.26ರಿಂದ ಆರಂಭವಾಗಿದ್ದ ಆರು ದಿನಗಳ ಜಗದ್ಗುರು ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ ಶುಕ್ರವಾರ ಅದ್ದೂರಿಯಾಗಿ ತೆರೆ ಕಂಡಿತು.

ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯ ಸಾನ್ನಿಧ್ಯದಲ್ಲಿ ನಡೆದ ಜಾತ್ರಾ ಮಹೋತ್ಸವದಲ್ಲಿ ವಿವಿಧ ಮಠಗಳ ಮಠಾಧೀಶರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿಗಳು, ಕೇಂದ್ರ ಹಾಗೂ ರಾಜ್ಯ ಸಚಿವರು, ನೆರೆಯ ರಾಜ್ಯಗಳ ಉದ್ಯಮಿಗಳು, ರಾಜಕೀಯ ಮುಖಂಡರು ಸೇರಿದಂತೆ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡು ಜಾತ್ರಾ ಮಹೋತ್ಸವದ ವಿವಿಧ ಕಾರ್ಯಕ್ರಮಗಳನ್ನು ವೀಕ್ಷಿಸಿದ್ದರು. ಜಾತ್ರೆ ಅಂಗವಾಗಿ



ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಕೃಷಿ ಮೇಳ, ವಸ್ತುಪ್ರದರ್ಶನ, ದೇಸಿ ಆಟ, ಕುಸ್ತಿ, ಭಜನಾ ಮೇಳ, ಕ್ರೀಡೆ, ಅನ್ನ ದಾಸೋಹ ಸೇರಿದಂತೆ ವಿಭಿನ್ನ ಕಾರ್ಯಕ್ರಮಗಳು ಜರುಗಿದ್ದು, 6 ದಿನವೂ ನಡೆದ ವೈಭವದ ಕಾರ್ಯಕ್ರಮಕ್ಕೆ ರಾಜ್ಯ, ಹೊರ ರಾಜ್ಯದ ಲಕ್ಷಾಂತರ ಜನರು ಜಾತ್ರೆಯ ವೈಭವ ಕಣ್ತುಂಬಿಕೊಂಡರು.

ಜ.27ರಂದು ಸಾಮೂಹಿಕ ವಿವಾಹ, ಹಾಲ್ಹರವಿ ಉತ್ಸವ, 28ರಂದು ರಥೋತ್ಸವ, 29ರಂದು ಮಹದೇಶ್ವರ ಕೊಂಡೋತ್ಸವ ಹಾಗೂ ಲಕ್ಷದೀಪೋತ್ಸವ, 30ರಂದು ತೆಪ್ಪೋತ್ಸವ, 31ರಂದು ಅನ್ನ ಬ್ರಹ್ಮೋತ್ಸವ ಸೇರಿದಂತೆ ಹಲವು ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು. ಗ್ರಾಮೀಣ ಕಲೆಗಳಾದ ಸೋಬಾನೆ ಪದ ಹಾಗೂ ರಂಗೋಲಿ ಸ್ಪರ್ಧೆ, ರಾಜ್ಯ ಮಟ್ಟದ ಭಜನಾ ಮತ್ತು ಏಕತಾರಿ ಸ್ಪರ್ಧೆ ಒಂದೆಡೆಯಾದರೆ, ವಸ್ತುಪ್ರದರ್ಶನದಲ್ಲಿ ಕೈಗಾರಿಕೋತ್ಪನ್ನಗಳು, ■6ನೇ ಪುಟಕ್ಕೆ

ಸಂವಿಧಾನ–ಶರಣರ ವಿಚಾರಗಳಲ್ಲಿ ಸಾಮ್ಯತೆ

ಸುತ್ತೂರು: ಸಂವಿಧಾನ ಹಾಗೂ ಬಸವಾದಿ ಶರಣರ ವಿಚಾರಗಳಲ್ಲಿ ಸಾಮ್ಯತೆ ಇದ್ದು, ಜನರು ಮತ್ತು ಸರ್ಕಾರಗಳು ಅವುಗಳನ್ನು ಪಾಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು,

ಬಸವಣ್ಣನವರ ಆಶಯಗಳೆಲ್ಲಾ ನಮ್ಮ ಸಂವಿಧಾನದಲ್ಲಿ ಅಡಕವಾಗಿವೆ. ಇದನ್ನು ಇಡೀ ಸಮಾಜ ಅರಿಯಬೇಕು. ಜಾತ್ಯತೀತ ಸಮಾಜ ನಿರ್ಮಾಣ ಸಂವಿಧಾನದ ಮೂಲ ಉದ್ದೇಶ. ಬಸವಾದಿ ಶರಣರ ಆಶಯವೂ ಅದೇ ಆಗಿದೆ. ಇದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಂಡು ಬಸವಣ್ಣನವರ ಆಶಯದಂತೆ ಜಾತಿ, ಧರ್ಮದ ಹೆಸರಿನ ಮನುಷ್ಯ ತಾರತಮ್ಯ ಹಾಗೂ ಮೌಢ್ಯಗಳನ್ನು ತೊರೆಯಬೇಕು ಎಂದು ಕರೆ ನೀಡಿದರು.

ನಮಗೆ ರಾಜಕೀಯ ಸಮಾನತೆ ಸಿಕ್ಕಿದೆಯೇ ಹೊರತು ಆರ್ಥಿಕ ಹಾಗೂ ಸಾಮಾಜಿಕವಾಗಿ ಸಮಾನತೆ ದೊರೆತಿಲ್ಲ. ಇದು ಸಿಗದ ಹೊರತು ಸ್ವಾತಂತ್ರ್ಯದ ಆಶಯ ಪೂರ್ಣಗೊಳ್ಳುವುದಿಲ್ಲ ಎಂಬ ಮಾತನ್ನು ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ಜಾರಿ ಸಭೆಯಲ್ಲೇ ಹೇಳಿದ್ದರು. ಅವರ ಮಾತು ಇಂದಿಗೂ ಸತ್ಯ. ಈಗಲೂ ನಾವು ಜಾತಿ ಕೇಳುವುದನ್ನು ನಿಲ್ಲಿಸಿಲ್ಲ, ಜಾತಿ, ಧರ್ಮದ ಅನಿಷ್ಟ ತಾರತಮ್ಯವನ್ನು ಇವತ್ತಿಗೂ ಕಾಣುತ್ತಿದ್ದೇವೆ ಎಂದು ವಿಷಾದ ವ್ಯಕ್ತಪಡಿಸಿದರು. ನಾನು ವೈಯುಕ್ತಿಕವಾಗಿ ಬಸವಣ್ಣನವರ ಅಪ್ಪಟ ಹಿಂಬಾಲಕ. ■6ನೇ ಪುಟಕ್ಕೆ

ಮೈಕ್ರೋ ಫೈನಾನ್ಸ್‌ಗಳಿಂದ ಸಾಲ ಪಡೆದವರು ಆತ್ಮಹತ್ಯೆ ಮಾಡಿಕೊಳ್ಳಬೇಡಿ;

ಕಿರುಕುಳ ನೀಡಿದರೆ ನಿಮ್ಮ ರಕ್ಷಣೆಗೆ ನಾವಿದ್ದೇವೆ...

ಸುತ್ತೂರು, ಜ.31(ಎಂಟಿವೈ)–ಸಾಲ ವಸೂಲಿ ಹೆಸರಲ್ಲಿ ಸಾಲಗಾರರಿಗೆ ಕಿರುಕುಳ ನೀಡುವ ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲು ಬದ್ಧವಾಗಿರುವುದರಿಂದ, ಸಾಲ ಪಡೆದಿರುವವರು ಆತ್ಮಹತ್ಯೆ ಮಾಡಿಕೊಳ್ಳುವ ಕೆಟ್ಟ ನಿರ್ಧಾರ ಕೈಗೊಳ್ಳಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ನಂಜನಗೂಡು ತಾಲೂಕಿನ ಸುತ್ತೂರು ಹೆಲಿಪ್ಯಾಡ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಹಾವಳಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಈಗಾಗಲೇ ಸುಗ್ರೀವಾಜ್ಞೆ ತರಲಾಗಿದೆ. ಆ ಕಾನೂನು ಜಾರಿಗೆ ಬಂದ ನಂತರ ಆರ್‌ಬಿಐ ನಿಯಮ ಉಲ್ಲಂಘಿಸಿ ಹೆಚ್ಚು ಬಡ್ಡಿ ವಸೂಲು ಮಾಡುವ, ಸಾಲ ಮರುಪಾವತಿಗೆ ಕಿರುಕುಳ ನೀಡುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು. ಸಾಲ ಪಡೆದ ಜನರು ಯಾವುದೇ ಕಾರಣಕ್ಕೂ ಆತಂಕಕ್ಕೊಳಗಾಗಬಾರದು. ಮೈಕ್ರೋ ಫೈನಾನ್ಸ್‌ಗಳ ಹಾವಳಿಯಿಂದ ಆತ್ಮಹತ್ಯೆಯಂತಹ ತಪ್ಪು ನಿರ್ಧಾರಗಳನ್ನು ಕೈಗೊಳ್ಳಬಾರದು. ನಿಮ್ಮ ರಕ್ಷಣೆಗೆ ಸರ್ಕಾರವಿದೆ. ಯಾವ ಸಂಸ್ಥೆಯಾದರೂ ಸಾಲಗಾರರಿಗೆ ಕಿರುಕುಳ ■6ನೇ ಪುಟಕ್ಕೆ

ಮುಡಾ ವಿಷಯದಲ್ಲಿ ಇಡಿ ನನ್ನ ಟಾರ್ಗೆಟ್ ಮಾಡುತ್ತಿದೆ

ಸುತ್ತೂರು,ಜ.31(ಎಂಟಿವೈ)– ಮುಡಾ ಪ್ರಕರಣದಲ್ಲಿ ಇಡಿಯದ್ದು ರಾಜಕೀಯ ಪ್ರೇರಿತ ವರ್ತನೆ. ನನ್ನ ವರ್ಚಸ್ಸಿಗೆ ಧಕ್ಕೆ ಮಾಡುವ ದುರುದ್ದೇಶದಿಂದ ಇಡಿ ನನ್ನನ್ನು ಟಾರ್ಗೆಟ್ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಸುತ್ತೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಡಿ ಬಿಡುಗಡೆ ಮಾಡಿರುವುದು ತನಿಖಾ ವರದಿಯಲ್ಲ. ಆಸ್ತಿ ಜಪ್ತಿ ಮಾಡಿರುವ ವರದಿಯಾಗಿದೆ. ಅದು ರಾಜಕೀಯ ಪ್ರಭಾವಕ್ಕೆ ಒಳಗಾಗಿದೆ. ದುರುದ್ದೇಶದಿಂದ ನನ್ನ ಹೆಸರು ಬಳಸಲಾಗಿದೆ. ಹಣ ವರ್ಗಾವಣೆಯಾಗಿದೆ ಎಂದು ತಪ್ಪು ಮಾಹಿತಿ ನೀಡುವ ಮೂಲಕ ಜನರಲ್ಲಿ ಗೊಂದಲ ಸೃಷ್ಟಿಸುವ ಸಂಚು ನಡೆಯುತ್ತಿದೆ. ನನ್ನ ಇಮೇಜ್‌ಗೆ ಡ್ಯಾಮೇಜ್ ಮಾಡುವ ಉದ್ದೇಶ ಇಡಿ ವರದಿಯಲ್ಲಿ ಅಡಗಿದೆ ಎಂದು ಕಿಡಿಕಾರಿದರು.

ಜಾರಿ ನಿರ್ದೇಶನಾಲಯದ ವರದಿ ರಾಜಕೀಯ ಪ್ರೇರಿತವಾಗಿದೆ. ಮನಿ ಲ್ಯಾಂಡ್ರಿಂಗ್ ಆಗಿರುವ ಬಗ್ಗೆ ಯಾವುದೇ ಸಾಕ್ಷಿಯಿಲ್ಲ. ಆದರೂ ಹಣ ವರ್ಗಾವಣೆಯ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಇದು ಮೇಲ್ನೋಟಕ್ಕೆ ರಾಜಕೀಯ ದುರುದ್ದೇಶ ತೋರ್ಪಡಿಸುತ್ತದೆ ಎಂದರು. ಇಡಿ ವರ್ತನೆ ವಿರುದ್ಧ ಮುಡಾದ ಮಾಜಿ ಆಯುಕ್ತ ನಟೇಶ್ ಹೈಕೋರ್ಟ್ ಮೊರೆ ಹೋಗಿದ್ದರು. ಅದಕ್ಕೆ ಹೈಕೋರ್ಟ್ ಇಡಿಯವರ ಕ್ರಮ ಕಾನೂನು ಬಾಹಿರ ಮತ್ತು ಮನಿಲ್ಯಾಂಡ್ರಿಂಗ್ ಆಗಿಲ್ಲ ಎಂದು ಹೇಳಿದೆ. ನಟೇಶ್ ಅರ್ಜಿಯಲ್ಲಿ, ನನ್ನನ್ನು ವಿಚಾರಣೆಗೆ ಒಳಪಡಿಸಿದ್ದು, ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಟೀಚರ್ : ಕವಿತೆ ಮತ್ತು ಪ್ರಬಂಧದ ನಡುವಿನ ವ್ಯತ್ಯಾಸವೇನು!

ಗುಂಡ : ಗೆಳತಿಯ ಬಾಯಿಂದ ಹೊರಡುವುದು ಕವಿತೆ, ಹೆಂಡತಿಯ ಬಾಯಿಂದ ಹೊಮ್ಮುವುದು ಪ್ರಬಂಧ.

ಟೀಚರ್ ಕಂಗಳು ಜಿನುಗಿದವು, ಗುಂಡನನ್ನು ಕ್ಲಾಸ್ ಮಾನಿಟರ್ ಮಾಡಿದರು!

ಮೈಸೂರು ಮಿತ್ರ

ಶನಿವಾರ, 1 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಾವು ಎಲ್ಲಾ ವಿಷಯದಲ್ಲೂ ವಾದ ಮಾಡಿ ಗೆಲ್ಲೋಕೆ ಆಗಲ್ಲ, ಕೆಲವು ಸಮಯದಲ್ಲಿ ಮೌನವಾಗಿದ್ದು ಬಿಡಬೇಕು. ನಮ್ಮ ಮೌನವೇ ಜಯ ತಂದುಕೊಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.

ನಿಮ್ಮ ಪತ್ರಗಳು

■ ಭೀಮನಕೊಲ್ಲಿ: ಬೋಟ್, ಲೈಫ್ ಜಾಕೆಟ್ ಕಡ್ಡಾಯವಾಗಿ ಧರಿಸಲಿ

ಮಾನ್ಯರೆ,

ಮೈಸೂರಿನಿಂದ ಸುಮಾರು 80 ಕಿ.ಮೀ ದೂರದಲ್ಲಿ ಕಬಿನಿ ಹಿನ್ನೀರಿನ ದಡದಲ್ಲಿರುವ ಭೀಮನಕೊಲ್ಲಿಯ ಮಹದೇಶ್ವರ ಜಾತ್ರೆಯು ಫೆಬ್ರವರಿ 10 ರಿಂದ 12 ರವರೆಗೆ ನಡೆಯಲಿದೆ. ಈ ಜಾತ್ರೆಗೆ ಮೈಸೂರು ಅಲ್ಲದೆ ನೆರೆಯ ಚಾಮರಾಜನಗರ ಜಿಲ್ಲೆ ಹಾಗೂ ಬೇರೆ ಊರುಗಳಿಂದಲೂ ಜನರು ಭಾಗವಹಿಸುತ್ತಾರೆ. ಸುಮಾರು 50 ವರ್ಷಗಳ ಹಿಂದೆ ಕಬಿನಿ ಅಣೆಕಟ್ಟೆ ನಿರ್ಮಾಣದ ಕಾರಣ 33 ಹಳ್ಳಿಗಳು ಮುಳುಗಡೆಯಾದಾಗ ಅವರೆಲ್ಲ ಮನೆ ಮಠ ತೊರೆದು ಹಿನ್ನೀರಿನ ಎರಡೂ ಬದಿ ಹೊಸ ಊರುಗಳಲ್ಲಿ ಬದುಕು ಕಂಡು ಕೊಂಡಿದ್ದಾರೆ. ಭೀಮನ ಕೊಲ್ಲಿ ಗ್ರಾಮ ಕೂಡ ಮುಳುಗಡೆಯಾಗಿ ಅವರೆಲ್ಲರೂ ಹಿನ್ನೀರಿನ ಪಶ್ಚಿಮದಲ್ಲಿ ಮಳಲಿ ಎಂಬ ಹೊಸ ಊರನ್ನು ಕಟ್ಟಿಕೊಂಡರು. ಆದರೆ ಆ ಊರಿನ ಭೀಮನಕೊಲ್ಲಿ ಮಹದೇಶ್ವರ ದೇವಸ್ಥಾನವು ಹಿನ್ನೀರಿನಲ್ಲಿ ಮುಳುಗಡೆಯಾಗದೆ ಹಿನ್ನೀರಿನ ಪೂರ್ವದಲ್ಲೇ ಉಳಿದುಕೊಂಡಿತು.

ಇದರಿಂದಾಗಿ ಆ ಊರಿನ ಜನರು ತಮ್ಮದೇ ಊರಿನ ದೇವಸ್ಥಾನಕ್ಕೆ ಬರಬೇಕಾದರೆ ಒಂದೋ ತಮ್ಮ ಊರಿನ ಹಿಂಭಾಗದಲ್ಲಿರುವ ಕಬಿನಿ ಹಿನ್ನೀರನ್ನು ದಾಟಿ ಬರಬೇಕು. ಆದರೆ ಸುಮಾರು 1.5 ರಿಂದ 2 ಕಿ.ಮೀ ಅಗಲದ ಈ ಹೊಳೆಯನ್ನು ದಾಟಿ ಬರಲು ಸಾಧ್ಯವಿಲ್ಲದ ಕಾರಣ ಅವರು ಕೇರಳದ ಮಾನಂದವಾಡಿ ರಸ್ತೆಯಲ್ಲಿರುವ ತಮ್ಮ ಊರಿನಿಂದ ಅಂತರಸಂತೆ, ಹ್ಯಾಂಡ್‌ಪೋಸ್ಟ್, ಕಬಿನಿ ಡ್ಯಾಮ್, ಕೆಂಚನಹಳ್ಳಿ, ಮೂರ್‌ಬಾಂದ್ ಮೂಲಕ ಸುಮಾರು 60 ಕಿ.ಮೀ. ಸುತ್ತಿ ಬರಬೇಕು! ಈ ಕಾರಣಕ್ಕಾಗಿಯೇ ಈ ಊರಿನ ಜಾತ್ರೆ ಸಂದರ್ಭದಲ್ಲಿ ಮಾತ್ರ ವರ್ಷಕ್ಕೊಮ್ಮೆ ಜಿಲ್ಲಾಡಳಿತದಿಂದ, ಒಳನಾಡು ಜಲಸಾರಿಗೆ ಇಲಾಖೆಯಿಂದ ಜಾತ್ರೆ ನಡೆಯುವ 3 ದಿನಗಳ ಮಟ್ಟಿಗೆ ಯಾಂತ್ರಿಕ ಬೋಟ್ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಇದರಿಂದಾಗಿ, ಮಳಲಿ, ಬೆಳತೂರು ಮುಂತಾದ ಅಕ್ಕ ಪಕ್ಕದ ಊರು ಹಾಗೂ ಹಾಡಿಯ ಜನರು ಈ ದಡದಿಂದ ಆ ದಡಕ್ಕೆ (ಒಂದು ಕಡೆಗೆ 20 ರೂ. ಟಿಕೆಟ್ ಪಡೆದು)ಜಾತ್ರೆಗೆ ಹೋಗುತ್ತಾರೆ. ಆದರೆ ಸುಮಾರು ಹತ್ತಿರ 2 ಕಿ.ಮೀ ಉದ್ದದ ಈ ಹಿನ್ನೀರನ್ನು ಬೋಟ್‌ನಲ್ಲಿ ದಾಟಿಸುವಾಗ ಸಿಬ್ಬಂದಿ ಜನರಿಗೆ ಯಾವುದೇ ಲೈಫ್ ಜಾಕೆಟ್ ಅನ್ನು ನೀಡುವುದಿಲ್ಲ. ಹಾಗೂ ಒಮ್ಮೊಮ್ಮೆ ಬೋಟ್‌ನ ಸಾಮರ್ಥ್ಯಕ್ಕಿಂತಲೂ ಹೆಚ್ಚಿನ ಜನರನ್ನು ಕರೆದುಕೊಂಡು ಹೋಗುತ್ತಾರೆ. ಸುಮಾರು 25–30 ಅಡಿ ನೀರಿನ ಆಳವಿರಬಹುದಾದ ಈ ನೀರಿನ ಬೋಟ್ ಪ್ರಯಾಣದಲ್ಲಿ ಇಂತಹ ಯಾವುದೇ ಮುನ್ನೆಚ್ಚರಿಕೆ ಕ್ರಮ ವಹಿಸದಿರುವುದು ಕಂಡು ಬರುತ್ತದೆ.

ಸುಮಾರು 40–45 ವರ್ಷಗಳ ಹಿಂದೆ ಇದೇ ಪಕ್ಕದ ಬಿರಂಬಳ್ಳಿ ಬಳಿ ಬಿದಿರಿನ ತೆಪ್ಪ ಮುಳುಗಿ 45–50 ಜನರು ಪ್ರಾಣ ತೆತ್ತ ಉದಾಹರಣೆ ಇದೆ.

ಆದ್ದರಿಂದ ಜಿಲ್ಲಾಡಳಿತ ಈ ಬಗ್ಗೆ ಸೂಕ್ತ ಮುಂಜಾಗ್ರತ ಕ್ರಮ ಕೈಗೊಂಡು ಬೋಟ್‌ನಲ್ಲಿ ಸಾಮರ್ಥ್ಯದಷ್ಟೇ ಜನರನ್ನು ಕಡ್ಡಾಯವಾಗಿ ಲೈಫ್ ಜಾಕೆಟ್ ಹಾಕಿಯೇ ಬೋಟ್ ಕಾರ್ಯನಿರ್ವಹಿಸುವಂತೆ ಕ್ರಮ ವಹಿಸಬೇಕು ಹಾಗೂ ದಡದ ಒಂದು ಬದಿ ನುರಿತ ಈಜುಗಾರರನ್ನು ಒಳಗೊಂಡ ರಕ್ಷಣಾ ತಂಡ ಬೋಟ್‌ನಲ್ಲಿ ಸನ್ನದ್ಧರಾಗಿರುವ ವ್ಯವಸ್ಥೆಯಾಗಬೇಕು. ಪೊಲೀಸರನ್ನು ಇಲ್ಲಿ ಕರ್ತವ್ಯಕ್ಕೆ ನಿಯೋಜಿಸಿದ್ದಾರೆ. ಆದರೆ ಅಪಾಯದ ಸಂದರ್ಭದಲ್ಲಿ ಮುಳುಗು ತಜ್ಞರಷ್ಟೆ ರಕ್ಷಣೆ ಮಾಡಲು ಸಾಧ್ಯ. ಆದ್ದರಿಂದ, ಜಿಲ್ಲಾಡಳಿತ ಮತ್ತು ಜಿಲ್ಲಾಧಿಕಾರಿಗಳು ಈ ಬಗ್ಗೆ ಕ್ರಮ ವಹಿಸುವುದು ಅವಶ್ಯಕವಾಗಿದೆ.

–ಬಿ.ಎಂ. ಭ್ರಮರಾಂಭ, ಕನಕದಾಸನಗರ, ಮೈಸೂರು.

■ ನೀರು ಹರಿಸಿ, ಮರ ಉಳಿಸಿ



ಮಾನ್ಯರೆ,

ಈ ರಸ್ತೆ ಮೈಸೂರಿನ ರಾಮಕೃಷ್ಣನಗರ ವೃತ್ತದಿಂದ ರಾಮಕೃಷ್ಣನಗರ ಕಡೆ ಹೋಗುವ ಸುಮಾರು 60 ಅಡಿ ಅಗಲದ ರಸ್ತೆ. ಈ ರಸ್ತೆಯಲ್ಲಿ ಚೆನ್ನಾಗಿ ಬೆಳೆದ ಮರಗಳು ಪಾದಚಾರಿ ರಸ್ತೆಯಲ್ಲಿ ಕಂಗೊಳಿಸುತ್ತಿದೆ. ಇತ್ತೀಚೆಗೆ ಈ ರಸ್ತೆಯ ಎರಡು ಬದಿಯಲ್ಲಿ ಕೂಡ ಸಿಮೆಂಟ್ ಬ್ಲಾಕ್ ಅಳವಡಿಸಿ ಪಾದಚಾರಿಣಿಗೆ ಮೆರಗೂ ಕೊಡಲು ಮಾಡಿರುತ್ತಾರೆ. ಇವರ ತಲೆಯಲ್ಲಿದೇನಿದೆಯೋ ತಿಳಿಯದು? ಮರದ ಬುಡಕ್ಕೆ ಸಿಮೆಂಟ್ ಹಾಕಿ ಆ ಮರಕ್ಕೆ ಒಂದು ತೊಟ್ಟು ನೀರು ಹೋಗದಂತೆ ಮುಚ್ಚಿರುವುದು ದುರದೃಷ್ಟಕರ. ಅತೀವ ದುಃಖದ ವಿಷಯವೆಂದರೆ ಈ ರಸ್ತೆಯಲ್ಲಿರುವ ದೊಡ್ಡ ಮನುಷ್ಯರಿಗೂ ಅದರ ಕಾಳಜಿ ಇಲ್ಲ ಜೊತೆಗೆ ಯೋಗ್ಯತೆ ಇಲ್ಲದ ಸ್ವಾರ್ಥ ಗುತ್ತಿಗೆದಾರರಿಗೆ ಕೊಟ್ಟರೆ ಇನ್ನೇನು ಬಯಸಲು ಸಾಧ್ಯ. ಸಂಬಂಧಪಟ್ಟ ಅಧಿಕಾರಿಗಳು ಅಥವಾ ಆ ರಸ್ತೆಯಲ್ಲಿ ಇರುವ ಪ್ರಕೃತಿ ಪ್ರಿಯರು ಆದಷ್ಟು ಬೇಗ ಆ ಮರದ ಸುತ್ತ ಹಾಕಿರುವ ಸಿಮೆಂಟ್ ಬ್ಲಾಕನ್ನು ತೆರವುಗೊಳಿಸಿ ಮರಕ್ಕೆ ನೀರು ಹೋಗುವಂತೆ ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ. **–ಚಿರಂತನ, ಮೈಸೂರು**

■ ಶಿಕ್ಷಣ ತಜ್ಞರು ಆಳವಾಗಿ ಅಧ್ಯಯನ ಮಾಡುವಂತಾಗಲಿ

ಮಾನ್ಯರೆ,

ಈ ಶೈಕ್ಷಣಿಕ ವರ್ಷದಿಂದ ಕೇಂದ್ರ ಶಿಕ್ಷಣ ಸಚಿವಾಲಯದ ಅಧೀನಕ್ಕೆ ಒಳಪಡುವ ಶಾಲೆಗಳಲ್ಲಿ 5 ಮತ್ತು 8ನೇ ತರಗತಿಯ ಕಲಿಕಾ ಸಾಮರ್ಥ್ಯ ಇಲ್ಲದ ವಿದ್ಯಾರ್ಥಿಗಳನ್ನು ಫೇಲ್ ಮಾಡಬಹುದು ಎಂದು ಸುತ್ತೋಲೆ ಹೊರಡಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಒಂದು ವೇಳೆ ಫೇಲ್ ಆದ ಎಳೆ ವಯಸ್ಸಿನ ಮಕ್ಕಳಲ್ಲಿ ಕೀಳಿರಿಮೆ ಉಂಟಾಗಿ ಆ ಮಕ್ಕಳು ಆತ್ಮಹತ್ಯೆಯಂತಹ ಕಠಿಣ ತೀರ್ಮಾನ ತೆಗೆದುಕೊಳ್ಳಬಹುದು. ಅವರ ಪೋಷಕರು ಶಾಲೆ ಬಿಡಿಸಿ ತಮ್ಮ ವ್ಯವಸಾಯಕ್ಕೋ, ತಮ್ಮ ವ್ಯಾಪಾರಕ್ಕೋ ಅಥವಾ ಕೂಲಿ ಕೆಲಸಕ್ಕೆ ಹಾಕಿಕೊಳ್ಳಬಹುದು. ಇನ್ನು ಹೆಣ್ಣು ಮಕ್ಕಳೇನಾದರೂ ಫೇಲ್ ಆದರಂತೂ ಅವರ ಪೋಷಕರು ನಿನಗೆ ವಿದ್ಯೆ ಹತ್ತುವುದಿಲ್ಲ ಎಂದು ಹೇಳಿ, ಶಾಲೆ ಬಿಡಿಸಿ ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡುವುದರಿಂದ ಸಮಾಜದಲ್ಲಿ ಬಾಲ್ಯ ವಿವಾಹಗಳು ಹೆಚ್ಚಾಗಬಹುದು. ಹಾಗಾಗಿ ಇದೊಂದು ಸಾಮಾಜಿಕ ಪಿಡುಗಾಗಬಹುದು.

ಕಲಿಕಾ ಸಾಮರ್ಥ್ಯ ಕಡಿಮೆ ಇರುವ ಮಕ್ಕಳನ್ನು ಶಿಕ್ಷಕರು ಗುರುತಿಸಿ ಅವರಿಗೆ ವಿಶೇಷ ತರಗತಿಗಳನ್ನು ನಡೆಸಿ ಆ ಮಕ್ಕಳು ಮುಖ್ಯವಾಹಿನಿಗೆ ತರುವ ಕೆಲಸವನ್ನು ಆ ಶಾಲೆಯ ಮುಖ್ಯಸ್ಥರಿಗೆ ವಹಿಸಬೇಕು. ಇಂತಹ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿಯಲು ಕಾರಣವೇನು? ಎಂಬುದನ್ನು ಶಾಲಾ ಶಿಕ್ಷಕರು ಮೊದಲು ಅರಿಯಬೇಕು. ಇದರ ಬಗ್ಗೆ ಶಿಕ್ಷಣ ತಜ್ಞರು ಆಳವಾಗಿ ಅಧ್ಯಯನ ಮಾಡುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಒಳ್ಳೆಯ ಅಭ್ಯಾಸ ಒಳ್ಳೆಯದೇ...

ನಮ್ಮ ಜೀವನದಲ್ಲಿ ನಾವು ಕೆಲವು ಅಭ್ಯಾಸಗಳನ್ನು ಬೆಳೆಸಿಕೊಂಡಿರುತ್ತೇವೆ. ಅದರಲ್ಲಿ ಕೆಲವು ಕೆಟ್ಟವು ಹಾಗೂ ಮತ್ತೆ ಕೆಲವು ಒಳ್ಳೆಯವು. ಒಳ್ಳೆಯ ಅಭ್ಯಾಸಗಳು ನಮಗೆ ವಂಶ ಪಾರಂಪರ್ಯವಾಗಿ ಬಂದಿರಬಹುದು ಅಥವಾ ನಾವೇ ಪರಿಸ್ಥಿತಿಗೆ ಅನುಗುಣವಾಗಿ ಕೆಲವು ಅಭ್ಯಾಸಗಳನ್ನು ಬೆಳೆಸಿಕೊಳ್ಳಬಹುದು. ಯಾರನ್ನೋ ನೋಡಿದಾಗ ಅಥವಾ ಯಾವುದೋ ಸಂದರ್ಭವನ್ನು ನೋಡಿದಾಗ ಅದು ನಮಗೆ ಮುದ ನೀಡುತ್ತದೆ. ಕೆಲವು ಭಾಷಣಕಾರರ ಮಾತುಗಳನ್ನು ಕೇಳಿದಾಗ, ಕೆಲವು ಸಂಗೀತಗಾರರ ಹಾಡುಗಳನ್ನು ಕೇಳಿದಾಗ ನಾವೂ ಏಕೆ ಹಾಗೆ ಆಗಬಾರದು ಎನಿಸುವುದು ಸಹಜ. ಆದರೆ ಒಮ್ಮೆಲೆ ನಾವು ಹಾಗೆ ಆಗಲು ಸಾಧ್ಯವೇ? ಅದಕ್ಕೆ ಒಂದಷ್ಟು ಶ್ರಮ ಬೇಕಾಗುತ್ತದೆ. ಆ ಶ್ರಮ ವಹಿಸುವ ಹಾಗೆ ಮಾಡುವಾಗ ಅದು ನೀಡುವ ತೊಂದರೆಗಳನ್ನು ಮುಂಚೆಯೇ ಊಹಿಸಿದಲ್ಲಿ ನಾವು ಶ್ರಮ ವಹಿಸಿ ಒಂದಷ್ಟು ಸಾಧನೆ ಮಾಡಬಹುದು. ಆದರೆ ಯಾವುದೇ ಸಾಧನೆ ಶ್ರಮ ಅಪೇಕ್ಷಿಸುತ್ತದೆ ಎಂಬುದು ನಮಗೆ ಗೊತ್ತಿರಬೇಕು. ಕನಿಷ್ಠ ನಾವು ಯಾರ ರೀತಿ ಆಗಬೇಕು ಎಂದು ಶ್ರಮ ವಹಿಸುತ್ತೇವೆಯೋ ಅವರಂತೆ ಆಗದಿದ್ದರೂ ಆ ಹಾದಿಯಲ್ಲಿ ಖಂಡಿತಾ ಒಂದಷ್ಟು ಪ್ರಗತಿ ಸಾಧಿಸಬಹುದು.

ನನ್ನ ಸ್ನೇಹಿತರಲ್ಲಿ ಒಬ್ಬರಿದ್ದಾರೆ. ಅವರಿಗೆ ಈಗ 75 ವರ್ಷ. ಅವರು ತಕ್ಕಮಟ್ಟಿಗೆ ಹಾಡುತ್ತಾರೆ. ಭಜನೆ ಅವರಿಗೆ ಬಹಳ ಇಷ್ಟ, ಅವರು ಒಮ್ಮೆ ಯೋಚನೆ ಮಾಡಿದರು. ನಾನೇಕೆ ಕೀಬೋರ್ಡ್ ಕಲಿಯಬಾರದು? ಹಾಗೆ ಕಲಿತರೆ ತನ್ನ ಭಜನಾ ವೇಳೆಯಲ್ಲಿ ಕೀಬೋರ್ಡ್ ಸಹ ನುಡಿಸಿದರೆ ಚೆನ್ನಾಗಿರುತ್ತದೆ ಎಂದು ಎನಿಸಿತು. ಕೆಲವು ಸ್ನೇಹಿತರಲ್ಲಿ ಈ ಬಗ್ಗೆ ಹೇಳಿದಾಗ ಕೆಲವರು ಹಾಸ್ಯ ಮಾಡಿದರು. ಈ ವಯಸ್ಸಿನಲ್ಲಿ ಇದು ಬೇಕೆ? ಆರಾಮವಾಗಿ ಓಡಾಡಿಕೊಂಡು, ಬೇಕಾದ್ದನ್ನು ತಿಂದುಕೊಂಡು ಇರಬಹುದಲ್ವೆ? ಅದೂ ಈ ವಯಸ್ಸಿನಲ್ಲೇ ಇದು ಬೇಕೆ? ಎಂದು ನಿರುತ್ಸಾಹದ ಮಾತಾಡಿದರು.

ಮತ್ತೆ ಕೆಲವರು ಮನಸ್ಸು ಮಾಡಿದರೆ ಯಾವ ವಯಸ್ಸಿನಲ್ಲಿ ಬೇಕಾದರೂ ಕಲಿಯಬಹುದು ಎಂದು ಉತ್ಸಾಹ ತುಂಬಿದರು. ಆ ಮಾತುಗಳು ಇವರಿಗೆ ಪ್ರೇರಣೆ ನೀಡಿತು. ಕಲಿಯಲು ಗುರುವನ್ನು ಹುಡುಕಿದರು. ಅವರಿಗಿಂತ ಅರ್ಧ ವಯಸ್ಸಿನ ಒಬ್ಬರು ಗುರುವಾಗಿ ದೊರಕಿದರು. ಸರಿ, ಶುರುವಾಯ್ತು ಕೀಬೋರ್ಡ್ ಪಾಠ. ಆರಂಭದಲ್ಲಿ ಇತರರಂತೆ ತ್ವರಿತವಾಗಿ ಕಲಿಯಲು ಆಗಲಿಲ್ಲ. ಅದನ್ನು ಅವರು ಮೊದಲೇ ಊಹಿಸಿದ್ದರು. ಆದರೆ ಶ್ರಮ ಬಿಡಲಿಲ್ಲ. ಇತರರು ಎರಡು ಪಾಠ ಕಲಿತಾಗ ಇವರು ಒಂದು ಪಾಠ ಮುಗಿಸುತ್ತಿದ್ದರು. ಆದರೆ ಮನಸ್ಸಿನಲ್ಲಿ ನಾನು ಕಲಿಯಬೇಕು ಎಂಬ ಅಚಲತೆ ಇದ್ದೇ ಇತ್ತು. ಒಂದೆರಡು ವರ್ಷಗಳು ಹೀಗೇ ಕಲಿತರು. ಈಗ ಅವರಿಗೆ ಕೀಬೋರ್ಡ್ ನುಡಿಸಲು ಬರುತ್ತದೆ. ದೊಡ್ಡಮಟ್ಟದಲ್ಲಿ ಅಲ್ಲದಿದ್ದರೂ ತಾವು ಹಾಡುವ ಭಜನೆಗೆ ಪೂರಕವಾಗುವಂತೆ ಅವರು ನುಡಿಸಬಲ್ಲರು. ಈಗ ಅವರಿಗೆ ಒಂದು ರೀತಿಯ ಸಂತೋಷ ಸಿಗುತ್ತಿದೆ. ನಾನು ಕಛೇರಿ ಮಾಡಬೇಕೆಂಬ ಹಂಬಲದವನಲ್ಲ. ನನ್ನ ಪ್ರಯತ್ನ ಸಾರ್ಥಕವಾಯ್ತಲ್ಲ ಎಂಬ ಮನೋಭಾವ. ಈಗ ಅವರು ಮನೆಯಲ್ಲಿ ಒಂದಷ್ಟು ಸಮಯ ತಾವೇ ಹಾಡು ಹೇಳುತ್ತಾ ಕೀಬೋರ್ಡ್ ನುಡಿಸುತ್ತಾರೆ. ಮೊದಲು ಇವರನ್ನು ಉತ್ತೇಜಿಸಿದ್ದ ಸ್ನೇಹಿತರು ಅವರ ಈ ಸಾಧನೆ ಕಂಡು ಸಂತೋಷ ಪಡುತ್ತಾರೆ. ಆಗ ಪರಿಹಾಸ್ಯ ಮಾಡಿದ್ದವರು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಾರೆ.

ಇದೊಂದು ಒಳ್ಳೆಯ ಅಭ್ಯಾಸವಲ್ಲವೇ? ಅವರು ಕಲಿತು ಹತ್ತು ಜನರ ಮುಂದೆ ನುಡಿಸಿದಾಗ ಅವರಿಗೆ ಸಿಕ್ಕ ಮಾನಸಿಕ ಸಂತೋಷವಿದೆಯಲ್ಲಾ, ಅದಕ್ಕೆ ಬೆಲೆ ಕಟ್ಟಲಾಗದು. ಇಂತಹುದನ್ನು ನಾವು ವಯಸ್ಸಿನ ಅಂತರವಿಲ್ಲದೇ ಕಲಿಯಬಹುದು. ಬೇರೆಯವರು ಪ್ರಶಂಸೆಗಿಂತ ನಮಗೇ ಸಿಗುವ ಸಂತೋಷ ಖಂಡಿತಾ ನಮ್ಮ ಬಗ್ಗೆಯೇ ಹೆಮ್ಮೆಪಡುವಂತೆ ಮಾಡುತ್ತದೆ. ಇಂತಹುದನ್ನು ಸಾಧಿಸಲು ಮನಸ್ಸು ಹಾಗೂ ಶ್ರಮ ಎರಡೂ ಬೇಕು. ನಿರಂತರವಾದ ಪ್ರಯತ್ನ ಖಂಡಿತಾ ಸಾಧನೆಗೆ ದಾರಿ ಮಾಡಿಕೊಡುತ್ತದೆ.

ಇದಕ್ಕೆ ತದ್ವಿರುದ್ಧವಾದ ಅಭ್ಯಾಸಗಳನ್ನೂ ಕೆಲವರು ಬೆಳೆಸಿಕೊಳ್ಳುತ್ತಾರೆ. ಅದು ಯಾವುದೇ ಶ್ರಮವಿಲ್ಲದೆ ಕಲಿಯುವಂತಹುದು. ಮದ್ಯಪಾನ, ಧೂಮಪಾನ ಇವುಗಳೆಲ್ಲಾ ಸರಣಿಯಲ್ಲಿ ಬರುವಂತಹುದು. ಆರಂಭದಲ್ಲಿ ಮೋಜಿಗೆಂದು ಕಲಿತದ್ದು ಕ್ರಮೇಣ ಅದರ ದಾಸರಾಗುವಂತೆ ಮಾಡುತ್ತದೆ, ಅದು ಒಳ್ಳೆಯ ಅಭ್ಯಾಸವಲ್ಲ ಎಂದು ತಿಳಿದಿದ್ದರೂ ಅದಕ್ಕೆ ದಾಸರಾಗುತ್ತಾರೆ. ನಮಗೆಲ್ಲಾ ತಿಳಿದಂತೆ ಯಾವುದನ್ನು ನಾವು ದುರಾಭ್ಯಾಸ ಎಂದು ಪರಿಗಣಿಸುತ್ತೇವೋ ಅದು ಖಂಡಿತಾ ನಮ್ಮ ಏಳಿಗೆಗೆ, ನಮ್ಮ ಆರೋಗ್ಯಕ್ಕೆ ಹಾಗೂ ನಮ್ಮ ಸಾಮಾಜಿಕ ಸ್ಥಾನಮಾನಕ್ಕೆ ಪೂರಕವಾಗಿರುವುದಿಲ್ಲ. ಆದ ಕಾರಣ ಆದಷ್ಟೂ ಒಳ್ಳೆಯ ಅಭ್ಯಾಸ ಬೆಳೆಸಿಕೊಳ್ಳಬೇಕು. ನಾವೆಲ್ಲಾ ಕೇಳಿದ ಒಂದು ಕಥೆಯಿದೆ. ಒಬ್ಬ ಅಜ್ಜ ತನ್ನ ಮೊಮ್ಮಗನನ್ನು ದುರಭ್ಯಾಸದಿಂದ ದೂರವಿರಿಸಬೇಕೆಂದು, ಅವನಿಗೆ ನಾನು ನಿನಗೆ ಲಕ್ಷ ರೂಪಾಯಿ ಕೊಡುತ್ತೇನೆ. ನೀನು ನಿನ್ನ ದುರಭ್ಯಾಸ ಬಿಡಬೇಕು ಎನ್ನುತ್ತಾನೆ. ಅದಕ್ಕೆ ಮೊಮ್ಮಗ ಒಪ್ಪುವುದಿಲ್ಲ. ಅವನ ಸ್ನೇಹಿತರು ಕೇಳುತ್ತಾರೆ, ಒಂದು ಲಕ್ಷ ಸುಲಭವಾಗಿ ಬರುವುದನ್ನು ನೀನೇಕೆ ಬೇಡವೆಂದೆ? ಅದಕ್ಕೆ ಅವನ ಉತ್ತರ 'ನನಗೆ ಹಣ ಬೇಕಾಗಿರುವುದು ನನ್ನ ಅಭ್ಯಾಸಕ್ಕಾಗಿ. ಅದನ್ನೇ ಬಿಟ್ಟರೆ ಆ ಹಣವನ್ನು ಯಾವುದಕ್ಕೆ ಖರ್ಚು ಮಾಡುವುದು? ಆದ್ದರಿಂದ ಅದನ್ನು ನಾನು ಬೇಡವೆಂದೆ ಎಂದು. ಹಲವರಿಗೆ ಹಣ ಬೇಕಾಗಿರುವುದು ಬೇಡದ ಅಭ್ಯಾಸಕ್ಕಾಗಿಯೇ. ಯಾವ ಅಭ್ಯಾಸವೇ ಇಲ್ಲವೆಂದರೆ ಖರ್ಚೇ ಇಲ್ಲ. ಆದ್ದರಿಂದ ಆ ಹಣವನ್ನು ನಾನು ಏನು ಮಾಡಲಿ ಎಂಬುದು ಮೊಮ್ಮಗನ ವಾದ. ದುರಭ್ಯಾಸ ಒಳ್ಳೆಯದಲ್ಲ ಎಂದು ಗೊತ್ತಿದ್ದರೂ ಅದರಿಂದ ನಾವು ಹೊರಬರುವ ಮನಸ್ಸು ಮಾಡುವುದಿಲ್ಲ. ಅದರಿಂದ ಹೊರಬರಬೇಕಾದರೆ ದೃಢವಾದ ಮನಸ್ಸು ಬೇಕು.

ಒಳ್ಳೆಯ ಅಭ್ಯಾಸ ಪಾಲನೆ ಕಷ್ಟಕರ. ಅದನ್ನು ಜೀವನಪರ್ಯಂತ ಪಾಲಿಸಬೇಕಾಗುತ್ತದೆ. ನನಗೆ ಒಳ್ಳೆಯವ ಎಂಬ ಹೆಸರಿದೆ, ನನಗೆ ದಾನಿ ಎಂಬ ಹೆಸರಿದೆ ಎಂದರೆ ಅದನ್ನು ಉಳಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಅದಕ್ಕೆ ನಿರಂತರವಾಗಿ ಎಚ್ಚರಿಕೆಯಿಂದ ಶ್ರಮಿಸಬೇಕು. ಹಾಗಿರುವುದರಿಂದ ಖಂಡಿತಾ ಒಳ್ಳೆಯದೆ. ಕೊರೊನಾ ಸಮಯದಲ್ಲಿ ಅನೇಕರು ಬಡವರಿಗೆ, ಬೀದಿಹೋಕರಿಗೆ ಎರಡೂ ಹೊತ್ತು ಆಹಾರ ನೀಡಿದರು. ಅದು ಪ್ರಚಾರಕ್ಕಾಗೆ ಅಲ್ಲ. ಬದಲಾಗಿ ಅದನ್ನು ಅವರು ಸಾಮಾಜಿಕ ಜವಾಬ್ದಾರಿ ಎಂದು ಅರಿತುಕೊಂಡವರು. ಆಹಾರ ಧಾನ್ಯಗಳ ವಿತರಣೆ, ಅಶಕ್ತರಿಗೆ ಆಹಾರ ನೀಡುವುದರಿಂದ ಅವರಿಗೆ ಸಂತೋಷ ಸಿಕ್ಕಿತು. ಅದು ಒಳ್ಳೆಯ ಅಭ್ಯಾಸವೆ. ಕೊರೊನಾ ಸಮಯದಲ್ಲಿ ಮನೆಯಿಂದ ಹೊರಹೋದವರು ಮತ್ತೆ ಮನೆಗೆ ಬರುತ್ತಾರೋ ಇಲ್ಲವೋ? ಅಕಸ್ಮಾತ್ ಬಂದರೆ ಖಾಯಿಲೆಯೊಡನೆ ಬರಬಹುದು ಎಂಬ ಶಂಕೆ ಮನೆಯವರಲ್ಲಿತ್ತು. ಆದರೆ ಅದಕ್ಕಿಂತ ನಾನು ಮಾಡ ಹೊರಟ ಸೇವೆ ದೊಡ್ಡದು ಎಂದು ಭಾವಿಸಿದ ಜನರು ಅನೇಕರಿಗೆ ಸಹಾಯ ಮಾಡಿದರು. ಆ ಸಮಯದಲ್ಲಿ ಬೆಳೆಸಿಕೊಂಡ ಈ ಅಭ್ಯಾಸವನ್ನು ಹಲವರು ಇಂದಿಗೂ ಮುಂದುವರೆಸುತ್ತಿರುವುದನ್ನು ನಾವು ಕಾಣಬಹುದು. ಅಂತಹ ಒಂದು ಸಂಘಟನೆ ಪೀಪಲ್ಸ್ ಫಾರ್ ಪೀಪಲ್ಸ್ ಎಂಬುದು. ಇವರು ಈಗಲೂ ಭಾನುವಾರ ಹಾಗೂ ಮತ್ತಿತರ ದಿನಗಳಲ್ಲಿ ನಗರದ ಕೃಷ್ಣರಾಜೇಂದ್ರ ಆಸ್ಪತ್ರೆ ಮುಂಭಾಗ ಬಡವರಿಗೆ ಊಟ ಹಂಚುತ್ತಾರೆ. ಇದಕ್ಕಾಗಿಯೇ ಒಂದಷ್ಟು ಜನರಿದ್ದಾರೆ. ಅವರು ದೇಣಿಗೆ ಹಾಕಿ ಈ ಕೆಲಸ ಮಾಡುತ್ತಾರೆ. ಅವರು ಪ್ರಚಾರ ಪ್ರಿಯರಲ್ಲ. ಅವರ ಬಗ್ಗೆ, ಆ ಸಂಸ್ಥೆಯ ಬಗ್ಗೆ ಮಾಧ್ಯಮಗಳಲ್ಲಿ ಪ್ರಚಾರವೂ ಆಗುವುದಿಲ್ಲ. ಅದನ್ನು ಅವರು ಬಯಸುವುದೂ ಇಲ್ಲ. ಅವರಿಗೆ ನಾವು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇವೆ ಎಂಬ ಸಮಾಧಾನದ ಮನಸ್ಥಿತಿ. ಇದು ಉತ್ತಮ ಅಭ್ಯಾಸ. ನಮ್ಮ ಸುತ್ತಮುತ್ತ ಇಂತಹವರು ಹಲವರಿರುತ್ತಾರೆ. ಅವರು ಮಕ್ಕಳಿಗೆ ಶಾಲೆ ಆರಂಭವಾಗುವಾಗ ಒಂದಷ್ಟು ಹಣ ಸಂಗ್ರಹಿಸಿ ಅದರಿಂದ ಪಠ್ಯಪುಸ್ತಕಗಳು, ಬರೆಯುವ ನೋಟ್ ಪುಸ್ತಕಗಳನ್ನು ಖರೀದಿಸಿ, ಬಡ ಮಕ್ಕಳಿಗೆ ಉಚಿತವಾಗಿ ನೀಡುತ್ತಾರೆ. ಅದು ಒಂದು ರೀತಿಯ ಸಾರ್ಥಕ ಕಾರ್ಯ.



“ ಕೊರೊನಾ ಸಮಯದಲ್ಲಿ ಮನೆಯಿಂದ ಹೊರಹೋದವರು ಮತ್ತೆ ಮನೆಗೆ ಬರುತ್ತಾರೋ ಇಲ್ಲವೋ? ಅಕಸ್ಮಾತ್ ಬಂದರೆ ಖಾಯಿಲೆಯೊಡನೆ ಬರಬಹುದು ಎಂಬ ಶಂಕೆ ಮನೆಯವರಲ್ಲಿತ್ತು. ಆದರೆ ಅದಕ್ಕಿಂತ ನಾನು ಮಾಡ ಹೊರಟ ಸೇವೆ ದೊಡ್ಡದು ಎಂದು ಭಾವಿಸಿದ ಜನರು ಅನೇಕರಿಗೆ ಸಹಾಯ ಮಾಡಿದರು. ಆ ಸಮಯದಲ್ಲಿ ಬೆಳೆಸಿಕೊಂಡ ಈ ಅಭ್ಯಾಸವನ್ನು ಹಲವರು ಇಂದಿಗೂ ಮುಂದುವರೆಸುತ್ತಿರುವುದನ್ನು ನಾವು ಕಾಣಬಹುದು. ಅಂತಹ ಒಂದು ಸಂಘಟನೆ ಪೀಪಲ್ಸ್ ಫಾರ್ ಪೀಪಲ್ಸ್ ಎಂಬುದು. ಇವರು ಈಗಲೂ ಭಾನುವಾರ ಹಾಗೂ ಮತ್ತಿತರ ದಿನಗಳಲ್ಲಿ ನಗರದ ಕೃಷ್ಣರಾಜೇಂದ್ರ ಆಸ್ಪತ್ರೆ ಮುಂಭಾಗ ಬಡವರಿಗೆ ಊಟ ಹಂಚುತ್ತಾರೆ. ಇದಕ್ಕಾಗಿಯೇ ಒಂದಷ್ಟು ಜನರಿದ್ದಾರೆ. ಅವರು ದೇಣಿಗೆ ಹಾಕಿ ಈ ಕೆಲಸ ಮಾಡುತ್ತಾರೆ. ಅವರು ಪ್ರಚಾರ ಪ್ರಿಯರಲ್ಲ. ಅವರ ಬಗ್ಗೆ, ಆ ಸಂಸ್ಥೆಯ ಬಗ್ಗೆ ಮಾಧ್ಯಮಗಳಲ್ಲಿ ಪ್ರಚಾರವೂ ಆಗುವುದಿಲ್ಲ. ಅದನ್ನು ಅವರು ಬಯಸುವುದೂ ಇಲ್ಲ.

ಬೆಳಗಾವಿ, ಬೆಂಗಳೂರು ಸೇರಿದಂತೆ ಹಲವೆಡೆ ಲೋಕಾಯುಕ್ತ ದಾಳಿ

ಬೆಂಗಳೂರು, ಜ.31– ಆದಾಯಕ್ಕಿಂತ ಅಧಿಕ ಆಸ್ತಿ ಗಳಿಸಿದ್ದ ಹಿನ್ನೆಲೆಯಲ್ಲಿ ಬೆಳಗಾವಿ, ಬಾಗಲಕೋಟೆ ಹಾಗೂ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬೆಳ್ಳಂಬೆಳಗ್ಗೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.

ಬೆಳಗಾವಿಯಲ್ಲಿ ಹಾಗೂ ಬೆಂಗಳೂರಿನ ಎರಡು ಸ್ಥಳಗಳಲ್ಲಿ ದಾಳಿ ನಡೆಸಿರುವ ಪೊಲೀಸರು ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ. ಬಾಗಲಕೋಟೆಯ ವಿದ್ಯಾಗಿರಿಯಲ್ಲಿರುವ ಹೊಲಗೇರಿ ಗ್ರಾಮ ಪಂಚಾಯಿತಿ ಪಿಡಿಒ ಹಿರೇಮಠ ನಿವಾಸದ ಮೇಲೆ ದಾಳಿ ನಡೆಸಲಾಗಿದೆ. ಐಷಾರಾಮಿ ಮನೆ, ಅಪಾರ ಪ್ರಮಾಣದ ಆಸ್ತಿ ಹೊಂದಿರುವ ಆರೋಪದ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ಹಿರೇಮಠ ನಿವಾಸದ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.

ರಾಯಚೂರಿನಲ್ಲಿ ಜಿಲ್ಲಾ ಪಂಚಾಯತಿ ಲೆಕ್ಕಪತ್ರ ಸಹಾಯಕ ಅಧಿಕಾರಿ ನರಸಿಂಗರಾವ್ ಅವರ ಮನೆಯ ಮೇಲೆ ದಾಳಿ ನಡೆಸಲಾಗಿದೆ. ರಾಯಚೂರು ನಗರದ ಜವಾರ್ ಕಾಲೋನಿಯಲ್ಲಿರುವ ಅವರ ಮನೆ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ.

ಬೆಳಗಾವಿಯ ಪ್ರಭಾರಿ ಸಬ್ ರಿಜಿಸ್ಟ್ರಾರ್ ಸಚಿನ್ ಮಂಡೇದ್ ಅವರ ಬೆಳಗಾವಿ ನಗರದ ಆನಗೋಳದಲ್ಲಿರುವ ನಿವಾಸದ ಮೇಲೆ ದಾಳಿ ನಡೆಸಲಾಗಿದೆ. ಮನೆ, ಕಚೇರಿ ಸೇರಿ ಮೂರು ಕಡೆಗಳಲ್ಲಿ ದಾಳಿ ನಡೆಸಲಾಗಿದೆ.

ರಾಯಬಾಗ ತಾಲೂಕಿನ ಹಾರೂಗೇರಿ ವೆಟರ್ನರಿ ಇನ್ಸ್ ಪೆಕ್ಟರ್ ಸಂಜಯ್ ಮನೆ ಮೇಲೆ ದಾಳಿ ಮಾಡಲಾಗಿದೆ. ಸಂಜಯ್ ನಿವಾಸದ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ. ಚಿತ್ರದುರ್ಗದಲ್ಲೂ ಸಹ ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದು ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ.

ಪೂಂಚ್ ಎಲ್‌ಒಸಿಯಲ್ಲಿ ಒಳನುಸುಳಲು ಯತ್ನ
ಇಬ್ಬರು ಉಗ್ರರ ಹತ್ಯೆ; ಶಸ್ತ್ರಾಸ್ತ್ರ ವಶ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಖಾರಿ ಕರ್ಮಾರಾ ಪ್ರದೇಶದಲ್ಲಿ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಭಾರಿ ಶಸ್ತ್ರಸಜ್ಜಿತ ಉಗ್ರರ ಗುಂಪೊಂದು ಒಳನುಸುಳಲು ಯತ್ನಿಸುವಾಗ ಭದ್ರತಾ ಪಡೆ ಅದನ್ನು ವಿಫಲಗೊಳಿಸಿದೆ. ಬಳಿಕ ಇಬ್ಬರು ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಸೇನೆ ಶುಕ್ರವಾರ ತಿಳಿಸಿದೆ. ಎಲ್‌ಒಸಿ ಉದ್ದಕ್ಕೂ ನಿಯೋಜಿಸಲಾದ ಭದ್ರತಾ ಪಡೆ ಸಿಬ್ಬಂದಿ ಗುರುವಾರ ಈ ಪ್ರದೇಶದಲ್ಲಿ ಉಗ್ರರ ಅನುಮಾನಾಸ್ಪದ ಚಲನವಲನವನ್ನು ಗಮನಿಸಿದೆ. ಉಗ್ರರು ಒಳನುಸುಳಲು ಯತ್ನಿಸುತ್ತಿದ್ದಂತೆ ಯೋಧರು ಗುಂಡಿನ ದಾಳಿ ನಡೆಸಿದ್ದು, ಉಗ್ರರು ಪ್ರತಿದಾಳಿ ನಡೆಸಿದ್ದಾರೆ ಎಂದು ಸೇನಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ರಾತ್ರಿಯಿಡೀ ಗುಂಡಿನ ಚಕಮಕಿ ನಡೆದಿದೆ. ಕಾರ್ಯಾಚರಣೆ ವೇಳೆ ಇಬ್ಬರು ಉಗ್ರರು ಹತರಾಗಿದ್ದಾರೆ. ಈ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ನಂತರ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆಯು ಇನ್ನೂ ಪ್ರಗತಿಯಲ್ಲಿದೆ. ಈ ಪ್ರದೇಶದ ಸುತ್ತಲೂ ಕಾರ್ಡನ್ ಅನ್ನು ಬಿಗಿಗೊಳಿಸಲು ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿ ಹೇಳಿದರು.

ಯದುವೀರ್ ಬಿಜೆಪಿ ಸಂಸದರಾದ ಕಾರಣ ಸಿದ್ದರಾಮಯ್ಯ ಟಾರ್ಗೆಟ್

ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಆರೋಪ



ನಾರಾಯಣಸ್ವಾಮಿ

ಮೈಸೂರು, ಜ.31(ಬಿಎಲ್‌ಯು)– ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬಿಜೆಪಿ ಸಂಸದರಾಗಿರುವ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಟಾರ್ಗೆಟ್ ಮಾಡಿ ಬೆಂಗಳೂರು ಅರಮನೆಯನ್ನು ಸುಗ್ರೀವಾಜ್ಞೆ ಮೂಲಕ ವಶಕ್ಕೆ ಪಡೆಯುತ್ತಿದ್ದಾರೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ವೇಳೆ ಯದುವೀರ್ ಕಾಂಗ್ರೆಸ್ ಸಂಸದರಾಗಿದ್ದರೆ ಸಿದ್ದರಾಮಯ್ಯ ಹೀಗೆ ಟಾರ್ಗೆಟ್ ಮಾಡುತ್ತಿರಲಿಲ್ಲ ಎಂದು ಹೇಳಿದರು.

ಟಿಡಿಆರ್ ನೀಡಲು ಬಿಬಿಎಂಪಿ ಕೂಡ ಸಮ್ಮತಿಸಿತ್ತು. ಈ ಹಿನ್ನೆಲೆಯಲ್ಲಿ ಬೆಂಗಳೂರು ಅರಮನೆಯ ಸ್ವಲ್ಪ ಭಾಗದಲ್ಲಿ ಕಾಂಪೌಂಡ್ ಕೂಡ ನಿರ್ಮಾಣ ಮಾಡಿತ್ತು. ಆದರೆ ಈಗ ಟಿಡಿಆರ್ ನೀಡುವ ಬದಲು ಅರಮನೆಯ ಸಂಪೂರ್ಣ ಜಾಗವನ್ನು ವಶಕ್ಕೆ ಪಡೆಯಲು ಮುಂದಾಗಿದ್ದಾರೆ ಎಂದು ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್‌ನವರಿಗೆ ಸುಗ್ರೀವಾಜ್ಞೆ ಯಾವ ಲೆಕ್ಕ ಎಂದು ಪ್ರಶ್ನಿಸಿದ ಛಲವಾದಿ ನಾರಾಯಣ ಸ್ವಾಮಿ, ಮೈಕ್ರೊ ಫೈನಾನ್ಸ್ ವಿರುದ್ಧ ಕ್ರಮ ಕೈಗೊಳ್ಳಲು ಸುಗ್ರೀವಾಜ್ಞೆ ಹೊರಡಿಸಿದ್ದು ಸರಿಯಾದ ಕ್ರಮ. ಆದರೆ ಬೆಂಗಳೂರು ಅರಮನೆ ಸ್ವಾಧೀನಕ್ಕೆ ಸುಗ್ರೀವಾಜ್ಞೆ ಹೊರಡಿಸಿರುವುದು ರಾಜಕೀಯ ಪ್ರೇರಿತ ಎಂದು ಆಪಾದಿಸಿದರು.

ಮೊದಲ ಬಾರಿಗೆ ಮೀಸಲಾತಿ ನೀಡಿ ಮಾದರಿಯಾದ ಮೈಸೂರು ರಾಜವಂಶಸ್ಥರು ಈ ಭಾಗದ ಜನರು ನೆಮ್ಮದಿಯಿಂದ ಬದುಕಲು ಕಾರಣರಾಗಿದ್ದಾರೆ. ಆದರೆ ಇದನ್ನು ನೆನೆಯದ ಸಿದ್ದರಾಮಯ್ಯ ರಾಜಕೀಯ ಕಾರಣಕ್ಕೆ ಮೈಸೂರು ರಾಜವಂಶಸ್ಥರ ಮೇಲೆ ಮುಗಿಬೀಳುತ್ತಿದ್ದಾರೆ ಎಂದು ಹೇಳಿದರು.

ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಿಸಲು ಮೈಸೂರು ರಾಜವಂಶಸ್ಥರು ತಮ್ಮಲ್ಲಿದ್ದ ಚಿನ್ನಾಭರಣ ಮಾರಾಟ ಮಾಡಿರುವುದು ಇತಿಹಾಸ. ಆದರೆ ಟಿಪ್ಪು ಸುಲ್ತಾನ್ ಕೆಆರ್ ಎಸ್ ನಿರ್ಮಾಣ ಮಾಡಿದ್ದಾನೆ ಎಂದು ಕಾಂಗ್ರೆಸ್‌ನವರು ಹೇಳುತ್ತಾರೆ ಎಂದು ಕಿಡಿಕಾರಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಅಭಿವೃದ್ಧಿ ಎಂಬುದು ಇವರಿಗೆ ಗೊತ್ತೆ ಇಲ್ಲ. ಕೇವಲ ಐದು ಗ್ಯಾರಂಟಿ ನೀಡಿ, ಐದು ವರ್ಷ ಕಾಲ ಕಳೆಯೋಣ ಎಂಬ ಲೆಕ್ಕಾಚಾರದಲ್ಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂತ್ರಿಗಳ ಮೇಲೆ ಹಿಡಿತವಿಲ್ಲ. ಮಂತ್ರಿಗಳು, ಸಿದ್ದರಾಮಯ್ಯ ಮಾತಿಗೆ ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ. ಸಚಿವರು ತಮ್ಮ ಖಾತೆಯನ್ನು ಪ್ರೈವೆಟ್ ಲಿಮಿಟೆಡ್ ಕಂಪನಿಯಾಗಿ ಮಾಡಿಕೊಂಡು ಹಣ ಲೂಟಿ ಮಾಡುತ್ತಿದ್ದಾರೆ ಎಂದು ಛಲವಾದಿ ನಾರಾಯಣ ಸ್ವಾಮಿ ಆರೋಪಿಸಿದರು.

ಒಟ್ಟಾರೆ ಆಡಳಿತ ನಡೆಸಲು ವಿಫಲರಾದ ಸಿದ್ದರಾಮಯ್ಯ ಇಷ್ಟೊತ್ತಿಗಾಗಲೇ ರಾಜೀನಾಮೆ ನೀಡಬೇಕಿತ್ತು. ಆದರೆ ತಾವು ಎಸಗಿರುವ ಭ್ರಷ್ಟಾಚಾರವನ್ನು ಸಿಓಡಿ ಮತ್ತು ಲೋಕಾಯುಕ್ತ ಮೂಲಕ ಮುಚ್ಚಿ ಹಾಕುತ್ತಿದ್ದಾರೆ ಎಂದು ದೂರಿದರು.

ಸಿದ್ದರಾಮಯ್ಯ ಈ ಮೊದಲು ಅಷ್ಟಾಗಿ ಸುಳ್ಳು ಹೇಳುತ್ತಿರಲಿಲ್ಲ. ಪ್ರತಿ ವಿಚಾರವನ್ನು ಖಡಕ್ ಆಗಿ ಮಾತನಾಡುತ್ತಿದ್ದರು. ಆದರೆ ಈಗ ಕಾಂಗ್ರೆಸ್ ನಾಯಕರನ್ನು ಮೀರಿಸುವಂತೆ ಸುಳ್ಳು ಹೇಳುತ್ತಾರೆ ಎಂದು ಛಲವಾದಿ ನಾರಾಯಣ ಸ್ವಾಮಿ ಹೇಳಿದರು.

ಕುಂಭಮೇಳ ಸ್ನಾನ ಟೀಕಿಸುವ ಖರ್ಗೆ ಮನೆಯಲ್ಲಿ ದೇವರ ಪೂಜೆ

ಕುಂಭಮೇಳ ಸ್ನಾನ ಮಾಡಿದರೆ ಬಡತನ ನಿರ್ಮೂಲನೆ ಆಗುವುದೇ ಎಂದು ಪ್ರಶ್ನಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮನೆಯವರೇ ಭಕ್ತಿಯಿಂದ ದೇವರ ಪೂಜೆ ಮಾಡುತ್ತಾರೆ ಎಂದು ಛಲವಾದಿ ನಾರಾಯಣ ಸ್ವಾಮಿ ತಿಳಿಸಿದರು.

ಕಚ್ಚೆ ಪಂಚೆ ಹಾಕಿಕೊಂಡು ಮೈ, ಕೈಗೆ ಗಂಧ ಹಚ್ಚಿಕೊಂಡು ಮಲ್ಲಿಕಾರ್ಜುನ ಖರ್ಗೆ ಮನೆಯವರು ದೇವರ ಪೂಜೆ ಮಾಡುತ್ತಾರೆ. ಆದರೆ ಬೂಟಾಟಿಕೆ ಸ್ವಾಮೀಜಿಗೆ ಮೈಯೆಲ್ಲಾ ವಿಭೂತಿ ಎಂಬಂತೆ ಮಲ್ಲಿಕಾರ್ಜುನ ಖರ್ಗೆ ಹಿಂದೂ ಧಾರ್ಮಿಕ ವಿಧಾನ ಟೀಕಿಸುತ್ತಾರೆ ಎಂದು ಆರೋಪಿಸಿದರು.

ಕುಂಭಮೇಳ ಸ್ನಾನ ನಿಂದಿಸುವವರನ್ನು ನೇಣಿಗೆ ಹಾಕಬೇಕು ಎಂದು ಆಗ್ರಹಿಸಿದ ಛಲವಾದಿ ನಾರಾಯಣ ಸ್ವಾಮಿ, ಪ್ರತಿಯೊಂದು ಆಚರಣೆ ಅವರ ನಂಬಿಕೆಗೆ ಬಿಟ್ಟಿದೆ. ಆದರೆ ಈ ವಿಚಾರವಾಗಿ ಯಾರೂ ಟೀಕೆ ಮಾಡಬಾರದು ಎಂದು ಸಲಹೆ ನೀಡಿದರು.

ಸಂಸದ ರಾಹುಲ್ ಗಾಂಧಿ ತಂದೆ ಫಿರೋಜ್ ಗಾಂಧಿ ಪಾರ್ಸಿ ಸಮುದಾಯದವರು, ಆದರೆ ರಾಹುಲ್ ಗಾಂಧಿ ಬ್ರಾಹ್ಮಣ ಹೇಗೆ ಆಗುತ್ತಾರೆ ಎಂದು ಪ್ರಶ್ನಿಸಿದರು.

ರೆಸಾರ್ಟ್‌ಗೆ ಅನುಮತಿ; ಮನೆ ನೆಲಸಮ: ಹೆಚ್.ಡಿ.ಕೋಟೆ ತಾಲೂಕಿನ ತಾರಕ ಬಳಿ ರಜೀಯಾ ಮತ್ತು ಅಬ್ದುಲ್ ರಜಾಕ್ ದಂಪತಿಗಳ ಮನೆಯನ್ನು ಅರಣ್ಯ ಇಲಾಖೆಯವರು ನೆಲಸಮ ಮಾಡಿದ್ದಾರೆ. ಬಫರ್ ಜೋನ್ ವ್ಯಾಪ್ತಿಯಲ್ಲಿ ಇರದ ಪಕ್ಕಾ ದಾಖಲಾತಿ ಇರುವ ಮನೆ ನೆಲಸಮ ಮಾಡಿದ್ದಾರೆ. ತಮ್ಮ ತವರು ಜಿಲ್ಲೆಯಲ್ಲೇ ಇಂತಹ ಘಟನೆ ನಡೆದರೂ ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ ಎಂದು ಆರೋಪಿಸಿದರು.

ಹೆಚ್.ಡಿ.ಕೋಟೆಯಲ್ಲಿ ಬಫರ್ ಜೋನ್ ವ್ಯಾಪ್ತಿಯಲ್ಲಿ 60 ರೆಸಾರ್ಟ್‌ಗಳಿವೆ. ಮತ್ತೆ 100 ರೆಸಾರ್ಟ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಇದಕ್ಕೆ ಅನುಮತಿ ನೀಡುವ ಅರಣ್ಯ ಇಲಾಖೆಯವರು ಬಡವರ ಮನೆ ನೆಲಸಮಗೊಳಿಸಿದ್ದಾರೆ ಎಂದು ಛಲವಾದಿ ನಾರಾಯಣ ಸ್ವಾಮಿ ಕಿಡಿಕಾರಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

11ನೇ ವರ್ಷದ ಸವಿನೆನಪು



ಶ್ರೀ ಬರಕ್ಕಿ ಪಿ.ಮಂಜುನಾಥ್

ಸೂರ್ಯನಂತೆ ಮಿಂಚಿ ಹೋದ ನೀವು ಇಂದಿಗೆ ನಮ್ಮನ್ನಗಲಿ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ


ದುಃಖತಪ್ತರು : ಪತ್ನಿ ಸುಚಿತ್ರ, ತಂದೆ ಬರಕ್ಕಿ ಪುಟ್ಟಸ್ವಾಮಿಗೌಡರು, ತಾಯಿ : ಜವರಮ್ಮ, ಮಕ್ಕಳು, ಮೊಮ್ಮಕ್ಕಳು ಹಾಗೂ ಬರಕ್ಕಿ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು.

NYPUNYA SCHOOL OF EXCELLENCE

NSE

ICSE - R.T. Nagar CBSE- Dattagalli

MYSURU



ನೈಪುಣ್ಯೋತ್ಸವ

Nypunyothsava

ANNUAL DAY CELEBRATION

Date: 01 February 2025, Saturday,

Venue: KSOU Convocation Hall, Hunsur Rd, University of Mysore Campus, Mysuru,

PROGRAM
Morning 10.00 am

PROGRAM
Evening 04.00 pm

Inauguration



Dr. Sadananda K.S.
Medical Superintendent,
Sri Jayadeva Institute of Cardiovascular Science and Research, Mysore.

Guest of honor



Sri Anil R. Kulkarni
Zonal Manager of Indian Bank
Mysore Zone

Presided by




R. Raghu
Chairman,
Nypunya Group of Institutions

Inauguration



Sri P. N. Sreenivasachary
IAS (Rtd)
Former State Election Commissioner
Karnataka

Distinguished Guest



Swami Nirbhayananda Saraswati
President of Ramkrishna-Vivekananda Ashrama, Gadaga and Vijayapura.

PROGRAM HIGHLIGHTS

ಕಿಂಡರ್‌ಗಾರ್ಡನ್ ವಿಭಾಗದಿಂದ
'ಜನನಿ'
(JANANI)
Special Event by Kindergarten

ಕೂಡು ಕುಟುಂಬಗಳ
'ಬೇರು–ಬಿಳ್ಳಿ'
(BERU-BALLI)
Joint families on the stage

ಡಾ. ಶಾಂಭವಿ ಸ್ವಾಮಿ
ಅವರ ನಿರ್ದೇಶನದಲ್ಲಿ ನೈಪುಣ್ಯ ವಿದ್ಯಾರ್ಥಿಗಳಿಂದ
ಸೃಷ್ಟಿ–ದೃಷ್ಟಿ
(SRISHTI-DRISHTI)
Dance Drama

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು- 570 005.

ಸಂಖ್ಯೆ: ಮೈನ.ಪ್ರಾ/ಆಆಸಶಾ/ಪ.ಪ್ರ-3/ತು.ಜಾ/2024-25 ದಿನಾಂಕ: 30.01.2025

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾದ ಬಡಾವಣೆಗಳಲ್ಲಿ ತುಂಡು ಭೂಮಿ ಅಥವಾ ಉಳಿದಿರುವ ಭೂಮಿಯನ್ನು ವಿಲೇವಾರಿ ಮಾಡುವ ಸಂಬಂಧ ಮಾನ್ಯ ಸರ್ಕಾರವು **ಸಂಖ್ಯೆ:ನಅಇ 2 ಎಸಿಬಿ 2022, ದಿನಾಂಕ 22.11.2024** ರಂದು ಮಾರ್ಗಸೂಚಿಗಳನ್ನು ತಿಳಿಸಿ ತುಂಡುಭೂಮಿ ಅಥವಾ ಉಳಿದ ಭೂಮಿಯನ್ನು ಒಂದು ವರ್ಷದೊಳಗೆ ತುಂಡು ಭೂಮಿ ಹಂಚಿಕೆಯ ಕಾರ್ಯ ವಿಧಾನಗಳನ್ನು ಪೂರ್ಣಗೊಳಿಸಲು ನಿರ್ದೇಶಿಸಿರುತ್ತದೆ. ಅದರಂತೆ ಪ್ರಾಧಿಕಾರದಿಂದ ರಚಿತವಾದ ಬಡಾವಣೆಗಳಲ್ಲಿ ಮಂಜೂರಾತಿ ಪಡೆದಿರುವ ಸಾರ್ವಜನಿಕರು ತಮ್ಮ ನಿವೇಶನ/ಮನೆಗಳಿಗೆ ಹೊಂದಿಕೊಂಡಂತೆ ತುಂಡುಜಾಗ ಲಭ್ಯವಿದ್ದಲ್ಲಿ ಅಂತಹ ತುಂಡು ಜಾಗವನ್ನು ಮಂಜೂರು ಮಾಡುವ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಲು ಎರಡು ಬಾರಿ ಕಾಲಾವಕಾಶವನ್ನು ನೀಡಲಾಗಿತ್ತು. ಮುಂದುವರೆದು, ಸಾರ್ವಜನಿಕರು ತಮ್ಮ ನಿವೇಶನ/ಮನೆಗಳಿಗೆ ಹೊಂದಿಕೊಂಡಂತೆ ತುಂಡುಜಾಗ ಲಭ್ಯವಿದ್ದಲ್ಲಿ ಅಂತಹ ತುಂಡುಜಾಗವನ್ನು ಕೋರಿ ಅರ್ಜಿ ಸಲ್ಲಿಸಲು ಅಂತಿಮವಾಗಿ ಮೂರು ತಿಂಗಳ ಕಾಲಾವಕಾಶವನ್ನು ಅಂದರೆ **01.02.2025 ರಿಂದ 30.04.2025 ರವರೆಗೆ ಕಾಲಾವಕಾಶವನ್ನು ವಿಸ್ತರಿಸಿದೆ.** ನಿಗಧಿತ ಕಾಲಾವಕಾಶ ನಂತರ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಆದುದರಿಂದ ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದೆ. ತದನಂತರ ಸರ್ಕಾರದ ಮಾರ್ಗಸೂಚಿಯಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/-
(ವಿ. ಕೆ. ಪ್ರಸನ್ನ ಕುಮಾರ್, ಕೆ.ಎ.ಎಸ್.(ಹಿ.ಶ್ರೇ.))
ಕಾರ್ಯದರ್ಶಿ,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ,
ಮೈಸೂರು.

DIPR/MYS/RO07/2024-25

ಉತ್ತರ ಕ್ರಿಯಾದಿ ಆಹ್ವಾನ



ಶ್ರೀ ನರಸಿಂಹೇಗೌಡ
(ಚಲನಚಿತ್ರ ಪೋಷಕ ನಟರು)
ವಿ.ವಿ.ಮೊಹಲ್ಲಾ ಪಡುವಾರಹಳ್ಳಿ

ಇವರು ದಿನಾಂಕ 28-01-2025 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 01-02-2025ರ ಶನಿವಾರ ಬೆಳಗ್ಗೆ 11ಕ್ಕೆ ಮೃತರ ಸ್ವಗೃಹ ರಾಂಪಾಲ್ ರಸ್ತೆ ಶ್ರೀರಂಗಪಟ್ಟಣ ಟೌನ್ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಮಕ್ಕಳು, ಸೊಸೆ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

---

45 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ತಿ. ನರಸೀಪುರ

ತಿ.ನರಸೀಪುರ ತಾ॥ ಇದರ ರಿಟರ್ನಿಂಗ್ ಆಫೀಸರ್‌ರವರ ಕಾರ್ಯಾಲಯದಿಂದ

ಮೇಲ್ಕಂಡ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯು ದಿ. 16-02-2025ಕ್ಕೆ ನಿಗಧಿಯಾಗಿದ್ದು, ಸಂಘದ ಕಛೇರಿಯಲ್ಲಿ ನಾಮಪತ್ರ ಸಲ್ಲಿಕೆಗೆ ದಿ. 02-02-2025 ರಿಂದ 08-02-2025ರವರೆಗೆ ಅವಕಾಶ ಕಲ್ಪಿಸಿದ್ದು ಸದರಿ ಚುನಾವಣೆಯ ಪ್ರಕ್ರಿಯೆಗೆ ಅರ್ಹ ಮತದಾರರು ಭಾಗವಹಿಸುವಂತೆ ಈ ಮೂಲಕ ಕೋರಿದೆ. ಚುನಾವಣಾ ವೇಳಾಪಟ್ಟಿ ಒಂದು ವೇಳೆ ತಮಗೆ ಅಂಚೆ ಮೂಲಕ ನಿಗಧಿತ ಅವಧಿಯೊಳಗೆ ಲಭ್ಯವಾಗದಿದ್ದಲ್ಲಿ, ಈ ಪ್ರಕಟಣೆಯನ್ನು ಚುನಾವಣಾ ವೇಳಾಪಟ್ಟಿಯೆಂದು ಭಾವಿಸಿ ಅರ್ಹ ಮತದಾರರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮತ್ತೊಮ್ಮೆ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಘದ ಕಾರ್ಯದರ್ಶಿ / ರಿಟರ್ನಿಂಗ್ ಆಫೀಸರ್‌ರವರನ್ನು ಭೇಟಿ ಮಾಡತಕ್ಕದ್ದು.

ದಿನಾಂಕ: 31-01-2025
ಸ್ಥಳ: ತಿ.ನರಸೀಪುರ

ಸಹಿ/- (ರಮೇಶ. ಜೆ.), ರಿಟರ್ನಿಂಗ್ ಆಫೀಸರ್,
ಕಸಬಾ ಪ್ರಾಥಮಿಕ ಕೃಷಿ ಪತ್ತಿನ
ಸಹಕಾರ ಸಂಘ ನಿ., ತಿ.ನರಸೀಪುರ

Document Lost

Original Registerd Sale deed Dated 01.12.1997 Registered before the subregistrar, Mysuru North in Book no.1, Volume 1628, Pages 228-230 bearing Document No. 4614 Pertaining to the property bearing no. 388/599 situated at Hinkal Village, Kasaba Hobli, Mysuru Taluk. Finders Please contact: Property owner . Smt. H. P. Sharada W/o Sri. Krishna, Hinkal, Mysuru.

9535255703

ನಂಜರಾಜ ಬಹದ್ದೂರು ಛತ್ರದಲ್ಲಿ ಇಂದಿನಿಂದ ಮಾರಾಟ

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಶೂಸ್

ಸರಪ್ಲಸ್ ಫ್ಯಾಕ್ಟರಿ ಸೆಕೆಂಡ್ಸ್ ಸೇಲ್ 7 ದಿನಗಳು

ಪುರುಷರ ಮತ್ತು ಮಹಿಳೆಯರ ಸಹಸ್ರಾರು ಬಗೆಯ ಬ್ರಾಂಡೆಡ್ ಸಿದ್ಧ ಉಡುಪುಗಳು, ಸೀರೆಗಳು, ಶಾರ್ಟ್ಸ್, ಟಿ-ಶರ್ಟ್ಸ್, ವೆಸ್ಟರ್ನ್ ಟಾಪ್ಸ್, ಟ್ರ್ಯಾಕ್ ಪ್ಯಾಂಟ್, ಪಾಲಜ್ಹೋ, ಬಾಟಮ್ಸ್, ಕುರ್ತೀ, ಜೀನ್ಸ್, ಶರ್ಟ್, ಜಾಕೆಟ್ಸ್, ಜಿಪ್ಪರ್, ವುಡ್ಡೀಸ್, ಸ್ವೆಟ್‌ಶರ್ಟ್ ಇನ್ನೂ ಹಲವಾರು ಉಡುಪುಗಳು

ಬ್ರಾಂಡೆಡ್ ಶೂಸ್ ಭಾರಿ ರಿಯಾಯಿತಿ ಮಾರಾಟ

4,000/- ದಿಂದ 32,000/- ರೂ. ಬೆಲೆ ಬಾಳುವ ಶೂಗಳು

NIKE PUMA campus SKECHERS asics new balance WOODLAND

ಇಂದು ಕೇವಲ **750/-** ರೂ. ಮಾತ್ರ

ಪುರುಷರ ಉಡುಪುಗಳ ಭಾರಿ ರಿಯಾಯಿತಿ ಮಾರಾಟ

2,000/- ದಿಂದ 10,000/- ರೂ. ಬೆಲೆ ಬಾಳುವ ಪುರುಷರ ಉಡುಪುಗಳು ಕೇವಲ 400/- ರೂ.

ರೌಂಡ್ ನೆಕ್ ಟಿ-ಶರ್ಟ್ ರೂ. 200/-	ಕಾಲರ್ ರೂ. ಟಿ-ಶರ್ಟ್ 200/-	ಶರ್ಟ್ ರೂ. 400/-	ಜೀನ್ಸ್ ರೂ. 400/-	ಕಾಟನ್ ಪ್ಯಾಂಟ್ ರೂ. 400/-	ಜೀನ್ಸ್ ರೂ. ಜಾಕೆಟ್ 400/-
ಸ್ವೆಟ್ ಶರ್ಟ್ಸ್ & ಸ್ವೆಟರ್ಸ್ ರೂ. 400/-	ಫಾರ್ಮಲ್ ಪ್ಯಾಂಟ್ 400/-	ಟ್ರ್ಯಾಕ್ ಪ್ಯಾಂಟ್ ರೂ. 400/-	ಶಾರ್ಟ್ಸ್ ರೂ. 250/-	ಬ್ಲೇಜರ್ಸ್ ರೂ. 400/-	ಜಿಪ್ಪರ್ ರೂ. ವುಡೀಸ್ 400/-

ವಿಶೇಷ ಕೊಡುಗೆ : ರೌಂಡ್ ನೆಕ್ ಟೀಶರ್ಟ್ : S ಸೈಜ್ ರೂ. 100/-, ಶರ್ಟ್ S ಸೈಜ್ ರೂ. 250/-, ಜೀನ್ಸ್ 28 ಸೈಜ್ - ರೂ. 250/-

ಮಹಿಳೆಯರ ಮತ್ತು ಮಕ್ಕಳ ಉಡುಪುಗಳ ಭಾರಿ ರಿಯಾಯಿತಿ ಮಾರಾಟ

1,000/- ದಿಂದ 4,000/- ರೂ. ಬೆಲೆ ಬಾಳುವ ಮಹಿಳೆಯರ ಉಡುಪುಗಳು ಕೇವಲ 300/- ರೂ.

ಕುರ್ತೀಸ್ ರೂ. 250/-	ಜೀನ್ಸ್ ರೂ. 250/-	ಜೆಗ್ಗಿನ್ಸ್ ರೂ. 250/-	ಪಾಲಜ್ಹೋ ರೂ. 250/-	ವೆಸ್ಟರ್ನ್ ಟಾಪ್ಸ್ ರೂ. 150/-
ಬಾಟಮ್ಸ್ ರೂ. 250/-	ಸ್ವೆಟ್ ಶರ್ಟ್ಸ್ & ಸ್ವೆಟರ್ಸ್ ರೂ. 250/-	ಜಿಪ್ಪರ್ ವುಡೀಸ್ 250/-	ಜಾಕೆಟ್ ರೂ. 250/-	

ಯಾವುದೇ ಮಹಿಳೆಯರ ಬ್ಯಾಗ್‌ಗಳು ಅಥವಾ ವ್ಯಾನಿಟಿ ಬ್ಯಾಗ್ಸ್ ರೂ. 500/-	ಮಕ್ಕಳ ರೂ. ಉಡುಪುಗಳು 100/-

ವಿಶೇಷ ಕೊಡುಗೆ ಕುರ್ತೀಸ್ : S ಸೈಜ್ ರೂ. 150/-, ವೆಸ್ಟರ್ನ್ ಟಾಪ್ಸ್ S ಸೈಜ್ ರೂ. 100/-, ಡ್ರೆಸ್ S ಸೈಜ್ - ರೂ. 200/-

ವಿಶೇಷ ಕೊಡುಗೆ : ರೇಷ್ಮೆ ಸೀರೆಗಳು 80% ರಿಯಾಯಿತಿ MRP

ಮಹಿಳೆಯರ ಪ್ಯಾಂಟಿ ರೂ. 60/- ಮಾತ್ರ | ಬ್ರಾಂಡೆಡ್ ಬ್ರಾ Rs. 100/- | ಬ್ರಾಂಡೆಡ್ ಪುರುಷರ ಟ್ರಂಕ್ಸ್ ರೂ. 200/-

7 ಮಾರಾಟ ದಿನಗಳು ಮಾತ್ರ ದಿನಾಂಕ : 01-02-2025 ರಿಂದ 07-02-2025 ರವರೆಗೆ
ಶನಿ, ಭಾನು, ಸೋಮ, ಮಂಗಳ, ಬುಧ, ಗುರು, ಶುಕ್ರವಾರ

ಸ್ಥಳ : ನಂಜರಾಜ ಬಹದ್ದೂರು ಛತ್ರ

ವಿನೋಬಾ ರಸ್ತೆ, ಮೆಟ್ರೋಪೋಲ್ ಸರ್ಕಲ್ ಹತ್ತಿರ, ಮೈಸೂರು

ಎಲ್ಲ ಪ್ರಮುಖ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳು, ಆನ್‌ಲೈನ್ ಪಾವತಿಗಳನ್ನು ಸ್ವೀಕರಿಸಲಾಗುವುದು | ಸಮಯ : ಬೆ.10 ರಿಂದ ರಾತ್ರಿ 10ರವರೆಗೆ ಸಂಪರ್ಕ : 8747869888 | ಉಚಿತ ಪ್ರವೇಶ & ಪಾರ್ಕಿಂಗ್

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಜನನ:
12-10-1971

ಶ್ರೀ ಕೃಷ್ಣ ರವರು

ನಿಧನ:
22-01-2025

ದಿನಾಂಕ: 22-01-2025ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ **ಉತ್ತರ ಕ್ರಿಯಾದಿ ಕಾರ್ಯವನ್ನು** ದಿನಾಂಕ: 01-02-2025 ನೇ ಶನಿವಾರ ಬೆಳಿಗ್ಗೆ 11:30 ಗಂಟೆಗೆ


ಸ್ಥಳ : ಹೋಟೆಲ್ ಕಲ್ಯಾಣಿ ಪಕ್ಕ, ರಿಂಗ್ ರಸ್ತೆ, ಹೆಬ್ಬಾಳ್, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

"ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ಕೋರುತ್ತೇವೆ".

ಹರಿಕಥೆ: ರಾತ್ರಿ 7.00 ಗಂಟೆಗೆ | ಭೋಜನ: ಮಧ್ಯಾಹ್ನ 1.00 ಗಂಟೆಗೆ

ದುಃಖತಪ್ತರು: ತಾಯಿ ಶ್ರೀಮತಿ ಸರೋಜಮ್ಮ, ಧರ್ಮಪತ್ನಿ ಶ್ರೀಮತಿ ಸುಧಾ, ಮಕ್ಕಳಾದ ಕು.ಸವ್ಯ, ಬಿ. ಸತ್ಯನಾರಾಯಣ, ಅಕ್ಕ, ಚಿಕ್ಕಮ್ಮ, ಅಣ್ಣಂದಿರು ಮತ್ತು ಮಕ್ಕಳು, ಕುಟುಂಬವರ್ಗದವರು ಹಾಗೂ ಮಂಚೇಗೌಡನಕೊಪ್ಪಲು ಗ್ರಾಮಸ್ಥರು ಹಾಗೂ ಬಂಧುಮಿತ್ರರು

ತ್ರಿವೇಣಿ ಸಂಗಮದಲ್ಲಿ ಪ್ರತಾಪ್‌ಸಿಂಹ ಪುಣ್ಯಸ್ನಾನ




ಶುಕ್ರವಾರ ಮೈಸೂರು-ಕೊಡಗು ಮಾಜಿ ಸಂಸದ ಪ್ರತಾಪ್‌ಸಿಂಹ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಪುಣ್ಯತೀರ್ಥ ಸ್ನಾನ ಮಾಡಿ, ಕನ್ನಡ ನಾಡು-ನುಡಿ ಮೆರೆದರು.

ಇರಾನ್‌ನಲ್ಲಿ ಮೂವರು ಭಾರತೀಯರು ನಾಪತ್ತೆ

ನವದೆಹಲಿ: ಇರಾನ್‌ನಲ್ಲಿ ಮೂವರು ಭಾರತೀಯ ಪ್ರಜೆಗಳು ಕಾಣೆಯಾಗಿದ್ದು, ಭಾರತ ಈ ವಿಷಯವನ್ನು ಟೆಹ್ರಾನ್ ಗಮನಕ್ಕೆ ತರಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಶುಕ್ರವಾರ ತಿಳಿಸಿದೆ. ಭಾರತೀಯರ ನಾಪತ್ತೆ ವಿಷಯವನ್ನು ದೆಹಲಿಯಲ್ಲಿರುವ ಇರಾನಿನ ರಾಯಭಾರ ಕಚೇರಿ ಮತ್ತು ಟೆಹ್ರಾನ್‌ನಲ್ಲಿರುವ ಇರಾನಿನ ವಿದೇಶಾಂಗ ಸಚಿವಾಲಯ ದೊಂದಿಗೆ ಚರ್ಚಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಹೇಳಿದ್ದಾರೆ. ವಿದೇಶಾಂಗ ಸಚಿವಾಲಯ ಮತ್ತು ಟೆಹ್ರಾನ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಇರಾನಿನ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕ ದಲ್ಲಿದೆ ಮತ್ತು ಕಾಣೆಯಾದ ಪ್ರಜೆಗಳನ್ನು ಪತ್ತೆಹಚ್ಚಲು ಹಾಗೂ ಅವರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಕೋರಿದೆ ಎಂದು ಅವರು ತಿಳಿಸಿದ್ದಾರೆ.

ಕಂಪನಿ ವ್ಯವಹಾರಗಳ ರಹಸ್ಯವನ್ನ ಯಾರಿಗೂ ನೀಡಬೇಡಿ

- ಉದ್ಯಮಿಗಳಿಗೆ ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್ ಕುಮಾರ್ ಕಿವಿಮಾತು
- ಸೈಬರ್ ಅಪರಾಧ ಬೆದರಿಕೆಗಳ ಸಂಬಂಧ ಉಪನ್ಯಾಸ
- ನಿಮ್ಮ ಮ್ಯಾನೇಜರ್, ಇನ್ನಿತರೆ ಸಿಬ್ಬಂದಿಗೆ ಸೈಬರ್ ಅಪರಾಧದ ಅರಿವಿರಬೇಕು
- ಕ್ಷಣಾರ್ಧದಲ್ಲಿ ನಿಮ್ಮ ಹಣ ಎಗರಿಸುವ ಖತರ್ನಾಕ್‌ಗಳಿದ್ದಾರೆ

ಮೈಸೂರು, ಜ.31(ಎಂಕೆ)- ತಂತ್ರಜ್ಞಾನ ಬೆಳೆದಂತೆ ದಿನದಿಂದ ದಿನಕ್ಕೆ ಹೊಸ ರೀತಿಯ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗುತ್ತಿದ್ದು, ರಿಯಲ್ ಎಸ್ಟೇಟ್ ಉದ್ಯಮಿಗಳು ಹಣಕಾಸು ವ್ಯವಹಾರಕ್ಕೂ ಮುನ್ನ ನಿಯಮಗಳು ಮತ್ತು ಷರತ್ತುಗಳನ್ನು (T&C) ಸೂಕ್ತವಾಗಿ ಗಮನಿಸಿ ಎಂದು ಸಿಸಿಬಿ ಎಸಿಪಿ ಎಸ್.ಎನ್. ಸಂದೇಶ್ ಕುಮಾರ್ ಎಚ್ಚರಿಸಿದರು.

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನರೆಡ್ಕೊ(ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್ಮೆಂಟ್ ಕೌನ್ಸಿಲ್) ಮೈಸೂರು ಚಾಪ್ಟರ್ ವತಿಯಿಂದ ಆಯೋಜಿಸಿದ್ದ 'ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಸೈಬರ್ ಅಪರಾಧ ಬೆದರಿಕೆಗಳು' ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ರಿಯಲ್ ಎಸ್ಟೇಟ್ ಉದ್ಯಮಿಗಳು ತಮ್ಮ ಕಂಪನಿ ರಹಸ್ಯಗಳನ್ನು ಯಾರಿಗೂ ನೀಡಬೇಡಿ. ನಿಮ್ಮ ಮ್ಯಾನೇಜರ್, ಸಿಬ್ಬಂದಿಗೆ ಸೈಬರ್ ಕ್ರೈಂ ಅರಿವಿರಲಿ. ನಿಮ್ಮ ಬಯೋಮೆಟ್ರಿಕ್ ಇಲ್ಲದೆ ಹಣ ವರ್ಗಾವಣೆಯಾಗದಂತಹ ವ್ಯವಸ್ಥೆ ರೂಪಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು. ದೇಶದಲ್ಲಾಗುತ್ತಿರುವ ಡಿಜಿಟಲ್ ಸ್ಕ್ಯಾಮ್‌ನಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. 2019ರಿಂದ 2024ರವರೆಗೆ ಆನ್‌ಲೈನ್ ವಂಚನೆಯಿಂದ ಸುಮಾರು 1500 ಕೋಟಿ ರೂ.ಹಣ ಕಳೆದುಕೊಂಡಿದ್ದರೆ, 2024ರಲ್ಲಿ 1806 ಕೋಟಿ ರೂ. ಜನರ ದುಡ್ಡು ಹೋಗಿದೆ. 2022ರಲ್ಲಿ ಸ್ಟಾಕ್ ಇನ್ವೆಸ್ಟ್‌ಮೆಂಟ್ ಸ್ಕ್ಯಾಮ್‌ನ 411 ಪ್ರಕರಣಗಳು ದಾಖಲಾಗಿತ್ತು. 2024ರಲ್ಲಿ 6000 ಪ್ರಕರಣಗಳಾಗಿವೆ. ಐದೇ ನಿಮಿಷದಲ್ಲಿ ನಿಮ್ಮ ಹಣವನ್ನು ನಿಮ್ಮ ಅರಿವಿಗೆ ಬಾರದಂತೆ ಎಗರಿಸುತ್ತಾರೆ ಎಚ್ಚರ. ಸೈಬರ್ ವಂಚನೆಯಿಂದ ಪಾರಾಗಲು ಸಂಚಾರ ಸಾರಥಿ ವೆಬ್‌ಸೈಟ್ ಸದ್ಬಳಕೆ ಮಾಡಿಕೊಳ್ಳಿ. ಅಲ್ಲದೆ 1930 ಸಹಾಯವಾಣಿಗೆ ಕರೆ ಮಾಡಿ ದೂರು ನೀಡಿ ಎಂದು ಸಲಹೆ ನೀಡಿದರು.



'ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಸೈಬರ್ ಅಪರಾಧ ಬೆದರಿಕೆಗಳು' ಕುರಿತು ಸಿಸಿಬಿ ಎಸಿಪಿ ಸಂದೇಶ್ ಕುಮಾರ್ ಉಪನ್ಯಾಸ ನೀಡಿದರು.

ಆಸಕ್ತಿ ಮತ್ತು ಅರಿವಿನ ಕೊರತೆಯಿಂದಾಗಿ ಆನ್‌ಲೈನ್ ವಂಚಕರ ಜಾಲಕ್ಕೆ ತುತ್ತಾಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅತ್ಯಂತ ಡೇಂಜರಸ್ ಆಪ್‌ಗಳಿದ್ದು, ಪ್ಲೆ ಸ್ಟೋರ್ ಮತ್ತು ಆಪಲ್ ಸ್ಟೋರ್‌ನಿಂದ ಮಾತ್ರವೇ ಅಗತ್ಯ ಬಳಕೆಯ ಆಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಒಳಿತು. ಆನ್‌ಲೈನ್ ಗೇಮ್‌ಗಳು ಆರಂಭದಲ್ಲಿ ಗೆಲ್ಲಿಸಿ, ವ್ಯಸನ ಹಿಡಿಸಿ, ನಂತರ ನಿಮ್ಮ ಖಾತೆಯಲ್ಲಿ ಇರುವುದೆಲ್ಲವನ್ನೂ ದೋಚುತ್ತಾರೆ. ಫೇಕ್ ವೆಬ್‌ಸೈಟ್, ಫೇಕ್ ಆ್ಯಪ್, ಫೇಕ್ ಜಾಹಿರಾತು, ಫೆಕ್ ವಾಟ್ಸಾಪ್ ಗ್ರೂಪ್‌ಗಳನ್ನು ನೆಗ್ಲೆಟ್ ಮಾಡಿ, ಯಾವುದೇ ಕಾರಣಕ್ಕೂ ರೆಸ್ಪಾನ್ಸ್ ನೀಡಬೇಡಿ ಎಂದು ಹತ್ತಾರು ಉದಾಹರಣೆ ಸಹಿತ ಸೈಬರ್ ವಂಚನೆ ಕುರಿತು ಸವಿಸ್ತಾರವಾಗಿ ತಿಳಿಸಿಕೊಟ್ಟರು. ಇದಕ್ಕೂ ಮುನ್ನ ನರೆಡ್ಕೋ ಮೈಸೂರು ಚಾಪ್ಟರ್‌ನ ನೂತನ ಸದಸ್ಯತ್ವವನ್ನು ಗ್ಲೋಬಲ್ ಫಾರ್ಚೂನ್ ಕ್ರಿಯೇಟರ್ಸ್‌ನ ಡಾ.ಬಿ.ಚಂದ್ರ ಅವರಿಗೆ ನೀಡಿ, ಅಭಿನಂದಿಸಲಾಯಿತು. ನರೆಡ್ಕೊ ರಾಜ್ಯ ಉಪಾಧ್ಯಕ್ಷ ಮನೋಜ್, ಮೈಸೂರು ಚಾಪ್ಟರ್ ಮುಖ್ಯಸ್ಥ ಟಿ.ಜಿ.ಆದಿಶೇಷನ್ ಗೌಡ, ಅಧ್ಯಕ್ಷ ವಿ.ಸಿ.ರವಿಕುಮಾರ್, ಉಪಾಧ್ಯಕ್ಷ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್, ಖಜಾಂಚಿ ಎ.ಪಿ.ನಾಗೇಶ್, ದಿವ್ಯೇಶ್ ಮತ್ತಿತರರಿದ್ದರು.

ನವೀಕರಣಗೊಂಡ ವೆಲ್ಲಿಂಗ್ಟನ್ ಸರ್ಕಾರಿ ವಸ್ತು ಸಂಗ್ರಹಾಲಯ, ಕಲಾ ಗ್ಯಾಲರಿ ಉದ್ಘಾಟನೆ

ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್‌ರಿಂದ ಚಾಲನೆ ನಂತರ ವೀಕ್ಷಣೆ



ನಗರದ ಇರ್ವಿನ್ ರಸ್ತೆಯಲ್ಲಿರುವ ನವೀಕರಣಗೊಂಡ ವೆಲ್ಲಿಂಗ್ಟನ್ ಸರ್ಕಾರಿ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಯನ್ನು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಶುಕ್ರವಾರ ಉದ್ಘಾಟಿಸಿ, ವೀಕ್ಷಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉಪಸ್ಥಿತರಿದ್ದರು.

ಮೈಸೂರು, ಜ.31(ಎಂಕೆ)- ನಗರದ ಇರ್ವಿನ್ ರಸ್ತೆಯಲ್ಲಿರುವ ನವೀಕರಣಗೊಂಡ ವೆಲ್ಲಿಂಗ್ಟನ್ ಸರ್ಕಾರಿ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಯನ್ನು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಶುಕ್ರವಾರ ಉದ್ಘಾಟಿಸಿದರು.

ಬಳಿಕ ಕಲಾ ಗ್ಯಾಲರಿಯಲ್ಲಿನ ಕಲಾಕೃತಿಗಳನ್ನು ವೀಕ್ಷಿಸಿದ ಅವರು, ಮೈಸೂರು ಶೈಲಿ, ತಂಜಾವೂರು ಶೈಲಿಯ ಕಲಾಕೃತಿಗಳು ಆನೆ ದಂತದಲ್ಲಿ ರಾಜರ ಕಾಲದಲ್ಲಿ ಸಿದ್ಧಪಡಿಸಲಾದ ಟಪಾಲುಗಳನ್ನು ಇಡಲು ಬಳಸುತ್ತಿದ್ದ ಕಪಾಟಿನ ಮೇಲಿನ ಕಲೆಯನ್ನು ಕಂಡು ಅಚ್ಚರಿಗೊಳ್ಳುವುದಲ್ಲದೇ ಇದನ್ನು ಮುಂದಿನ ಪೀಳಿಗೆಗೆ ಇಷ್ಟೇ ಸುರಕ್ಷಿತವಾಗಿ ಕಾಪಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ವೆಲ್ಲಿಂಗ್ಟನ್ ಕಟ್ಟಡವನ್ನು 80 ಲಕ್ಷ ರೂ. ಹಾಗೂ ಕಲಾಗ್ಯಾಲರಿಯ ಒಳಾಂಗಣ ವನ್ನು 19 ಲಕ್ಷ ರೂ. ವೆಚ್ಚದಲ್ಲಿ ನವೀಕರಣಗೊಳಿಸಲಾಗಿದೆ. ಪ್ರವಾಸಿಗರು ಇಲ್ಲಿರುವ ಅಪರೂಪದ ಸಂಗ್ರಹವನ್ನು ವೀಕ್ಷಿಸಬೇಕು ಎಂದು ಮನವಿ ಮಾಡಿದರು.

ಹಳೇ ಡಿಸಿ ಕಚೇರಿಯಲ್ಲಿ ಚಿತ್ತಾಕರ್ಷಕ ಗ್ಯಾಲರಿ ನಿರ್ಮಾಣ...!

ಮೈಸೂರನ್ನು ರಾಷ್ಟ್ರದ ಸಾಂಸ್ಕೃತಿಕ ರಾಜಧಾನಿ ಎಂದರೆ ತಪ್ಪಾಗಲಾರದು. ಮೈಸೂರು ಅರಮನೆಯಲ್ಲಿರುವ ಖಜಾನೆಯ ಕೀಲಿಯನ್ನು ಮೊದಲ ಬಾರಿಗೆ ತೆರೆಸಿ ನೋಡಿದಾಗ ಅಲ್ಲಿ ಕೋಟಿಗಟ್ಟಲೆ ಬೆಲೆಬಾಳುವ 40 ಸಾವಿರಕ್ಕೂ ಹೆಚ್ಚು ಕಲಾಕೃತಿಗಳು, ನಾನಾ ಬಗೆಯ ವಸ್ತುಗಳು ಕಂಡು ಬಂದಿವೆ. 31 ಸಾವಿರ ನಾಣ್ಯಗಳಿವೆ. ಅದರಲ್ಲಿ 10 ಸಾವಿರ ಚಿನ್ನ, 500 ಬೆಳ್ಳಿ, 6 ಸಾವಿರ ಕಂಚಿನ ನಾಣ್ಯಗಳು, ಸಾವಿರಕ್ಕೂ ಹೆಚ್ಚು ಲೋಹದ ವಿಶೇಷ ಕಲಾಕೃತಿಗಳಿವೆ. ಹಾಗಾಗಿ, ಹಳೇ ಡಿಸಿ ಕಚೇರಿಯ ಒಂದು ಭಾಗದಲ್ಲಿ ಜಾಗ ನೀಡಿದರೆ ಅದನ್ನು ದೊಡ್ಡ ಮಟ್ಟದ ಚಿತ್ತಾಕರ್ಷಕ ಮ್ಯೂಸಿಯಂ ಆಗಿ ರೂಪಿಸುತ್ತೇವೆ. ಇದಕ್ಕೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ಅವಕಾಶ ಮಾಡಿಕೊಡಬೇಕು ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಮನವಿ ಮಾಡಿದರು. ಕೂಡಲೇ ಮನವಿಗೆ ಪ್ರತಿಕ್ರಿಯಿಸಿದ ಮಹದೇವಪ್ಪ ಕೂಡಲೇ ಚರ್ಚಿಸಿ ಅವಕಾಶ ಮಾಡಿಕೊಡುವುದಾಗಿ ತಿಳಿಸಿದರು.

ಲಕ್ಕುಂಡಿ, ರಾಜ್‌ಘಾಟ್‌ನಲ್ಲಿ ಉತ್ಖನನ: ಲಕ್ಕುಂಡಿ ಹಾಗೂ ರಾಜ್‌ಘಾಟ್‌ನಲ್ಲಿ ಉತ್ಖನನ ಮಾಡಲು ಕೇಂದ್ರ ಸರಕಾರ ಅನುಮತಿ ನೀಡಿದ್ದು, ಫೆಬ್ರವರಿ ತಿಂಗಳಲ್ಲಿ ಕಾರ್ಯ ಆರಂಭಿಸಲಾಗುವುದು.

ಲಕ್ಕುಂಡಿ ಯಲ್ಲಿ ಈಗಾಗಲೇ ಹಿಂದಿನ ಕಾಲದ ಅವಶೇಷಗಳನ್ನು ಸಂರಕ್ಷಿಸುವ ಅಗತ್ಯತೆ ಬಗ್ಗೆ ಜನಜಾಗೃತಿ ಮೂಡಿಸಲಾಗಿದ್ದು, ಜನರ ಸಹಾಯದಿಂದ ಈಗಾಗಲೇ 10 ತಂಡಗಳು 1050 ಐತಿಹಾಸಿಕ ಪ್ರಾಚ್ಯ ವಸ್ತು ಅವಶೇಷಗಳನ್ನು ಸಂಗ್ರಹಿಸಿವೆ. ಈ ಸಂಗ್ರಹದಿಂದ ಇತಿಹಾಸವನ್ನು ಭವಿಷ್ಯದ ಪೀಳಿಗೆಗೆ ಉಳಿಸಲು ಸಾಧ್ಯವಾ ಗುತ್ತದೆ ಎಂದರು. ಸಚಿವ ಡಾ.ಎಚ್.ಸಿ. ಮಹದೇವಪ್ಪ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತ ದೇವರಾಜ್ ಮತ್ತಿತರರು ಉಪಸ್ಥಿತರಿದ್ದರು.

ದಾಸ ಶ್ರೇಷ್ಠ ಶ್ರೀಪುರಂದರ ದಾಸರ ಆರಾಧನಾ ಮಹೋತ್ಸವ



ದಾಸಶ್ರೇಷ್ಠ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ ಶುಕ್ರವಾರ ನಡೆಯಿತು.

ಮೈಸೂರು, ಜ.31(ಎಸ್‌ಪಿಎನ್)- ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ, ಮೈಸೂರು ವತಿಯಿಂದ ದಾಸ ಶ್ರೇಷ್ಠ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ ಶುಕ್ರವಾರ ನಡೆಯಿತು.

ಪುರಂದರದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಆಧ್ಯಾತ್ಮ ಚಿಂತಕಿ ಸುಮತಿ ಸುಬ್ರಹ್ಮಣ್ಯ ಮಾತನಾಡಿದರು. ಡಾ.ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕರಾದ ಡಾ.ಕೆ.ಲೀಲಾ ಪ್ರಕಾಶ್, ಪುರಂದರದಾಸರ ಜೀವನಗಾಥೆ ಕುರಿತು ಉಪನ್ಯಾಸ ನೀಡಿದರು. ಈ ವೇಳೆ ಗಾಯಕಿ ಹೇಮಲತಾ ಅವರಿಂದ ಪುರಂದರದಾಸರ ಗೀತಗಾಯನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಂಧ್ಯಾ ಸುರಕ್ಷಾ ಟ್ರಸ್ಟ್‌ನ ಅಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್, ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದ ಕೆ.ಆರ್. ಯೋಗನರಸಿಂಹನ್, ಜಿಲ್ಲಾ ಕಸಾಪ ಉಪಾಧ್ಯಕ್ಷ ಎನ್.ಅನಂತ, ಆಯೋಜಕ ಎಂ.ವಿ.ನಾಗೇಂದ್ರಬಾಬು, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಮುಖಂಡ ಚಕ್ರಪಾಣಿ, ಜಿಲ್ಲಾ ಕಸಾಪ ಕಾರ್ಯದರ್ಶಿ ಲತಾಮೋಹನ್ ಮತ್ತಿತರರಿದ್ದರು.

ಮೂರನೇ ಪುಟದಿಂದ

ಸುತ್ತೂರು ಜಾತ್ರೆಗೆ ಅದ್ದೂರಿ ತೆರೆ

ಕೈಮಗ್ಗ, ಜವಳಿ, ಗ್ರಾಮೀಣ ಕರಕುಶಲ ಉತ್ಪನ್ನಗಳು, ಸ್ವಸಹಾಯ ಸಂಘಗಳು, ಸ್ತ್ರೀಶಕ್ತಿ ಸಂಘಗಳು ತಯಾರಿಸಿದ ಗೃಹಬಳಕೆ ಉತ್ಪನ್ನಗಳು ಹಾಗೂ ಗುಡಿ ಕೈಗಾರಿಕೆ ವಸ್ತುಗಳ ಪ್ರದರ್ಶನ ನೋಡುಗರ ಮನ ಸೆಳೆದವು.

ಹಲವು ಕಾರ್ಯಕ್ರಮ: ಜ.27ರಂದು ನಡೆದ ಉಚಿತ ಸಾಮೂಹಿಕ ವಿವಾಹದಲ್ಲಿ ಜಾತಿ-ಮತ ಭೇದವಿಲ್ಲದೆ ಸರ್ವಧರ್ಮಗಳ 155 ಜೋಡಿ ದಾಂಪತ್ಯ ಬದುಕಿಗೆ ಕಾಲಿಟ್ಟರು. ಸುಸ್ಥಿರ ಕೃಷಿಗಾಗಿ ನಿಖರ ಬೇಸಾಯ ತಾಂತ್ರಿಕತೆ ಶೀರ್ಷಿಕೆಯಡಿ ಸಾಂಪ್ರದಾಯಿಕ ಹಾಗೂ ಆಧುನಿಕ ತಂತ್ರಜ್ಞಾನಾಧಾರಿತ ಕೃಷಿಮೇಳ ನೋಡುಗರ ಕಣ್ಮನ ಸೆಳೆಯಿತು. ಒಂದು ಎಕರೆ ಕೃಷಿ ಬ್ರಹ್ಮಾಂಡ, ದೇಸಿ ಹಾಗೂ ವಿದೇಶಿ ತರಕಾರಿಗಳು, ಏಕದಳ, ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ವಾಣಿಜ್ಯ ಬೆಳೆಗಳು, ಮೇವಿನ ಬೆಳೆಗಳು, ವಿವಿಧ ಫಲಪುಷ್ಪಗಳು, ತೋಟಗಾರಿಕೆ ಬೆಳೆಗಳು, ರೇಷ್ಮೆಕೃಷಿ, ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳನ್ನು ಅನುಸರಿಸಿ ಬೆಳೆದಿರುವ ಸುಮಾರು 300 ಬೆಳೆಗಳು ಹಾಗೂ ವಿವಿಧ ತಳಿಗಳ ಪ್ರಾತ್ಯಕ್ಷಿಕೆಯ ಪ್ರದರ್ಶನ ರೈತರಿಗೆ ಕೃಷಿ ಕುರಿತು ಮಾರ್ಗದರ್ಶನ ನೀಡಿದ್ದವು.

ವಿಚಾರ ಸಂಕಿರಣ, ರೈತರು ಹಾಗೂ ಅವರ ಮಕ್ಕಳಿಗಾಗಿ ಕೃಷಿ ರಸಪ್ರಶ್ನೆ ಸ್ಪರ್ಧೆ, 1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಬೇರೆ ಬೇರೆ ವಿಭಾಗಗಳಲ್ಲಿ, ಸ್ಥಳದಲ್ಲೇ ವಿವಿಧ ವಿಷಯ ಕುರಿತು ಚಿತ್ರ ರಚಿಸುವ ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ ಮತ್ತು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಯೋಜಿಸಿದ್ದ ಗಾಳಿಪಟ ಸ್ಪರ್ಧೆ ಗಮನ ಸೆಳೆಯಿತು. ಜಾತ್ರೆಯ ಅಂಗವಾಗಿ ಜ.30ರಂದು ರಾಷ್ಟ್ರಮಟ್ಟದ ನಾಡ ಕುಸ್ತಿ ಪಂದ್ಯ ನಡೆದವು. ಈ ಬಾರಿ ಎರಡು ಮಾರ್ಪಿಟ್ ಕುಸ್ತಿಗಳಿದ್ದು, ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ವಿಜೇತರಿಗೆ ಸುತ್ತೂರು ಕೇಸರಿ ಪ್ರಶಸ್ತಿಯನ್ನು ಮಂಡ್ಯ ಜಿಲ್ಲೆಯ ದರಸಗುಪ್ಪೆ ಗ್ರಾಮದ ಪೈಲ್ವಾನ್ ವಿಜಯೇಂದ್ರ ಪಡೆದು ಕೊಂಡರೆ ಹೊಸಹಳ್ಳಿಯ ಪೈಲ್ವಾನ್ ಸೂರಜ್ ಸುತ್ತೂರು ಕುಮಾರ ಪ್ರಶಸ್ತಿ ಪಡೆದುಕೊಂಡರು.

ಶರಣರ ವಿಚಾರಗಳಲ್ಲಿ ಸಾಮ್ಯತೆ

ಅವರ ವಿಚಾರಗಳಿಂದ ಪ್ರಭಾವಿತನಾಗಿದ್ದೇನೆ. ಅದಕ್ಕಾಗಿಯೇ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಫೋಟೊ ಹಾಕುವುದನ್ನು ಕಡ್ಡಾಯ ಗೊಳಿಸಿದೆ ಎಂದು ತಿಳಿಸಿದರು.

ಕಲೆಗಳಿಗೆ ಸುತ್ತೂರು ಮಠದ ಪ್ರೋತ್ಸಾಹ: ಅವಿಭಜಿತ ಮೈಸೂರು ಜಿಲ್ಲೆ ಜಾನಪದದ ತವರು. ಬಹಳಷ್ಟು ಕಲಾ ಪ್ರಕಾರಗಳು ಇಲ್ಲಿವೆ. ಹೀಗಾಗಿಯೇ ಇದನ್ನು ಸಾಂಸ್ಕೃತಿಕ ರಾಜಧಾನಿ ಎನ್ನುತ್ತಾರೆ. ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಸುತ್ತೂರು ಮಠ ಕೊಡುತ್ತಿದೆ. ಧರ್ಮ ಪ್ರಚಾರ ಮಾಡುವುದಕ್ಕಷ್ಟೇ ಸೀಮಿತವಾಗದೆ ಶೈಕ್ಷಣಿಕವಾಗಿಯೂ ಬಹಳ ಕೊಡುಗೆ ಕೊಡುತ್ತಿದೆ ಎಂದು ಹೇಳಿದರು. ಸಮ ಸಮಾಜ ನಿರ್ಮಾಣವಾಗದಿದ್ದರೆ ಶೋಷಣೆ ತಪ್ಪುವುದಿಲ್ಲ. ಬಲಾಢ್ಯರ ಕೈಯಲ್ಲಷ್ಟೆ ಅಧಿಕಾರ ಇರಬಾರದು. ಎಲ್ಲರಿಗೂ ಸಿಗಬೇಕು. ಸಮಾನ ಅವಕಾಶ ಸಿಗದ ಕಾರಣ ಅಸಮಾನತೆಯ ಸಮಾಜ ನಿರ್ಮಾಣವಾಗಿದೆ. ಹಿಂದೆ ಜಾತಿಯಿಂದ ನೋಡಿ ಪ್ರತಿಭೆ, ವ್ಯಕ್ತಿತ್ವ ಅಳೆಯಲಾಗುತ್ತಿತ್ತು. ಅದು ಈಗ ಇರಬಾರದು. ಅವಕಾಶ ಬಳಸಿಕೊಳ್ಳಲು ಎಲ್ಲರೂ ವಿದ್ಯಾವಂತರಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ನಮ್ಮ 'ಭಾಗ್ಯ' ಹಾಗೂ 'ಗ್ಯಾರಂಟಿ' ಯೋಜನೆಗಳನ್ನು ಕೆಲವರು ಟೀಕಿಸುತ್ತಾರೆ. ನಾವು ಅಕ್ಕಿಯನ್ನು ಉಚಿತವಾಗಿ ಕೊಟ್ಟಿದ್ದಕ್ಕೆ ಯಾರಾದರೂ ಸೋಮಾರಿಗಳಾಗಿದ್ದಾರೆಯೇ? ಗ್ಯಾರಂಟಿ ಜಾರಿಗೊಳಿಸಿದರೆ ಖಜಾನೆ ಖಾಲಿ ಆಗುತ್ತದೆ ಎಂದು ಕೆಲವರು ಹೇಳಿದ್ದರು. ಈಗ ನಮ್ಮಲ್ಲಿ ಖಜಾನೆ ಖಾಲಿ ಆಗಿದೆಯೇ? ದಿವಾಳಿ ಆಗುತ್ತದೆ ಎಂದು ಹೇಳುತ್ತಿದ್ದವರು ಹಾಗೂ ವಿರೋಧ ಮಾಡುತ್ತಿದ್ದ ಗಿರಾಕಿಗಳೇ ಈಗ ನಮ್ಮ ಯೋಜನೆ ಕಾಪಿ ಮಾಡುತ್ತಿದ್ದಾರೆ ಎಂದು ಟೀಕಿಸಿದರು. ನಾವು ಗ್ಯಾರಂಟಿ ಅನುಷ್ಠಾನದೊಂದಿಗೆ ಅಭಿವೃದ್ಧಿ ಕೆಲಸಗಳನ್ನೂ ಮಾಡುತ್ತಿದ್ದೇವೆ. ಯಾವುದಾದರೂ ಪಿಂಚಣಿ ಕೊಡುವುದು ನಿಲ್ಲಿಸಿದ್ದೇವೆಯೇ? ನೀರಾವರಿ, ರಸ್ತೆ ನಿರ್ಮಾಣ ಸೇರಿದಂತೆ ಯಾವುದೂ ನಿಂತಿಲ್ಲ ಎಂದರು. ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ರಾಜ್ಯಕ್ಕೆ ಸೂಕ್ತ ಅನುದಾನ ಕೊಡಿ

ಕರ್ನಾಟಕವೂ ಸೇರಿದಂತೆ ಅಭಿವೃದ್ಧಿ ಪಥದಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳ ಆದ್ಯತೆಗಳನ್ನು ಗುರುತಿಸಿ ಸಂಪನ್ಮೂಲ ಹಂಚಿಕೆ ವಿಚಾರದಲ್ಲಿ ಅವುಗಳಿಗೆ ಹೆಚ್ಚಿನ ಶಕ್ತಿ ತುಂಬಬೇಕು ಮತ್ತು ಅವುಗಳ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದಿದ್ದಾರೆ. ಇದರಿಂದ ದೇಶಕ್ಕೆ ಹೆಚ್ಚು ಲಾಭವಿದ್ದು, ಈ ರಾಜ್ಯಗಳ ಸಾಧನೆಯ ಪಾಲು ಇತರ ರಾಜ್ಯಗಳಿಗೂ ಸಹಜವಾಗಿಯೇ ಸಲ್ಲುತ್ತದೆ. ಕೇಂದ್ರ ಸರ್ಕಾರ ಕರ್ನಾಟಕದ ಬಗ್ಗೆ ಅನುಸರಿಸುತ್ತಿರುವ ತಾರತಮ್ಯ ಧೋರಣೆ ಜಗಜ್ಜಾಹೀರಾಗಿದೆ. ನಮ್ಮ ಒಕ್ಕೂಟ ವ್ಯವಸ್ಥೆ ಬಲಿಷ್ಠವಾಗಿರಬೇಕಾದರೆ, ಕೇಂದ್ರ ತಾರತಮ್ಯರಹಿತ, ನ್ಯಾಯಸಮ್ಮತ, ಪಾರದರ್ಶಕ ನೀತಿ ತನ್ನದಾಗಿಸಿಕೊಳ್ಳಬೇಕು. ರಾಜ್ಯಗಳನ್ನು ಸಂಪನ್ಮೂಲ ಸಂಗ್ರಹಣೆ ಮಾಡುವ ಘಟಕಗಳೆಂದು ನೋಡದೆ, ಅವುಗಳ ಕಷ್ಟ-ಸುಖಗಳಿಗೆ ಮಾನವೀಯವಾಗಿ ಸ್ಪಂದಿಸಬೇಕು ಎಂದಿದ್ದಾರೆ.

ನಿಮ್ಮ ರಕ್ಷಣೆಗೆ ನಾವಿದ್ದೇವೆ...

ನೀಡಿದರೆ, ಅಂತಹವರ ವಿರುದ್ಧ ದೂರು ನೀಡಬೇಕು. ನಿಮ್ಮ ರಕ್ಷಣೆಗೆ ಸರ್ಕಾರವಿದೆ ಎಂದು ಅಭಯ ನೀಡಿದರು.

ಜನರು ಸಾಲ ಲಭ್ಯವಾಗುವ ಕಡೆ ಸಾಲ ಪಡೆಯುತ್ತಿದ್ದಾರೆ. ಖಾಸಗಿ ಹಣಕಾಸು ಸಂಸ್ಥೆ, ಲೇವಾದೇವಿದಾರರು ನೀಡುವ ಸಾಲದ ಮೇಲೆ ಹೆಚ್ಚಿನ ಬಡ್ಡಿ ದರ ಹಾಕುವುದಲ್ಲದೇ, ಗೂಂಡಾಗಳ ಮೂಲಕ ಜನರನ್ನು ಹೆದರಿಸಿ, ಅಮಾನವೀಯ ರೀತಿಯಲ್ಲಿ ಕೊಟ್ಟಂತಹ ಸಾಲ ವಸೂಲಾತಿಯಲ್ಲಿ ತೊಡಗಿದ್ದಾರೆ. ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಶೇ.28ರಿಂದ 30ರಷ್ಟು ಬಡ್ಡಿ ವಸೂಲಿ ಮಾಡುತ್ತಿವೆ. ಇದರಿಂದ ಸಾಲ ಪಡೆದ ಜನರು ಬೇಸತ್ತು, ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಹಾಗಾಗಿ ಮೈಕ್ರೋ ಫೈನಾನ್ಸ್ ವ್ಯವಸ್ಥೆಗಳು ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸುತ್ತವೆ. ಆದ್ದರಿಂದ ಇವುಗಳ ನಿಯಂತ್ರಣಕ್ಕೆ ಸರ್ಕಾರ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದು, ಕಿರುಕುಳ ನೀಡುತ್ತಿರುವ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದೆ ಎಂದರು.

ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯ: ಕೇಂದ್ರದ ಬಜೆಟ್ ಅಧಿವೇಶನದಿಂದ ರಾಜ್ಯದ ನಿರೀಕ್ಷೆಗಳ ಬಗ್ಗೆ ಪ್ರತಿಕ್ರಿಯೆ ನೀಡಿ, ಕೇಂದ್ರ ಸರ್ಕಾರದವರು ರಾಜ್ಯಕ್ಕೆ ತಮ್ಮ ಹಿಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಿದ ಅನುದಾನವನ್ನು ನೀಡಿಲ್ಲ. 2023-24ರ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ. ಘೋಷಣೆ ಮಾಡಿದ್ದರು. ಆದರೆ, ಇದುವರೆಗೂ ಒಂದು ರೂಪಾಯಿ ಬಿಡುಗಡೆಯಾಗಿಲ್ಲ. ಕೇವಲ ಘೋಷಣೆಗೆ ಮಾತ್ರ ಭರವಸೆ ಸೀಮಿತಗೊಂಡಿದೆ. ಜನರನ್ನು ದಿಕ್ಕು ತಪ್ಪಿಸುವ ಕೆಲಸ ಬಿಜೆಪಿ ಮಾಡುತ್ತಿದೆ. ಕೇಂದ್ರ ಸರ್ಕಾರ ರಾಜ್ಯದ ವಿಚಾರದಲ್ಲಿ ಅನುಸರಿಸುತ್ತಿರುವ ಮಲತಾಯಿ ಧೋರಣೆಯನ್ನು ಬಿಜೆಪಿ ಸಂಸದರು ಖಂಡಿಸುತ್ತಿಲ್ಲ. ಆದರೆ, ರಾಜ್ಯ ಸರ್ಕಾರದ ಮೇಲೆ ಸುಳ್ಳು ಆರೋಪ ಮಾಡುವ ಮೂಲಕ ರಾಜಕೀಯ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಅತಿದೊಡ್ಡ ಆರ್ಥಿಕ ದೇಶ

ಸರ್ಕಾರದ ಮೂರನೇ ಅವಧಿಯು ಹಿಂದಿನ ಆಡಳಿತಗಳಿಗಿಂತ ಮೂರು ಪಟ್ಟು ವೇಗದಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳಿದ್ದಾರೆ. ಸೈಬರ್ ಭದ್ರತೆ ಯಲ್ಲಿ ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ನಿರಂತರವಾಗಿ ಕೆಲಸ ಮಾಡುತ್ತಿದೆ. ಡಿಜಿಟಲ್ ವಂಚನೆ, ಸೈಬರ್ ಅಪರಾಧ ಮತ್ತು ಡೀಪ್‌ಫೇಕ್ ಸಾಮಾಜಿಕ, ಹಣಕಾಸು ಮತ್ತು ರಾಷ್ಟ್ರೀಯ ಭದ್ರತೆಗೆ ಗಂಭೀರ ಸವಾಲುಗಳಾಗಿವೆ ಎಂದರು. ನಾವು ದೇಶವನ್ನು ಹಸಿರು ಭವಿಷ್ಯ ಮತ್ತು ಹಸಿರು ಉದ್ಯೋಗಗಳತ್ತ ಮುನ್ನಡೆಸುತ್ತಿದ್ದೇವೆ. 2030ರ ವೇಳೆಗೆ 500 ಗಿಗಾವ್ಯಾಟ್ ಪಳೆಯುಳಿಕೆಯೇತರ ಇಂಧನ ಸಾಮರ್ಥ್ಯದ ಗುರಿಯನ್ನು ಸಾಧಿಸಲು ಹಲವಾರು ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಇಂದು ಭಾರತವು ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಮುಖ ಜಾಗತಿಕ ಪಾಲುದಾರನಾಗಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಿದೆ. ವಿಶ್ವದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಸಹ ಭಾರತದ ಯುಪಿಐ ವಹಿವಾಟು ವ್ಯವಸ್ಥೆಯ ಯಶಸ್ಸಿನಿಂದ ಪ್ರಭಾವಿತವಾಗಿವೆ. ಸರ್ಕಾರ ಡಿಜಿಟಲ್ ತಂತ್ರಜ್ಞಾನವನ್ನು ಸಾಮಾಜಿಕ ನ್ಯಾಯ ಮತ್ತು ಸಮಾನತೆಗಾಗಿ ಒಂದು ಸಾಧನವಾಗಿ ಬಳಸಿದೆ. ಎಂಎಸ್‌ಎಂಇ ಗಳಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆ ಮತ್ತು ಇ-ಕಾಮರ್ಸ್ ರಫ್ತು ಕೇಂದ್ರಗಳು ದೇಶದ ಎಲ್ಲಾ ವಲಯಗಳಲ್ಲಿ ವ್ಯವಹಾರವನ್ನು ಪ್ರೋತ್ಸಾಹಿಸುತ್ತಿವೆ ಎಂದರು.

ಭಾರತ ದೇಶದ ಗಡಿಗಳನ್ನು ರಕ್ಷಿಸಲು ಮತ್ತು ಆಂತರಿಕ ಭದ್ರತೆಯನ್ನು ಖಚಿತ ಪಡಿಸಿಕೊಳ್ಳಲು ಹಲವಾರು ಐತಿಹಾಸಿಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ರಕ್ಷಣಾ ವಲಯದಲ್ಲಿ ಸ್ವಾವಲಂಬನೆಯತ್ತ ಸರ್ಕಾರವು ಕ್ರಮಗಳನ್ನು ತೆಗೆದುಕೊಂಡಿದೆ. ಮೇಕ್ ಇನ್ ಇಂಡಿಯಾದಿಂದ, ನಾವು ಜಗತ್ತನ್ನು ರೂಪಿಸಲು ಮುಂದಾಗಿದ್ದೇವೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಎಲ್ಲಾ ನಾಗರಿಕರಿಗೆ ಆರೋಗ್ಯ ಸೇವೆಗಳನ್ನು ಖಚಿತಪಡಿಸಿಕೊಳ್ಳಲು, ದೇಶದಲ್ಲಿ 1.75 ಲಕ್ಷ 'ಆರೋಗ್ಯ ಮಂದಿರ'ವನ್ನು ಸ್ಥಾಪಿಸಲಾಗಿದೆ. ಹೆಚ್ಚುತ್ತಿರುವ ಕ್ಯಾನ್ಸರ್ ರೋಗಿಗಳ ಸಂಖ್ಯೆ ಯನ್ನು ಗಮನಿಸಿ, ಅನೇಕ ಕ್ಯಾನ್ಸರ್ ಔಷಧಿಗಳ ಮೇಲಿನ ಕಸ್ಟಮ್ ಸುಂಕವನ್ನು ಮನ್ನಾ ಮಾಡಲಾಗಿದೆ ಎಂದರು.

ಇಡಿ ನನ್ನ ಟಾರ್ಗೆಟ್ ಮಾಡುತ್ತಿದೆ

ಮನೆಯಲ್ಲಿ ಶೋಧನೆ ನಡೆಸಿದ್ದು ಎಲ್ಲವೂ ಕಾನೂನು ಬಾಹಿರ ಎಂದು ಆರೋಪಿಸಿದ್ದರು. ಅದನ್ನು, ನ್ಯಾಯಾಲಯವು ಪುರಸ್ಕರಿಸಿದೆ. ಅಂದರೆ ಮುಡಾ ಪ್ರಕರಣದಲ್ಲಿ ಹಣ ವರ್ಗಾವಣೆ ಆಗಿಲ್ಲ ಎಂದರ್ಥ ಎಂದು ಸ್ಪಷ್ಟಪಡಿಸಿದರು.

ಮುಡಾ ಪ್ರಕರಣದ ಮೂಲಕ ಸಿದ್ದರಾಮಯ್ಯನವರ ತೇಜೋವಧೆ ಮಾಡಲಾಗುತ್ತಿದೆಯೇ ಎಂಬ ಪ್ರಶ್ನೆಗೆ ಕರ್ನಾಟಕ ಮುಖ್ಯಮಂತ್ರಿಯಾಗಿರುವ ಕಾರಣದಿಂದ ನನ್ನ ತೇಜೋವಧೆ ಮಾಡಲಾಗುತ್ತಿದೆ. ನನ್ನ ಶ್ರೀಮತಿಯವರಿಗೆ ಇಡಿ ನೋಟಿಸ್ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತರಲಾಗಿದೆ. ನನ್ನ ವರ್ಚಸ್ಸಿಗೆ ಭಂಗ ತರಬೇಕೆಂಬ ದುರುದ್ದೇಶದಿಂದ, ಇಂತಹ ಕುಕೃತ್ಯಗಳನ್ನು ಮಾಡಲಾಗುತ್ತಿದೆ. ಆದರೆ ಅವರ ಪ್ರಯತ್ನಗಳು ಸಫಲವಾಗಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಬಿಜೆಪಿಯೇ ಇಲ್ಲ ಎಂಬ ಕಾಲ ಹೋಯ್ತು!

ಮೆರೆಯುತ್ತಿದ್ದಾರೆ. ಜಿಲ್ಲಾಧ್ಯಕ್ಷರ ನೇಮಕ ವಿಚಾರದಲ್ಲೂ ಇದೇ ನಡೆ ಪ್ರದರ್ಶಿಸಿದ್ದಾರೆ ಎಂದು ದೂರಿದ ಅವರು, ಇಂದಿನ ಸಭೆಯಲ್ಲಿ ಮಹತ್ವದ ಚರ್ಚೆಗಳು ನಡೆದಿವೆ. ವಿಜಯೇಂದ್ರ ಎದುರು ಚುನಾವಣೆಗೆ ಯಾರನ್ನು ಕಣ್ಣಕ್ಕಿಳಿಸಬೇಕು ಎಂಬುದರ ಬಗ್ಗೆಯೂ ಚರ್ಚೆ ನಡೆದಿದೆ. ನಮ್ಮ ಬಣದಿಂದ ಅಭ್ಯರ್ಥಿ ಹೆಸರು ಇನ್ನೆರಡು ದಿನಗಳಲ್ಲಿ ಘೋಷಣೆಯಾಗುವ ಸಾಧ್ಯತೆ ಇದೆ ಎಂದು ಹೇಳಿದರು.

ನಮ್ಮ ಬಣ ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿಯಾಗಲು ನಿರ್ಧರಿಸಿದ್ದೇವೆ. ದೆಹಲಿಯಲ್ಲೇ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿ ಹೆಸರನ್ನು ಘೋಷಿಸುವುದಾಗಿಯೂ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.

ಜಿಲ್ಲಾಧ್ಯಕ್ಷರ ಆಯ್ಕೆ ವಿಚಾರದಲ್ಲಿ ವಿಜಯೇಂದ್ರ ಅವರು ಕೇಂದ್ರ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ವಿಜಯೇಂದ್ರ ರಾಜ್ಯಾಧ್ಯಕ್ಷರಾದ ಮೇಲೆ ಪದಾಧಿಕಾರಿಗಳ ಆಯ್ಕೆ ಬಗ್ಗೆಯೂ ಯಾರ ಮಾತನ್ನೂ ಕೇಳಲಿಲ್ಲ. ಸ್ಟೇರಿಂಗ್ ಇಲ್ಲದ ಗಾಡಿಯಂತೆ ವಿಜಯೇಂದ್ರ ಮನಬಂದಂತೆ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ. ಈಗಾಗಲೇ ವಿಜಯೇಂದ್ರ ವಿರುದ್ಧ ಜೆ.ಪಿ.ನಡ್ಡಾ ಅವರಿಗೆ ಪತ್ರ ಬರೆಯಲಾಗಿದೆ. ಇದು ನೂರಕ್ಕೆ ನೂರರಷ್ಟು ಸತ್ಯ. ಇದರಲ್ಲಿ ಯಾರೆಲ್ಲ ಸಹಿ ಹಾಕಿದ್ದಾರೆ ಎಂದು ಬಹಿರಂಗಪಡಿಸಲು ಸಾಧ್ಯವಿಲ್ಲ. ಪಕ್ಷದ ಆಂತರಿಕ ವಿಚಾರವಾದ್ದರಿಂದ ತಮ್ಮ ಹೆಸರು ಬಹಿರಂಗಪಡಿಸದಂತೆ ಮನವಿ ಮಾಡಿದ್ದಾರೆ. ಒಟ್ಟಾರೆ ವಿಜಯೇಂದ್ರ ಅವರ ನಡೆ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯ ಮಾಡಿದ್ದೇವೆ ಎಂದು ಯತ್ನಾಳ್ ಹೇಳಿದ್ದಾರೆ.

8ನೇ ಬಜೆಟ್ ಮಂಡನೆ

ನಿರೀಕ್ಷೆಯಿದೆ. 2019ರಲ್ಲಿ ಮೋದಿ ಸರ್ಕಾರದ 2ನೇ ಅವಧಿಯಲ್ಲಿ ಪೂರ್ಣಾವಧಿ ವಿತ್ತ ಸಚಿವೆಯಾಗಿ ನೇಮಕಗೊಂಡ ನಿರ್ಮಲಾ ಅವರು ಒಟ್ಟು 7 ಪೂರ್ಣಾವಧಿ ಹಾಗೂ 2024ರ ಫೆಬ್ರವರಿಯಲ್ಲಿ 1 ಮಧ್ಯಂತರ ಬಜೆಟ್ ಮಂಡಿಸಿದ್ದರು. ಇನ್ನು ಕೇವಲ 3 ಬಜೆಟ್ ಮಂಡಿಸಿದರೆ ಒಟ್ಟು 11 ಬಜೆಟ್ ಮಂಡಿಸಿದ ಸಾರ್ವಕಾಲಿಕ ದಾಖಲೆ ಸೃಷ್ಟಿಸಲಿದ್ದಾರೆ. ಈವರೆಗೆ ವಿವಿಧ ಸರ್ಕಾರಗಳ ಅವಧಿಯಲ್ಲಿ 10 ಬಾರಿ ಬಜೆಟ್ ಮಂಡಿಸಿದ ಖ್ಯಾತಿಗೆ ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಪಾತ್ರರಾಗಿದ್ದಾರೆ. ಉಳಿದಂತೆ ವಿತ್ತ ಸಚಿವರಾಗಿದ್ದ ಪಿ. ಚಿದಂಬರಂ 9 ಬಾರಿ ಹಾಗೂ ಪ್ರಣಬ್ ಮುಖರ್ಜಿ 8 ಬಾರಿ ಬಜೆಟ್ ಮಂಡಿಸಿದ್ದಾರೆ. ಫೆ.1ರಂದೇ ಬಜೆಟ್ ಮಂಡಿಸುವ ನಿಯಮ ಜಾರಿಗೆ ಬಂದ ನಂತರ ಶನಿವಾರ ಮಂಡನೆಯಾಗುತ್ತಿರುವ 2ನೇ ಬಜೆಟ್ ಇದು. ಸಾಮಾನ್ಯವಾಗಿ ಶನಿವಾರದಂದು ರಜೆ ಇರುವ ಷೇರುಪೇಟೆಯೂ ಕಾರ್ಯನಿರ್ವಹಿಸಲಿದೆ. 2020ರಲ್ಲೂ ಇದೇ ರೀತಿ ಆಗಿತ್ತು.

ತಾಂತ್ರಿಕತೆ ಮೂಲಕ ಹಾಡಿ ಜನರ ಸಮೀಕ್ಷೆ ನಡೆಸಬೇಕು



ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಆವರಣದಲ್ಲಿ ಪರಿಶಿಷ್ಟ ಪಂಗಡ ಇಲಾಖಾ ಕಾರ್ಯದರ್ಶಿ ಡಿ.ರಂದೀಪ್ ನೇತೃತ್ವದಲ್ಲಿ ಪ್ರಗತಿ ಪರಿಶೀಲನಾ ಸಭೆ


ಮೈಸೂರು,ಜ.31(ಎಸ್‌ಪಿಎನ್)- ಸಂಶೋಧಕರು ಹಾಡಿ ಜನರ ಬಗ್ಗೆ ಅಧ್ಯಯನ ಮಾಡುವಾಗ ತಾಂತ್ರಿಕತೆ ಅಳವಡಿಸಿಕೊಂಡು ಸಮೀಕ್ಷೆ ಮಾಡಬೇಕು ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಡಿ.ರಂದೀಪ್ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಗಳಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಅಧ್ಯಯನ ಮಾಡುತ್ತಿರುವವರು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವುದರೊಂದಿಗೆ ಸಮಗ್ರ ವರದಿ ಜೊತೆಗೆ ಸಂಕ್ಷಿಪ್ತ ವರದಿಯ ಮುಖ್ಯಾಂಶಗಳನ್ನು ನೀಡಬೇಕು ಎಂದರು.

ಯಾವುದೇ ಬುಡಕಟ್ಟು ಸಮುದಾಯ ಅಧ್ಯಯನದಲ್ಲಿ ಆ ಜನರ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡುವಾಗ ಬೇರೆ ಪಂಗಡಗಳನ್ನು ಹೋಲಿಕೆ ಮಾಡಿ ಅಧ್ಯಯನ ಮಾಡಬೇಕು. ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಶೋಧನೆ ಮಾಡಬೇಕು. ಬುಡಕಟ್ಟು ಜನರ ಪರಿಕರಗಳ ಸಂರಕ್ಷಣೆ ಮಾಡಿ ಮ್ಯೂಜಿಯಂನಲ್ಲಿಡಲು ರೂಪುರೇಷೆಗಳ ಸಮಗ್ರ ವರದಿ, ಕ್ರಿಯಾ ಯೋಜನೆ ರೂಪಿಸಬೇಕು ಎಂದರು.

ಬುಡಕಟ್ಟು ಉತ್ಸವಗಳನ್ನು ಆಯೋಜನೆ ಮಾಡಲು ಚಿಂತನೆ ನಡೆಸಲಾಗುವುದು ಎಂದರು. ಸಭೆಯಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ಟಿ.ಯೋಗೀಶ್, ಉಪ ನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ಸಂಶೋಧನಾಧಿಕಾರಿ ಕೆ.ಶ್ರೀನಿವಾಸ್, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಸಿ.ಶಿವಕುಮಾರ್, ಡಾ.ಮೋಹನ್, ಡಾ.ಮಂಜುನಾಥ್, ಡಾ.ಕಲಾವತಿ, ಡಾ.ಕೃಷ್ಣಮೂರ್ತಿ, ಕಚೇರಿ ಅಧೀಕ್ಷಕ ಗುಣಧರ್, ವೈ.ಪಿ.ಹೇಮಚಂದ್ರ ಇತರೆ ಸಿಬ್ಬಂದಿ ಉಪಸ್ಥಿತರಿದ್ದರು.

ಶುಭಾಶಯ



ಶುಕ್ರವಾರ ಹುಟ್ಟುಹಬ್ಬ ಆಚರಿಸಿಕೊಂಡ ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ ಅವರನ್ನು ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ವರುಣ ಜೆಡಿಎಸ್ ಅಧ್ಯಕ್ಷ ಬಾಲಕೃಷ್ಣ, ಎಂ. ಕುಮಾರ್ ಬೀಡನಹಳ್ಳಿ, ಮಹೇಶ್, ನಾಗರಾಜು, ಉಮೇಶ್ ಇತರರು ಅಭಿನಂದಿಸಿ, ಶುಭಾಶಯ ಕೋರಿದರು.

ಸ್ನೇಹಮಯಿ ಕೃಷ್ಣ ಫೋಟೋಗೆ ರಕ್ತಾಭಿಷೇಕ: ಬಲಿ ಚೀಟಿಯಲ್ಲಿ ಮಹಿಳಾ ಪಿಎಸ್ಐ ಹೆಸರು ಪತ್ತೆ

ಮಂಗಳೂರು, ಜ.31– ಪ್ರಾಣಿ ಬಲಿ ಕೊಟ್ಟು ಅದರ ರಕ್ತವನ್ನು ಮುಡಾ ಹಗರಣದ ದೂರುದಾರ ಸ್ನೇಹಮಯಿ ಕೃಷ್ಣ ಮತ್ತು ಆರ್‌ಟಿಐ ಕಾರ್ಯಕರ್ತ ಗಂಗರಾಜು ಫೋಟೋಗೆ ಹಚ್ಚಿರುವ ವಿಡಿಯೋ ಪತ್ತೆ ಆಗಿದ್ದು, ಇದೀಗ ಅದೇ ಬಲಿ ಚೀಟಿಯಲ್ಲಿ ಪ್ರಸಾದ್ ಅತ್ತಾವರ ಪತ್ನಿ, ಉಡುಪಿ ಮಹಿಳಾ ಠಾಣೆಯ ಪಿಎಸ್ಐ ಆಗಿರುವ ಸುಮಾ ಆಚಾರ್ಯ ಹೆಸರು ಕೂಡ ಇರುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.



ಮಂಗಳೂರಿನ ಸ್ಪಾ ಮತ್ತು ಪಾರ್ಲರ್ ಮೇಲಿನ ದಾಳಿ ಕೇಸ್‌ನಲ್ಲಿ ಒಂದು ವಾರದ ಹಿಂದೆ ರಾಮಸೇನಾ ಮುಖ್ಯಸ್ಥ ಪ್ರಸಾದ್ ಅತ್ತಾವರ್ ಬಂಧನವಾಗಿತ್ತು. ಪೊಲೀಸರು ಅತ್ತಾವರ ಮೊಬೈಲ್ ಫೋನ್ ಪರಿಶೀಲಿಸಿದ್ದಾಗ, ಸ್ನೇಹಮಯಿ ಕೃಷ್ಣ ಹಾಗೂ ಗಂಗರಾಜುಗೆ ಬಲ ತುಂಬಲು 5 ಕುರಿಗಳನ್ನು ದೇವಿಗೆ ಬಲಿ ಕೊಟ್ಟಿರೋ ವಿಡಿಯೋ ಬಯಲಾಗಿದೆ.

ಈ ವಿಚಾರವಾಗಿ ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗರ್‌ವಾಲ್ ಪ್ರತಿಕ್ರಿಯಿಸಿದ್ದು, ಒಂದು ವಾರದ ಹಿಂದೆ ಪ್ರಸಾದ್ ಅತ್ತಾವರ ಬಂಧನ ಮಾಡಲಾಗಿತ್ತು. ಬಂಧಿತ ಪ್ರಸಾದ್ ಅತ್ತಾವರ ಮೊಬೈಲ್ ಫೋನ್ ಪರಿಶೀಲನೆ ಮಾಡಿದಾಗ ಮೊಬೈಲ್ ವಿಡಿಯೋದಲ್ಲಿ ದೇವಸ್ಥಾನದಲ್ಲಿ ಬಲಿ ಕೊಡುವ ದೃಶ್ಯ ಇತ್ತು. ಸ್ನೇಹಮಯಿ ಕೃಷ್ಣ, ಗಂಗರಾಜು ಬಲ ತುಂಬುವುದಕ್ಕೆ ಈ ರೀತಿ ಮಾಡುತ್ತಿದ್ದರು. 5 ಕುರಿಗಳನ್ನು ಬಲಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.

ಎಲ್ಲಿ ಆಗಿದ್ದೆಂದು ಸ್ಪಷ್ಟತೆ ಇಲ್ಲ, ಅನಂತ್ ಭಟ್ ಯಾರೆಂದು ತನಿಖೆ ಮಾಡ್ತಿದ್ದೇವೆ. ಪ್ರಸಾದ್ ಅತ್ತಾವರ ಮೊಬೈಲ್ ವಾಟ್ಸಾಪ್‌ನಲ್ಲಿ ಈ ವಿಡಿಯೋ ಇತ್ತು. ಪ್ರಾರಂಭಿಕ ಮಾಹಿತಿ ಪ್ರಕಾರ ಸ್ನೇಹಮಯಿ ಕೃಷ್ಣ, ಗಂಗರಾಜುಗಾಗಿ ಮಾಡಲಾಗಿದೆ. ನಿನ್ನೆ ರಾತ್ರಿ ಸ್ವಯಂಪ್ರೇರಿತ ಕೇಸ್ ದಾಖಲಿಸಿ ತನಿಖೆ ನಡೆಸುತ್ತಿದ್ದೇವೆ. ಪ್ರಾಣಿಬಲಿ ಪದ್ಧತಿ ನಿಷೇಧ ಇದೆ, ಹಣದ ಬ್ಯಾಗ್‌ನ ಫೋಟೋ ಸಹ ಇತ್ತು. ಅನಂತ್ ಭಟ್‌ಗಾಗಿ ಹುಡುಕಾಟ ನಡೆಯುತ್ತಿದೆ, ತನಿಖೆಯಲ್ಲಿ ಎಲ್ಲಾ ಗೊತ್ತಾಗುತ್ತೆ ವಾಟ್ಸಾಪ್‌ನಲ್ಲಿ ವಿಡಿಯೋ ಚಾಟ್ ಸಿಕ್ಕಿದೆ, ವಿಡಿಯೋ ಡಿಲೀಟ್ ಆಗಿರಲಿಲ್ಲ ಎಂದಿದ್ದಾರೆ.

ಇಷ್ಟೆಲ್ಲ ಬೆಳವಣಿಗೆ ಮಧ್ಯೆ ಮೈಸೂರಿನಲ್ಲಿ ಮಾತನಾಡಿದ್ದ ಸ್ನೇಹಮಯಿ ಕೃಷ್ಣ, ನನ್ನ ವಶಪಡಿಸಿಕೊಳ್ಳಲು ಈ ರೀತಿ ಮಾಡಿರಬಹುದು ಎಂದು ಹೇಳಿದ್ದಾರೆ.

ಸ್ನೇಹಮಯಿ ಕೃಷ್ಣ ಲೋಕಾಯುಕ್ತಗೆ ದೂರು ನೀಡಿರುವ ಭೂಮಿ ವ್ಯವಹಾರದಲ್ಲಿ ಜಿ.ಟಿ.ದೇವೇಗೌಡರ ಕುಟುಂಬ ಭಾಗಿಯಾಗಿಲ್ಲ

ಜಮೀನು ಮೂಲ ಮಾಲೀಕರ ವಾರಸುದಾರರಾದ ನಾಗೇಂದ್ರ, ಶಿವಲಿಂಗಸ್ವಾಮಿ ಸಹೋದರರ ಸ್ಪಷ್ಟನೆ

ಮೈಸೂರು, ಜ.31– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು 50:50 ಅನುಪಾತದಲ್ಲಿ ಮುಡಾದಿಂದ ಬೇನಾಮಿ ಹೆಸರಿನಲ್ಲಿ 19 ನಿವೇಶನ ಪಡೆದಿದ್ದಾರೆ ಎಂದು ಲೋಕಾಯುಕ್ತ ಹಾಗೂ ಇಡಿಗೆ ನೀಡಿರುವ ದೂರಿನಲ್ಲಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಉಲ್ಲೇಖಿಸಿರುವ ಜಮೀನು ಮಾಲೀಕರ ವಾರಸುದಾರರಿಬ್ಬರು ಸದರಿ ಜಮೀನು ವ್ಯವಹಾರದಲ್ಲಿ ಜಿ.ಟಿ.ದೇವೇಗೌಡರ ಕುಟುಂಬ ಭಾಗಿಯಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಶಾಸಕರಾದ ಜಿ.ಟಿ.ದೇವೇಗೌಡರು ಹಾಗೂ ಅವರ ಪುತ್ರ ಜಿ.ಡಿ.ಹರೀಶ್ ಗೌಡರ ಮೇಲೆ ಮೈಸೂರು ಲೋಕಾಯುಕ್ತ ಕಚೇರಿ ಹಾಗೂ ಅಂಚೆ ಮೂಲಕ ಇಡಿಗೆ ಮೊನ್ನೆ ದೂರು ನೀಡಿದ ಸ್ನೇಹಮಯಿ ಕೃಷ್ಣ, ಜಿ.ಟಿ.ದೇವೇಗೌಡರ ಸಹೋದರಿಯ ಮಗ ಮಹೇಂದ್ರ ಮೈಸೂರಿನ ದೇವನೂರು ಗ್ರಾಮದ ರೈತರಿಂದ ಸರ್ವೆ ನಂಬರ್ 81/2ರಲ್ಲಿ 2.22 ಎಕರೆ ಜಮೀನು ಖರೀದಿ ಮಾಡಿದ್ದರು. ಆ ಜಮೀನನ್ನು ಮುಡಾ ಸ್ವಾಧೀನಪಡಿಸಿಕೊಂಡರೂ ಪರಿಹಾರ ನೀಡಿಲ್ಲವೆಂದು, ನಂತರ 50:50 ಅನುಪಾತದಲ್ಲಿ 19 ನಿವೇಶನ ಪಡೆದಿದ್ದಾರೆ. ಇದಕ್ಕೆ ಜಿ.ಟಿ.ದೇವೇಗೌಡರು ಪ್ರಭಾವ ಬೀರಿದ್ದಾರೆ. ಜಿ.ಟಿ.ದೇವೇಗೌಡರು ಹಾಗೂ ಅವರ ಪುತ್ರ ಜಿ.ಡಿ.ಹರೀಶ್‌ಗೌಡರು ಮಹೇಂದ್ರ ಮನೆಗೆ ಹೋಗಿ ಮಾತುಕತೆ ನಡೆಸಿ, ಚೆಕ್ ನೀಡಿದ್ದಾರೆ ಎಂದು ಆಪಾದಿಸಿದ್ದರು.

ಈ ಸಂಬಂಧ ಪ್ರತಿಕ್ರಿಯಿಸಿದ ಜಿ.ಟಿ.ದೇವೇಗೌಡರು, ನನ್ನ ಸಹೋದರಿ ಮಗ ಮಹೇಂದ್ರ ಕಾನೂನು ಬಾಹಿರವಾಗಿ ನಿವೇಶನ ಪಡೆದಿದ್ದರೆ ಸೂಕ್ತ ತನಿಖೆ ಮಾಡಿ ಸತ್ಯಾಂಶ ಬಯಲಿಗೆಳೆಯಲಿ ಎಂದು ಸವಾಲು ಹಾಕಿದ್ದರು. ಇದೀಗ ಜಮೀನಿನ ಮೂಲ ಮಾಲೀಕರ ವಾರಸುದಾರರಾದ ವೀರನಗೆರೆಯ ಪಿ.ನಾಗೇಂದ್ರ ಹಾಗೂ ಶಿವಲಿಂಗಸ್ವಾಮಿ ಪತ್ರಿಕಾ ಹೇಳಿಕೆ ಮೂಲಕ ಸ್ಪಷ್ಟನೆ ನೀಡಿ, ಸ್ನೇಹಮಯಿ ಕೃಷ್ಣ ಅವರ ಆರೋಪವನ್ನು ನಿರಾಕರಿಸಿದ್ದಾರೆ.

ಸ್ಪಷ್ಟನೆ: ಮೈಸೂರು ತಾಲೂಕು, ಕಸಬಾ ಹೋಬಳಿ, ದೇವನೂರು ಗ್ರಾಮದ ಸರ್ವೆ ನಂ.81/2ರ 2.22 ಎಕರೆ ಹಾಗೂ ಸರ್ವೆ ನಂ.81/1ರ 1.21 ಎಕರೆ ಸೇರಿದಂತೆ ಒಟ್ಟು 4.03 ಎಕರೆ ಜಮೀನು ನಮ್ಮ ತಾತನವರಾದ ಬಸವಯ್ಯ ಬಿನ್ ಲಿಂಗಪ್ಪ ಅವರಿಗೆ ಸೇರಿದ ಸ್ವತ್ತಾಗಿರುತ್ತದೆ. ಆರ್‌ಟಿಸಿಯಲ್ಲೂ ಸಹ ಸದರಿ ಜಮೀನು ನಮ್ಮ ತಾತ ಬಸವಯ್ಯನವರ ಹೆಸರಿನಲ್ಲೇ ಇತ್ತು. ಆ ಜಮೀನಿಗೆ ಸಂಬಂಧಪಟ್ಟಂತೆ ನಮ್ಮ ತಾತ ಬಸವಯ್ಯನವರ ತಮ್ಮ ಬಸವಲಿಂಗಪ್ಪ ಸಿವಿಲ್ ನ್ಯಾಯಾಲಯದಲ್ಲಿ ವಿಭಾಗದ ದಾವೆ(ಧಾವೆ ಸಂಖ್ಯೆ 696/2011) ಹೂಡಿದರು. ಬಳಿಕ ಬಸವಯ್ಯನವರ ವಾರಸುದಾರರಾದ ನಾವುಗಳು ಮತ್ತು ಬಸವಲಿಂಗಪ್ಪರವರ ವಾರಸುದಾರರು ನ್ಯಾಯಾಲಯದಲ್ಲಿ ರಾಜೀ ಮಾಡಿಕೊಂಡೆವು.

ಆ ಡಿಕ್ರಿಯ ಪ್ರಕಾರ ನಮ್ಮ ತಾತ ಬಸವಯ್ಯನವರ ಪಾಲಿಗೆ ಸರ್ವೆ ನಂ.81/2ರ 2.22 ಗುಂಟೆ ಜಮೀನು ಸೇರಿತು. ನಂತರ ನ್ಯಾಯಾಲಯದ ಡಿಕ್ರಿ ಅನ್ವಯ ನಮ್ಮ ಕುಟುಂಬದ 6 ಜನ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ 10/02/2020ರಂದು ನೋಂದಣಿ ಮಾಡಿಕೊಂಡೆವು. ಆ ಡಿಕ್ರಿ ಮತ್ತು ನೋಂದಣಿ ಪತ್ರ ಆಧಾರದಲ್ಲಿ ಬಸವಯ್ಯನವರ ವಾರಸುದಾರರಾದ ಆರೂ ಜನರ ಹೆಸರಿಗೆ ಪಿತ್ರಾರ್ಜಿತವಾಗಿ ಬಂದ 2.22 ಎಕರೆ ಜಮೀನು ಆರ್‌ಟಿಸಿಯಲ್ಲಿ ಜಂಟಿ ಖಾತೆ ಆಯಿತು. ಸದರಿ ಸರ್ವೆ ನಂ.81/2ಕ್ಕೆ ಸಂಬಂಧಪಟ್ಟಂತೆ ಮುಡಾ ಭೂಸ್ವಾಧೀನಪಡಿಸಿಕೊಳ್ಳಲು 4(1) ಅಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತು. ಆದರೆ 6(1) ಅಂತಿಮ ಅಧಿಸೂಚನೆ ಹೊರಡಿಸಿಲ್ಲವೆಂದು ಮುಡಾ ಅಧಿಕಾರಿಗಳೇ ಹಿಂಬರಹ ನೀಡಿದ್ದಾರೆ. ಅಲ್ಲದೆ ಸರ್ವೆ ನಂ.81/2ರ 2.22 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಮುಡಾದಿಂದ ಪರಿಹಾರ ರೂಪದಲ್ಲಿ ಹಣವನ್ನಾಗಲಿ ಅಥವಾ ನಿವೇಶನವನ್ನಾಗಲೀ ಪಡೆದಿಲ್ಲ.

ಕೈಸಾಲ ತೀರಿಸುವ ಸಲುವಾಗಿ ನಮಗೆ ಹಣದ ಅವಶ್ಯಕತೆ ಇದ್ದ ಕಾರಣ ಸದರಿ 2.22 ಎಕರೆ ಜಮೀನನ್ನು ಮಹೇಂದ್ರ ಬಿನ್ ಚನ್ನೇಗೌಡ ಎಂಬುವರಿಗೆ 27/07/2020ರಂದು ಕ್ರಯಕ್ಕೆ ಕೊಟ್ಟಿರುತ್ತೇವೆ. ಈ ಸಂಬಂಧ ನಮ್ಮ ಕುಟುಂಬದ ಹಿರಿಯರಾದ ಬಿ.ಶಂಕರ್ ಅವರು ಮಹೇಂದ್ರ ಅವರೊಂದಿಗೆ ವ್ಯವಹರಿಸಿದರು. ಅದರಲ್ಲಿ ನಮ್ಮ ಕುಟುಂಬದವರೆಲ್ಲರೂ ಭಾಗಿಯಾಗಿದ್ದೆವು. ನಮ್ಮ ಜಮೀನು ಮಾರಾಟವಾದ ದಿನದಿಂದ ಇಂದಿನವರೆಗೆ ಈ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ವಿಚಾರವೂ ನಮಗೆ ತಿಳಿದಿರಲಿಲ್ಲ.

ಆದರೆ ಈ ಜಮೀನು ವಿಚಾರವಾಗಿ ಮಾಧ್ಯಮದಲ್ಲಿ ವರದಿ ಪ್ರಕಟವಾಗಿದ್ದನ್ನು ಗಮನಿಸಿದಾಗ ಸ್ನೇಹಮಯಿ ಕೃಷ್ಣ ಅವರು ದೂರು ನೀಡಿ, ದೂರಿನೊಂದಿಗೆ ಕೆಲವು ಫೋಟೋಗಳನ್ನು ಲಗತ್ತಿಸಿರುವುದು ತಿಳಿಯಿತು. ಆದರೆ ಅವರು ಮಾಧ್ಯಮಗಳಲ್ಲಿ ಹೇಳಿರುವ ಎಲ್ಲಾ ಅಂಶಗಳೂ ಸುಳ್ಳು. ಜಮೀನು ಖರೀದಿಸುವ ವಿಚಾರವಾಗಿ ಜಿ.ಟಿ.ದೇವೇಗೌಡರಾಗಲೀ, ಅವರ ಮಗ ಹರೀಶ್‌ಗೌಡರಾಗಲೀ ನಮ್ಮನ್ನು ಸಂಪರ್ಕ ಮಾಡಿಲ್ಲ. ಅಲ್ಲದೆ ಯಾವ ರೀತಿಯಲ್ಲೂ ಅವರು ಭಾಗಿಯಾಗಿಲ್ಲ. 2019ರಲ್ಲಿ ನನ್ನ ಮೊಮ್ಮಗಳ ನಾಮಕರಣಕ್ಕೆ ಆಹ್ವಾನಿಸಲು ಜಿ.ಟಿ.ದೇವೇಗೌಡರ ಮನೆಗೆ ಹೋಗಿದ್ದಾಗ ತೆಗೆದ ಫೋಟೋಗಳು ಹಾಗೂ ಅವರು ಕಾರಣಾಂತರಗಳಿಂದ ನಾಮಕರಣಕ್ಕೆ ಬರಲಾಗದೆ ಸಂಜೆ ವೇಳೆ ನಮ್ಮ ಮನೆಗೆ ಭೇಟಿ ನೀಡಿದ್ದಾಗ ತೆಗೆಸಿಕೊಂಡ ಫೋಟೋಗಳನ್ನು ಸ್ನೇಹಮಯಿ ಕೃಷ್ಣ ದೂರಿನಲ್ಲಿ ಲಗತ್ತಿಸಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಕುಂಭಮೇಳ ಕಾಲ್ತುಳಿತದಲ್ಲಿ ಕರ್ನಾಟಕ ಮೂಲದ ನಾಗಾ ಸಾಧು ಸಾವು!

ಚಿತ್ರದುರ್ಗ, ಜ.31– ಇತ್ತೀಚೆಗೆ ಮಹಾಕುಂಭಮೇಳದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣದಲ್ಲಿ ಸಾವನ್ನಪ್ಪಿದ ಕರ್ನಾಟಕ ಮೂಲದವರ ಸಂಖ್ಯೆ ಏರಿಕೆಯಾಗಿದ್ದು, ಚಿತ್ರದುರ್ಗ ಮೂಲದ ನಾಗಾ ಸಾಧು ಸಾವನ್ನಪ್ಪಿದ್ದಾರೆ.



ಕಾಲ್ತುಳಿತದಿಂದ ರಾಜನಾಥ್ ಮಹಾರಾಜ್(49) ಎನ್ನುವ ನಾಗಸಾಧು ಮೃತಪಟ್ಟಿದ್ದು, ಮೃತ ನಾಗಸಾಧು ರಾಜನಾಥ್ ಅವರು ಬಂಜಾರ ಗುರುಪೀಠದ ಪೀಠಾಧಿಪತಿ ಸರ್ಧಾರ್ ಸೇವಾಲಾಲ್ ಶ್ರೀ ಒಡನಾಡಿಯಾಗಿದ್ದರು. ಇವರು ಕಳೆದ 7 ವರ್ಷಗಳಿಂದ ಚಿತ್ರದುರ್ಗದ ಬಂಜಾರ ಗುರು ಪೀಠದಲ್ಲಿ ನೆಲೆಸಿದ್ದರು. ಕಳೆದ 15 ದಿನದ ಹಿಂದೆ ಮಹಾಕುಂಭಮೇಳಕ್ಕೆ ಹೋಗಿದ್ದರು ಎಂದು ತಿಳಿದು ಬಂದಿದೆ.

ಇದೀಗ ಅವರ ಪಾರ್ಥಿವ ಶರೀರವನ್ನು ಚಿತ್ರದುರ್ಗಕ್ಕೆ ತರಬೇಕೆಂದು ಚಿತ್ರದುರ್ಗದ ಲಂಬಾಣಿ ಸೇವಾಲಾಲ್ ಗುರುಪೀಠದ ಪೀಠಾಧಿಪತಿ ಮನವಿ ಮಾಡಿದ್ದಾರೆ. ಈ ಬಗ್ಗೆ ಚಿತ್ರದುರ್ಗದ ಲಂಬಾಣಿ ಸೇವಾಲಾಲ್ ಗುರುಪೀಠದ ಪೀಠಾಧಿಪತಿ ಸರ್ಧಾರ್ ಸೇವಾಲಾಲ್ ಸ್ವಾಮೀಜಿ ಅವರು ಮಾಧ್ಯಮಗಳೊಂದಿಗೆ ಮಾತನಾಡಿದ್ದು, ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿರುವ ರಾಜನಾಥ್ ಮಹಾರಾಜ್ ಪಾರ್ಥಿವ ಶರೀರ ವನ್ನು ಚಿತ್ರದುರ್ಗಕ್ಕೆ ತಲುಪಿಸ ಬೇಕೆಂದು ಉತ್ತರಪ್ರದೇಶ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಅಲ್ಲದೇ ಆದಷ್ಟು ಬೇಗ ಪಾರ್ಥೀವ ಶರೀರ ತರಿಸುವಂತೆ ಕರ್ನಾಟಕ ಸರ್ಕಾರಕ್ಕೂ ಸಹ ಒತ್ತಾಯಿಸಲಾಗಿದೆ ಎಂದು ಹೇಳಿದ್ದಾರೆ. ರಾಜ್ ನಾಥ್ ಮಹಾರಾಜ್ ಸಿದ್ಧಿ ಸಾಧಕರಾಗಿದ್ದರು.

ಸರ್ವಾಧಿಕಾರಿ ಮನೋಭಾವದವರು ಹೆಚ್ಚಾಗುತ್ತಿರುವುದು ಅಪಾಯಕಾರಿ

●ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ವಿಷಾದ ●ಸರ್ವ ಧರ್ಮದವರ ಒಟ್ಟಿಗೆ ಕರೆದೊಯ್ಯುವ ಕೆಲಸವಾಗುತ್ತಿಲ್ಲ ●ಸುತ್ತೂರು ಜಾತ್ರಾ ಮಹೋತ್ಸವ ಸಮಾರೋಪ ಸಮಾರಂಭ

ಮೈಸೂರು, ಜ.31(ಎಂಟಿವೈ)– ದೇಶದಲ್ಲಿ ಸರ್ವಧರ್ಮಗಳನ್ನು ಒಟ್ಟಿಗೆ ಕರೆದೊಯ್ಯುವ ಕೆಲಸ ಮಾಡದೆ ಸರ್ವಾಧಿಕಾರಿ ಮನೋಭಾವದ ಮನಸ್ಥಿತಿಯುಳ್ಳವರು ಹೆಚ್ಚಾಗುತ್ತಿರುವುದು ಅಪಾಯಕಾರಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ವಿಷಾದಿಸಿದ್ದಾರೆ.

ಸುತ್ತೂರು ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಇಂದು ದೇಶದಲ್ಲಿ ಧಾರ್ಮಿಕ ಭಯೋತ್ಪಾದನೆ ಹೆಚ್ಚುತ್ತಿದೆ. ಜನರನ್ನು ಭಯಭೀತರನ್ನಾಗಿ ಮಾಡುವ ಹಾಗೂ ನಾವು ಹೇಳಿದಂತೆ ಕೇಳಬೇಕು ಎಂದು ಒತ್ತಾಯಿಸುವ ಅಪಾಯಕಾರಿ ಬೆಳವಣಿಗೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಸುತ್ತೂರು ಮಠ ಧರ್ಮ ರಕ್ಷಣೆಯೊಂದಿಗೆ ಅಕ್ಷರ, ಅನ್ನ ದಾಸೋಹದ ಮೂಲಕ ದೇಶದ ಉದ್ದಗಲಕ್ಕೂ ಸೇವೆ ವಿಸ್ತರಿಸಿದೆ. ಸುತ್ತೂರು ಜಾತ್ರೆ ಸಾಂಸ್ಕೃತಿಕ ಜೀವನವನ್ನು ಪ್ರೋತ್ಸಾಹಿಸಿ, ಸಮುದಾಯಗಳ ಒಗ್ಗೂಡಿಸಿ, ಆಚಾರ–ವಿಚಾರಗಳನ್ನು ಬಿತ್ತರಿಸುವ ಉತ್ಸವವಾಗಿದೆ ಲಕ್ಷಾಂತರ ಜನ ಜಾತ್ರೆಯಲ್ಲಿ ಭಾಗವಹಿಸಿ, ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳಲು ಪ್ರೇರಣೆ ನೀಡಿವೆ ಎಂದು ಹೇಳಿದರು. ಎಲ್ಲ ಸಮುದಾಯವನ್ನು ಒಗ್ಗೂಡಿಸಿ ಸಂವಿಧಾನದ ಮೂಲ ಉದ್ದೇಶವನ್ನು ಧಾರ್ಮಿಕ ಸಂಸ್ಥೆಯಾಗಿ ಸುತ್ತೂರು ಮಠ ಮಾಡುತ್ತಿದೆ ಎಂದರು.



ಸಂವಿಧಾನದಂತೆ ವಚನಗಳನ್ನು ತಿದ್ದುವ ಸಂಚು: ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಮಾತನಾಡಿ, ನಾವು ಸಂವಿಧಾನದಂತೆ ನಡೆದುಕೊಳ್ಳಬೇಕು. ಎಲ್ಲರನ್ನೂ ಸಮಾನವಾಗಿ ನೋಡಿಕೊಳ್ಳುವ ದೂರದೃಷ್ಟಿ ಇರಬೇಕು. ಸಂವಿಧಾನಕ್ಕೂ ಮಹನೀಯರು ತೋರಿದ ದಾರಿಗೂ ವ್ಯತ್ಯಾಸವೇ ಇಲ್ಲ. ಬಸವಣ್ಣ ಎಂದೂ ಮೇಲು ಕೀಳು ಎಂದು ಹೇಳಿಲ್ಲ. ಸಂವಿಧಾನದಲ್ಲೂ ಅದೇ ತತ್ವವಿದೆ. ಬಸವಣ್ಣನ ವಚನಗಳು, ಸಂವಿಧಾನ ಮಾರ್ಗ ದರ್ಶನ ನೀಡುವ ಗ್ರಂಥ. ಇಂದು ಸಂವಿಧಾನ ತಿರುಚುವ, ಅಪಮಾನ ಮಾಡುವ ಕೆಲಸ ಆಗುತ್ತಿದೆ. ಅದೇ ರೀತಿ ಧಾರ್ಮಿಕ ಕ್ಷೇತ್ರದಲ್ಲೂ ವಚನಗಳನ್ನು ತಿರುಚುವ ಸಂಚು ನಡೆಯುತ್ತಿದೆ. ವಚನಗಳನ್ನು ಕೇವಲ ಭಾಷಣದ ವಸ್ತು ಮಾಡಿಕೊಂಡರೆ ಒಳ್ಳೆಯದಾಗುವುದಿಲ್ಲ. ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಈ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು. ಜಾತ್ರೆಗಳು ಆ ಕೆಲಸ ಮಾಡುತ್ತವೆ. ಬಸವಣ್ಣ ಕರ್ನಾಟಕದ ವಾರಸುದಾರ. ಈ ಕಾರಣಕ್ಕೆ ಅವರನ್ನು ಸಾಂಸ್ಕೃತಿಕ ರಾಯಭಾರಿಯನ್ನಾಗಿ ಘೋಷಿಸಲಾಗಿದೆ ಎಂದು ತಿಳಿಸಿದರು.

ಸುತ್ತೂರು ಜಾತ್ರೆ ಚಾರಿತ್ರಿಕ ಹಬ್ಬ: ಸಿದ್ಧಗಂಗಾಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಸುತ್ತೂರು ಜಾತ್ರೆ ಎಂದರೆ ಈ ಭಾಗದ ಧಾರ್ಮಿಕ, ಚಾರಿತ್ರಿಕ ಹಬ್ಬ. ವೈಶಿಷ್ಟ್ಯಪೂರ್ಣವಾಗಿ ಶ್ರೀಗಳು ಮಕ್ಕಳಿಂದ ಹಿರಿಯರವರೆಗೆ ಎಲ್ಲರನ್ನೂ ಒಳಗೊಂಡಂತೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಸಾಮರಸ್ಯ, ಶಾಂತಿ ಉಂಟು ಮಾಡುವ ಕೆಲಸವನ್ನು ಜಾತ್ರೆ ಮಾಡುತ್ತಿದೆ. 12ನೇ ಶತಮಾನದಲ್ಲೇ ಬಸವಣ್ಣ ಸಂವಿಧಾನ ಕೊಟ್ಟಿದ್ದಾರೆ ಎಂದರು.

ಸಮಾಜಮುಖಿ ಕೆಲಸ: ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಹೆಚ್.ಎಂ.ರೇವಣ್ಣ ಮಾತನಾಡಿ, ರಾಜ್ಯದಲ್ಲಿ ಸುತ್ತೂರು ಮಠ ರಾಜ್ಯದ ಪ್ರತಿಷ್ಠಿತ ಮಠವಾಗಿ ಬೆಳೆದಿದೆ ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಸುತ್ತೂರು ಮಠ ಯಾವುದೇ ಕ್ಷೇತ್ರವನ್ನೂ ಬಿಡದೆ ಎಲ್ಲಾ ಕ್ಷೇತ್ರದಲ್ಲೂ ಸೇವೆ ಮಾಡುತ್ತಿದೆ. ಸಮಾಜದ ಏಳಿಗೆಗೆ ಮಠದ ಕೊಡುಗೆ ಅಪಾರ. ಶಿಕ್ಷಣ, ಧಾರ್ಮಿಕ, ಸಮಾಜದ ಒಳಿತಿಗಾಗಿ ಅನೇಕ ಕಾರ್ಯಕ್ರಮ ರೂಪಿಸಿದೆ. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದೆ ಎಂದು ಅಭಿಪ್ರಾಯಪಟ್ಟರು.

ಸುತ್ತೂರಲ್ಲಿ ಆನಂದ: ಕನಕಗಿರಿ ಜೈನಮಠದ ಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, ಸುತ್ತೂರು ಕ್ಷೇತ್ರದಲ್ಲಿ ಸಿಗುವ ಆನಂದ, ಸಮಾಧಾನ ದೇಶದ ಯಾವುದೇ ಸ್ಥಳದಲ್ಲೂ ಸಿಗುವುದಿಲ್ಲ. ಎಲ್ಲೇ ಸುತ್ತಿದರೂ ಸುತ್ತೂರಿಗೆ ಬಂದ ರೀತಿ ಆಗುವುದಿಲ್ಲ. ಭಾರತೀಯ ವಿಜ್ಞಾನ, ತತ್ವಶಾಸ್ತ್ರ, ಸಂಸ್ಕೃತಿ, ಪರಂಪರೆಯನ್ನು ಜಗತ್ತಿಗೆ ತಲುಪಿಸುತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಬಹುಮಾನ ವಿತರಣೆ: ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಮೇಳ, ವಸ್ತು ಪ್ರದರ್ಶನ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಹುಮಾನ ವಿತರಿಸಿದರು.

ಆಂಗ್ಲರ ಮಣಿಸಿದ ಭಾರತ: ಸರಣಿ ಕೈವಶ



ಪುಣೆ, ಜ.31– ಶಿವಂ ದುಬೆ, ಹಾರ್ದಿಕ್ ಪಾಂಡ್ಯ ಅವರ ಅರ್ಧ ಶತಕ ಹಾಗೂ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿ ನೆರವಿನಿಂದ ಭಾರತ 4ನೇ ಟಿ20 ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 15 ರನ್‌ಗಳ ರೋಚಕ ಗೆಲುವು ಸಾಧಿಸಿತು. ಆ ಮೂಲಕ 5 ಪಂದ್ಯಗಳ ಟಿ 20 ಸರಣಿಯಲ್ಲಿ 3–1 ಅಂತರದ ಮುನ್ನಡೆ ಸಾಧಿಸಿದ್ದು, ಇನ್ನೂ ಒಂದು ಪಂದ್ಯ ಬಾಕಿ ಇರುವಂತೆಯೇ ಸರಣಿ ತನ್ನದಾಗಿಸಿಕೊಂಡಿತು.

ಇಲ್ಲಿನ ಮಹಾರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 181 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. 182 ರನ್‌ಗಳ ಬೃಹತ್ ಮೊತ್ತದ ಗುರಿ ಬೆನ್ನಟ್ಟಿದ ಇಂಗ್ಲೆಂಡ್ 19.4 ಓವರ್‌ಗಳಲ್ಲಿ 166 ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು.

ಭಾರತದ ಪರ ಅಭಿಷೇಕ್ ಶರ್ಮಾ 29 ರನ್, ರಿಂಕು ಸಿಂಗ್ 30 ರನ್ ಗಳಿಸಿದರು. ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿದ ಶಿವಂ ದುಬೆ 34 ಎಸೆತಗಳಲ್ಲಿ 2 ಸಿಕ್ಸರ್, 7 ಬೌಂಡರಿ ಒಳಗೊಂಡ 53 ರನ್, ಹಾರ್ದಿಕ್ ಪಾಂಡ್ಯ 30 ಎಸೆತಗಳಲ್ಲಿ ತಲಾ 4 ಸಿಕ್ಸರ್, ಬೌಂಡರಿ ಒಳಗೊಂಡ 53 ರನ್ ಗಳಿಸಿ ಔಟಾದರು. ಇಂಗ್ಲೆಂಡ್ ಪರ ಸಾಕಿಬ್ ಮಹಮೂದ್ 3, ಜೇಮಿ ಓವರ್‌ಟನ್ 2, ಬ್ರೈಡನ್ ಕಾರ್ಸೆ, ಆದೀಲ್ ರಶೀದ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಭಾರತ ನೀಡಿದ ಬೃಹತ್ ಮೊತ್ತ ಬೆನ್ನತ್ತಿದ ಇಂಗ್ಲೆಂಡ್ ಪರ ಫಿಲಿಪ್ ಸಾಲ್ಟ್ 23, ಬೆನ್ ಡಕೆಟ್ 39, ಹ್ಯಾರಿ ಬ್ರೂಕ್ 51, ಜೇಮಿ ಓವರ್‌ಟನ್ 19, ಆದೀಲ್ ರಶೀದ್ 10 ರನ್ ಗಳಿಸಿದರು. ರವಿ ಬಿಷ್ಣೋಯಿ, ಹರ್ಷಿತ್ ರಾಣಾ ತಲಾ 3, ವರುಣ್ ಚಕ್ರವರ್ತಿ 2, ಅರ್ಶದೀಪ್ ಸಿಂಗ್, ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು. ಶಿವಂ ದುಬೆ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ರಾಷ್ಟ್ರಪತಿ ದ್ರೌಪದಿ ಮುರ್ಮು 'ಪೂರ್ ಲೇಡಿ'; ಸೋನಿಯಾ ಎಡವಟ್ಟು!

ನವದೆಹಲಿ, ಜ.31– ಕಾಂಗ್ರೆಸ್ ಮಾಜಿ ಅಧ್ಯಕ್ಷೆ ರಾಜ್ಯಸಭಾ ಸದಸ್ಯೆ ಸೋನಿಯಾ ಗಾಂಧಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಬಗ್ಗೆ ನೀಡಿದ ಒಂದು ಹೇಳಿಕೆ ಈಗ ವಿವಾದಕ್ಕೆ ಕಾರಣವಾಗಿದೆ.




ಬಜೆಟ್ ಅಧಿವೇಶನದ ಮುನ್ನ ದಿನವಾದ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಭಯ ಸದನವನ್ನು ಉದ್ದೇಶಿಸಿ ಮಾತನಾಡಿದರು.

ರಾಷ್ಟ್ರಪತಿಗಳ ಭಾಷಣ ಮುಕ್ತಾಯದ ಬಳಿಕ ಸಂಸತ್ ಹೊರಗಡೆ ಬಂದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಅವರನ್ನು ಮಾಧ್ಯಮಗಳು ಮಾತನಾಡಿಸಿವೆ.


ಈ ವೇಳೆ ಸೋನಿಯಾ ಗಾಂಧಿ, ಪೂರ್ ಲೇಡಿ, ಭಾಷಣ ಮುಗಿಸುವ ಹೊತ್ತಿಗೆ ರಾಷ್ಟ್ರಪತಿಗಳು ಸುಸ್ತಾಗಿ ಹೋಗಿದ್ದರು. ಅವರಿಗೆ ಮಾತನಾಡಲು ಕಷ್ಟವಾಗುತ್ತಿತ್ತು ಎಂದು ಹೇಳಿದರು. ಈ ಸಂದರ್ಭದಲ್ಲಿ ರಾಹುಲ್ ಗಾಂಧಿ ಭಾಷಣ ತುಂಬಾ ಬೋರ್ ಆಗಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಹುಟ್ಟುಹಬ್ಬದ ಶುಭಾಶಯ

ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಶಾಸಕ ಜಿ.ಡಿ.ಹರೀಶ್‌ಗೌಡರವರ ಹುಟ್ಟುಹಬ್ಬಕ್ಕೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಶುಭಾಶಯ ಕೋರಿದರು. ಈ ವೇಳೆ ಎನ್.ಬಿ.ಮಂಜು, ನಟೇಶ್ ಹಾಗೂ ಇತರರು ಉಪಸ್ಥಿತರಿದ್ದರು.



ಅಭಿನಂದನೆ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿಯ ನಿರ್ದೇಶಕರಾಗಿ ಆಯ್ಕೆಯಾದ ಎಸ್.ಚಂದ್ರಶೇಖರ್ ಹಾಗೂ ಇತರರನ್ನು ಅವರ ಅಭಿಮಾನಿಗಳು ಆತ್ಮೀಯವಾಗಿ ಅಭಿನಂದಿಸಿದರು.

ದೇಶ - ವಿದೇಶ

ಬ್ರಿಕ್ಸ್ ರಾಷ್ಟ್ರಗಳಿಗೆ ಅಮೆರಿಕಾ ಎಚ್ಚರಿಕೆ: ಯುಎಸ್ ಡಾಲರ್ ಬದಲಿಸಿದರೆ ಶೇ.100ರಷ್ಟು ಸುಂಕ

ವಾಷಿಂಗ್ಟನ್: ಬ್ರಿಕ್ಸ್ ದೇಶಗಳು ಅಮೆರಿಕ ಡಾಲರ್ ಅನ್ನು ಪರ್ಯಾಯ ಕರೆನ್ಸಿಯೊಂದಿಗೆ ಬದಲಾಯಿಸಲು ಪ್ರಯತ್ನಿಸಿದರೆ ಶೇಕಡಾ 100ರಷ್ಟು ಸುಂಕ ವಿಧಿಸುವುದಾಗಿ ಭಾರತ ಸೇರಿದಂತೆ ಬ್ರಿಕ್ಸ್ ಬಣಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಠಿಣ ಎಚ್ಚರಿಕೆ ನೀಡಿದ್ದಾರೆ.



ತಮ್ಮ ಸೋಷಿಯಲ್ ಮೀಡಿಯಾದಲ್ಲಿ ಅವರು ಈ ಎಚ್ಚರಿಕೆ ನೀಡಿದ್ದು, ಬ್ರಿಕ್ಸ್ ದೇಶಗಳು ಡಾಲರ್‌ನಿಂದ ದೂರ ಸರಿಯಲು ಪ್ರಯತ್ನಿಸುವ ಕಲ್ಪನೆ ಇಲ್ಲಿಗೆ ಮುಕ್ತಾಯವಾಗಲಿದೆ. ಈ ಪ್ರತಿಕೂಲ ದೇಶಗಳಿಂದ ನಾವು ಹೊಸ ಬ್ರಿಕ್ಸ್ ಕರೆನ್ಸಿಯನ್ನು ರಚಿಸುವುದಿಲ್ಲ ಅಥವಾ ಪ್ರಬಲ ಯುಎಸ್ ಡಾಲರ್ ಅನ್ನು ಬದಲಿಸಲು ಬೇರೆ ಯಾವುದೇ ಕರೆನ್ಸಿಯನ್ನು ಬೆಂಬಲಿಸುವುದಿಲ್ಲ ಎಂಬ ಬದ್ಧತೆಯನ್ನು ಬಯಸುತ್ತೇವೆ. ಹಾಗೆ ಮಾಡಿದರೆ ಶೇಕಡಾ 100ರಷ್ಟು ಸುಂಕ ಕಟ್ಟಬೇಕಾಗುತ್ತದೆ ಮತ್ತು ಯುಎಸ್ ಆರ್ಥಿಕತೆಗೆ ಮಾರಾಟ ಮಾಡುವುದಕ್ಕೆ ವಿದಾಯ ಹೇಳಬೇಕಾಗುತ್ತದೆ ಎಂದು ಬರೆದಿದ್ದಾರೆ.

ಅಂತಾರಾಷ್ಟ್ರೀಯ ವ್ಯಾಪಾರ ಅಥವಾ ಬೇರೆಲ್ಲಿಯಾದರೂ ಬ್ರಿಕ್ಸ್ ಯುಎಸ್ ಡಾಲರ್‌ನ್ನು ಬದಲಿಸುವ ಸಾಧ್ಯತೆಯಿಲ್ಲ. ಪ್ರಯತ್ನಿಸುವ ಯಾವುದೇ ದೇಶವು ಸುಂಕಗಳಿಗೆ ಹಲೋ ಹೇಳಿ ಅಮೆರಿಕಕ್ಕೆ ವಿದಾಯ ಹೇಳಬೇಕು ಎಂದು ತಮ್ಮದೇ ಶೈಲಿಯಲ್ಲಿ ಟ್ರಂಪ್ ಎಚ್ಚರಿಸಿದ್ದಾರೆ.

ಅಮೆರಿಕ ಸಂಸತ್‌ನಲ್ಲಿ ರುದ್ರಾಕ್ಷಿ ಮಾಲೆ, ರಕ್ಷಾಸೂತ್ರ ಧರಿಸಿ ಅಧಿಕಾರ ಸ್ವೀಕರಿಸಿದ ಕಾಶ್

ವಾಷಿಂಗ್ಟನ್ ಡಿಸಿ: ಅಮೆರಿಕಾದ ನೂತನ ಎಫ್‌ಬಿಐ ಮುಖ್ಯಸ್ಥರಾಗಿ ಅಧ್ಯಕ್ಷ ಟ್ರಂಪ್ ಅವರಿಂದ ನಿಯೋಜಿಸಲ್ಪಟ್ಟಿರುವ ಭಾರತೀಯ ಮೂಲದ ಕಾಶ್ ಪಟೇಲ್ ಅವರು ತಮ್ಮ ದೃಢೀಕರಣ ವಿಚಾರಣೆಯಲ್ಲಿ 'ಜೈ ಶ್ರೀಕೃಷ್ಣ' ಎನ್ನುವ ಮೂಲಕ ಸನಾತನಿಗಳ ಹೃದಯ ಗೆದ್ದಿದ್ದಾರೆ. ವೃತ್ತಿಯಲ್ಲಿ ವಕೀಲರಾಗಿರುವ ಗುಜರಾತ್ ಮೂಲದ ಪಟೇಲ್ ಅವರು ಗುರುವಾರ ಸೆನೆಟ್ (ಸಂಸತ್ತು) ದೃಢೀಕರಣ ವಿಚಾರಣೆಗೂ ಮುನ್ನ ಭಾರತದಿಂದ ತೆರಳಿದ್ದ ಅವರ ತಂದೆ ಮತ್ತು ತಾಯಿಯ ಪಾದ ಮುಟ್ಟುವ ಮೂಲಕ ಆಶೀರ್ವಾದ ಪಡೆದರು.

ಈ ವೇಳೆ ಅವರು, ನಾನು ನನ್ನ ತಂದೆ ಪ್ರಮೋದ್ ಮತ್ತು ನನ್ನ ತಾಯಿ ಅಂಜನಾ ಅವರನ್ನು ಸೆನೆಟ್‌ಗೆ ಸ್ವಾಗತಿಸಲು ಬಯಸುತ್ತೇನೆ. ಅವರು ನನ್ನ ವಿಚಾರಣೆಯ ಸಲುವಾಗಿ ಭಾರತದಿಂದ ಸಾಗರಗಳನ್ನು ದಾಟಿ ಬಂದಿದ್ದಾರೆ. ಇವರೊಂದಿಗೆ ನನ್ನ ತಂಗಿ ನಿಶಾ ಅವರು ಸಹ ಇಲ್ಲೇ ಇದ್ದಾರೆ ಎಂದು ಜೈ ಶ್ರೀ ಕೃಷ್ಣ ಎನ್ನುವ ಮೂಲಕ ಕೃಷ್ಣನ ಜಪ ಮಾಡಿದ್ದಾರೆ.

ಮುಂದುವರೆದು, ಇಲ್ಲಿರುವ ನನ್ನ ಹೆತ್ತವರು ನನ್ನ ಕುರಿತ ಕನಸುಗಳನ್ನು ಮಾತ್ರವಲ್ಲದೆ ನ್ಯಾಯ, ನ್ಯಾಯಸಮ್ಮತತೆ ಮತ್ತು ಕಾನೂನಿನ ನಿಯಮಕ್ಕಾಗಿ ನಿಂತಿರುವ ಲಕ್ಷಾಂತರ ಅಮೆರಿಕನ್ನರ ಭರವಸೆಯನ್ನು ಸಹ ಹೊತ್ತಿದ್ದಾರೆ ಎಂದು ಹೇಳಿದರು.

ಇಸ್ರೇಲಿ ದಾಳಿ ವೇಳೆ ಮಿಲಿಟರಿ ಮುಖ್ಯಸ್ಥ ಮೊಹಮ್ಮದ್ ಡೀಫ್ ಸಾವು, ಒಪ್ಪಿಕೊಂಡ ಹಮಾಸ್

ಗಾಜಾ: ಇತ್ತೀಚೆಗೆ ನಡೆದ ಇಸ್ರೇಲಿ ವೈಮಾನಿಕ ದಾಳಿಯಲ್ಲಿ ಹಮಾಸ್‌ನ ಮಿಲಿಟರಿ ಮುಖ್ಯಸ್ಥ ಮೊಹಮ್ಮದ್ ಡೀಫ್ ಸಾವನ್ನಪ್ಪಿರುವುದನ್ನು ಹಮಾಸ್ ಒಪ್ಪಿಕೊಂಡಿದೆ. ಡೀಫ್ ಸಾವಿನ ಬಗ್ಗೆ ಇಸ್ರೇಲಿ ಮಿಲಿಟರಿ ಆಗಸ್ಟ್‌ನಲ್ಲಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿತ್ತು. ಜುಲೈ 13ರಂದು ಐಡಿಎಫ್ ಯುದ್ಧ ವಿಮಾನಗಳು ಖಾನ್ ಯುನಿಸ್ ಪ್ರದೇಶದ ಮೇಲೆ ದಾಳಿ ಮಾಡಿದೆ.

ದಾಳಿಯಲ್ಲಿ ಮೊಹಮ್ಮದ್ ಡೀಫ್ ಸಾವನ್ನಪ್ಪಿದ್ದಾರೆ ಎಂದು ದೃಢಪಡಿಸಿತ್ತು. ಡೀಫ್ ಚಿಕ್ಕವಯಸ್ಸಿನಲ್ಲಿಯೇ ಹಮಾಸ್‌ಗೆ ಸೇರಿದ್ದ. 2002ರಲ್ಲಿ ಹಮಾಸ್‌ನ ಮಿಲಿಟರಿ ವಿಭಾಗವಾದ ಕಸ್ಸಾಮ್ ಬ್ರಿಗೇಡ್ಸ್‌ನ ನಾಯಕನಾಗಿದ್ದ. 1996 ರಲ್ಲಿ ಸರಣಿ ಆತ್ಮಹತ್ಯಾ ಬಾಂಬ್ ದಾಳಿ ಸೇರಿದಂತೆ ಇಸ್ರೇಲ್ ಮೇಲೆ ಹಲವಾರು ದಾಳಿಗಳನ್ನು ನಡೆಸಿದ್ದ.

ಜುಲೈನಲ್ಲಿ, ಇಸ್ರೇಲಿ ಪಡೆಗಳು ಡೀಫ್ ಅನ್ನು ಕೊಲ್ಲುವ ಪ್ರಯತ್ನದಲ್ಲಿ ಗಾಜಾದ ಜನನಿಬಿಡ ಕರಾವಳಿ ಪ್ರದೇಶದ ಮೇಲೆ ಭಾರಿ ಬಾಂಬ್ ದಾಳಿ ನಡೆಸಿತು. ದಾಳಿಯಲ್ಲಿ ಗಾಜಾದ ಅನೇಕ ಜನರು ಸತ್ತರು. ಈ ದಾಳಿಯಲ್ಲಿ ಡೀಫ್‌ನನ್ನು ಕೊಂದಿರುವುದಾಗಿ ಇಸ್ರೇಲಿ ಮಿಲಿಟರಿ ನಂತರ ಹೇಳಿತ್ತು. ಆಗ ಹಮಾಸ್ ಅವರ ಸಾವನ್ನು ದೃಢಪಡಿಸಲೂ ನಿರಾಕರಿಸಲೂ ಇಲ್ಲ. ಆದರೆ ಈಗ ಡೀಫ್ ಸಾವನ್ನು ಒಪ್ಪಿಕೊಂಡಿದೆ.

ಮಹಾಕುಂಭ ಮೇಳದಲ್ಲಿ ಭಕ್ತರಿಗೆ ನೀಡುವ ಆಹಾರದಲ್ಲಿ ಬೂದಿ ಬೆರೆಸಿದ್ದ ಪೊಲೀಸ್ ಅಧಿಕಾರಿ ಅಮಾನತು

ಪ್ರಯಾಗ್ ರಾಜ್: ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನ ಮಹಾ ಕುಂಭಮೇಳದಲ್ಲಿ ಭಕ್ತರಿಗಾಗಿ ಸಮುದಾಯ ಭೋಜನ ತಯಾರಿಸಲಾಗುತ್ತಿದ್ದ ಆಹಾರದಲ್ಲಿ ಬೂದಿಯನ್ನು ಬೆರೆಸಿದ ವಿಡಿಯೋ ವೈರಲ್ ಆದ ನಂತರ ಪೊಲೀಸ್ ಅಧಿಕಾರಿಯನ್ನು ಗುರುವಾರ ಅಮಾನತುಗೊಳಿಸಲಾಗಿದೆ.

ಈ ಬೆಳವಣಿಗೆಯ ಬಗ್ಗೆ ಮಾತನಾಡಿದ ಡಿಸಿಪಿ (ಗಂಗಾ ನಗರ) ಕುಲದೀಪ್ ಸಿಂಗ್ ಗುಣವತ್, ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಕಾಣಿಸಿಕೊಂಡ ನಂತರ ಸೊರಾನ್‌ನ ಸ್ಟೇಷನ್ ಹೌಸ್ ಆಫೀಸರ್ (ಎಸ್‌ಎಚ್‌ಒ) ಬ್ರಿಜೇಶ್ ಕುಮಾರ್ ತಿವಾರಿ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು. ಈ ವೀಡಿಯೋದಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ಒಲೆಯ ಮೇಲೆ ತಯಾರಿಸಲಾಗುವ ಆಹಾರಕ್ಕೆ ಬೂದಿಯನ್ನು ಸೇರಿಸುವುದು ಕಂಡುಬಂತು.

ಬಳಕೆದಾರರೊಬ್ಬರು ಡಿಸಿಪಿ ಗಂಗಾ ನಗರ್ ಅವರ ಖಾತೆಯನ್ನು ಟ್ಯಾಗ್ ಮಾಡಿ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ಎಕ್ಸ್‌ನಲ್ಲಿ ವೀಡಿಯೊವನ್ನು ಪೋಸ್ಟ್ ಮಾಡಿದ್ದಾರೆ ಮತ್ತು ಈ ನಾಚಿಕೆಗೇಡಿನ ಕೃತ್ಯಕ್ಕಾಗಿ ಅಧಿಕಾರಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದರು. ಈ ಸಂಬಂಧ ಕ್ರಮ ಕೈಗೊಂಡು ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಡಿಸಿಪಿ, ಎಸಿಪಿ ವರದಿ ಆಧರಿಸಿ ಅಧಿಕಾರಿಯನ್ನು ಅಮಾನತು ಮಾಡಿ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಸನ್ಯಾಸತ್ವ ಸ್ವೀಕರಿಸಿದ್ದ ಬಾಲಿವುಡ್ ನಟಿ ಮಮತಾ ಕುಲಕರ್ಣಿಯನ್ನು ವಜಾಗೊಳಿಸಿದ ಕಿನ್ನರ್ ಅಖಾಡ

ಪ್ರಯಾಗ್ ರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ ಇತ್ತೀಚೆಗೆ ಸನ್ಯಾಸತ್ವ ಸ್ವೀಕರಿಸಿದ್ದ ಬಾಲಿವುಡ್ ನಟಿ ಮಮತಾ ಕುಲಕರ್ಣಿಗೆ ಆಘಾತ ಎದುರಾಗಿದ್ದು, ಆಕೆಗೆ ಸನ್ಯಾಸತ್ವ ನೀಡಿದ್ದ ಕಿನ್ನರ್ ಅಖಾಡವೇ ನಟಿಯನ್ನು ವಜಾಗೊಳಿಸಿದೆ.

ಲೌಕಿಕ ಬದುಕಿಗೆ ವಿದಾಯ ಹೇಳಿ ಸನ್ಯಾಸತ್ವ ಸ್ವೀಕರಿಸಿದ್ದ ಮಮತಾ ಕುಲಕರ್ಣಿಯನ್ನು ಕಿನ್ನರ್ ಅಖಾಡ ವಜಾಗೊಳಿಸಿದೆ. ಮಮತಾ ಕುಲಕರ್ಣಿ ಮಾತ್ರವಲ್ಲದೇ ಲಕ್ಷ್ಮಿ ನಾರಾಯಣ್ ತ್ರಿಪಾಠಿಯನ್ನು ಕೂಡ ಅಖಾಡದಿಂದ ವಜಾಗೊಳಿಸಲಾಗಿದೆ. ಕಿನ್ನರ ಅಖಾಡ ಸ್ಥಾಪಕ ರಿಷಿ ಅಜಯ್ ದಾಸ್ ಶುಕ್ರವಾರ ಮಮತಾ ಕುಲಕರ್ಣಿ ಅವರನ್ನು ಅಖಾಡದಿಂದಲೇ ಹೊರಹಾಕಿದ್ದಾರೆ.

90ರ ದಶಕದಲ್ಲಿ ಬಾಲಿವುಡ್ ಸೇರಿದಂತೆ ಕನ್ನಡ ಸಿನಿಮಾದಲ್ಲಿ ನಟಿಸಿದ್ದ ಮಮತಾ ಕಿನ್ನರ ಅಖಾಡಕ್ಕೆ ಸೇರುವ ಮೂಲಕ ಮಹಾಮಂಡಲೇಶ್ವರಿಯಾಗಿದ್ದರು. ಮಮತಾ ಕುಲಕರ್ಣಿ ಹೆಸರನ್ನು ಬದಲಿಸಿಕೊಂಡು 'ಮಾಯಿ ಮಮತಾ ನಂದಗಿರಿ' ಎಂದು ನಾಮಕರಣ ಮಾಡಿಕೊಂಡಿದ್ದರು. ದೇಶದ್ರೋಹದ ಆರೋಪ ಹೊತ್ತಿರುವ ಮಮತಾ ಕುಲಕರ್ಣಿಯನ್ನು ಅಖಾಡಕ್ಕೆ ಸೇರಿಸಿದ್ದು ಮಾತ್ರವಲ್ಲದೇ ತನ್ನ ಅರಿವಿಲ್ಲದೆ ಅವರನ್ನು ಮಹಾಮಂಡಲೇಶ್ವರ ಎಂದು ನೇಮಿಸಿದ್ದಕ್ಕಾಗಿ ಮಹಾಮಂಡಲೇಶ್ವರ ಲಕ್ಷ್ಮಿನಾರಾಯಣ ತ್ರಿಪಾಠಿ ಸಹ ಕಿನ್ನರ ಅಖಾಡದಿಂದ ಹೊರ ಹಾಕಿದ್ದಾರೆ ಎನ್ನಲಾಗಿದೆ.

ಮೈಸೂರು ಮಿತ್ರ ಶನಿವಾರ 1 ಫೆಬ್ರವರಿ 2025

ಸಿ, ಡಿ ಜಾಗದ ಸಮಸ್ಯೆ ಬಗೆಹರಿಸಲು ಸಮಿತಿ ರಚನೆ

• ವರದಿ ಆಧರಿಸಿ ಸೂಕ್ತ ಕ್ರಮ • ಸಿಎಂ ಸಿದ್ದರಾಮಯ್ಯ ಭರವಸೆ



ಭಾಗಮಂಡಲ ಮೇಲ್ಸೇತುವೆ ಉದ್ಘಾಟನೆಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿದರು.

ತಲಕಾವೇರಿ ಮಾತೆಗೆ ಪೂಜೆ

ಭಾಗಮಂಡಲ ಮೇಲ್ಸೇತುವೆ ಉದ್ಘಾಟನೆಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲಿಗೆ ತ್ರಿವೇಣಿ ಸಂಗಮಕ್ಕೆ ತೆರಳಿ ಮಾತೆ ಕಾವೇರಿಗೆ ಪೂಜೆ ಸಲ್ಲಿಸಿದರು.

ಬಳಿಕ ಭಾಗಮಂಡಲದ ಶ್ರೀ ಭಗಂಡೇಶ್ವರ ಹಾಗೂ ಕಾವೇರಿ ಉಗಮ ಸ್ಥಾನ ತಲಕಾವೇರಿಗೆ ಮಾತೆಗೆ ವಿಶೇಷ ಪೂಜೆ ಸಲ್ಲಿಸಿ ನಾಡಿನ ಸುಭೀಕ್ಷೆಗಾಗಿ ಪ್ರಾರ್ಥಿಸಿದರು.

ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು, ಶಾಸಕರಾದ ಎ.ಎಸ್.ಪೊನ್ನಣ್ಣ, ಶಾಸಕ ಡಾ.ಮಂತರ್‌ಗೌಡ, ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ತಕ್ಕ ಮುಖ್ಯಸ್ಥರಾದ ಕೋಡಿ ಮೋಟಯ್ಯ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮಹೇಶ್ ನಾಚಯ್ಯ, ಜಿಪಂ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರ ಕಲಾ, ಪಕ್ಷ ಪ್ರಮುಖರಾದ ಹೆಚ್.ಎಸ್.ಚಂದ್ರ ಮೌಳಿ ಮತ್ತಿತರರು ಹಾಜರಿದ್ದರು.

ಮಡಿಕೇರಿ, ಜ.31–ಕೊಡಗು ಜಿಲ್ಲೆಯಲ್ಲಿ 'ಸಿ' ಆ್ಯಂಡ್ 'ಡಿ' ಜಾಗದ ಆಗುಹೋಗುಗಳ ಬಗ್ಗೆ ಸಮಿತಿ ರಚಿಸಲಾಗುವುದು. ಸಮಿತಿ ವರದಿ ನೀಡಿದ ಬಳಿಕ ಸೂಕ್ತ ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಭಾಗಮಂಡಲ ಮೇಲ್ಸೇತುವೆ ಉದ್ಘಾಟನೆಗೆ ಭಾಗಮಂಡಲ ಕಾವೇರಿ ಪ್ರೌಢಶಾಲೆ ಆವರಣದ ಹೆಲಿಪ್ಯಾಡ್‌ನಲ್ಲಿ ಬಂದಿಳಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಒತ್ತುವರಿ ಮಾಡಿಕೊಂಡ ಸರ್ಕಾರಿ ಭೂಮಿಯನ್ನು ಗುತ್ತಿಗೆ ನೀಡುವ ಜೊತೆಯಲ್ಲೇ ನಿವೇಶನ ರಹಿತರಿಗೂ ನಿವೇಶನ ಒದಗಿಸಲಾಗುವುದು. ಕಾವೇರಿ ನದಿ ಸ್ವಚ್ಛತೆಗೆ ರಚಿಸಲಾದ ಸಮಿತಿ ಇನ್ನೂ ವರದಿ ನೀಡಿಲ್ಲ. ವರದಿ ಬಂದ ಬಳಿಕ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಜಿಲ್ಲೆಯಲ್ಲಿ ವನ್ಯಜೀವಿ ಮತ್ತು ಮಾನವ ಸಂಘರ್ಷ ಕುರಿತ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ರಾಜ್ಯದ ಕಾಡಂಚಿನ ಗ್ರಾಮಗಳಲ್ಲಿ ಆನೆ, ಚಿರತೆ, ಹುಲಿ ಸೇರಿದಂತೆ ವನ್ಯಜೀವಿಗಳ ಹಾವಳಿ ಹೆಚ್ಚಾಗುತ್ತಿವೆ. ರಾಜ್ಯದಲ್ಲಿ ವನ್ಯಜೀವಿಗಳ ಸಂತತಿ ಹೆಚ್ಚುತ್ತಿರುವುದು ಇದಕ್ಕೆ ಕಾರಣವಾಗಿದ್ದು, ಆಹಾರ ಅರಸಿ ಕಾಡಿನಿಂದ ನಾಡಿಗೆ ಕಾಡುಪ್ರಾಣಿಗಳು ಲಗ್ಗೆ ಇಡುತ್ತಿವೆ. ಇದರ ನಿಯಂತ್ರಣಕ್ಕೆ ವನ್ಯಜೀವಿ ಗಳ ಹಾವಳಿ ಪ್ರದೇಶಗಳಲ್ಲಿ ಬ್ಯಾರಿಕೇಡ್ ಅಳವಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದರು.

ಮೇಲ್ಸೇತುವೆ ಕಾಮಗಾರಿ ಪೂರ್ಣ: ಭಾಗಮಂಡಲ ಮೇಲ್ಸೇತುವೆ ನಿರ್ಮಾಣಕ್ಕೆ 2016ರಲ್ಲಿ ನಾನೇ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅನುದಾನ ಮಂಜೂರು ಮಾಡುವ ಮೂಲಕ 2017ರಲ್ಲಿ ಕಾಮಗಾರಿ ಆರಂಭಗೊಂಡಿತ್ತು. ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಸೂಕ್ತ ಸ್ಪಂದನೆ ನೀಡದ ಹಿನ್ನೆಲೆಯಲ್ಲಿ ಕಾಮಗಾರಿ ವಿಳಂಬವಾಗಿತ್ತು. ಇದೀಗ ಮತ್ತೇ ತಮ್ಮ ಕಾಂಗ್ರೆಸ್ ಸರ್ಕಾರ ಅಪೂರ್ಣಗೊಂಡಿದ್ದ ಕಾಮಗಾರಿಯನ್ನು ಪೂರ್ಣಗೊಳಿಸಲು ಶೀಘ್ರ ಅನುದಾನ ಬಿಡುಗಡೆಗೊಳಿಸಿದ ಪರಿಣಾಮ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಂಡಿದೆ ಎಂದರು.

ಈ ವೇಳೆ ಜಿಲ್ಲಾಡಳಿತದ ಪರವಾಗಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಪೊಲೀಸ್ ಇಲಾಖೆ ಪರವಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಲ್ಲಾ ಕಾಂಗ್ರೆಸ್ ಪರವಾಗಿ ಶಾಸಕರಾದ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಹಾಗೂ ಪಕ್ಷ ಪ್ರಮುಖರು ಮುಖ್ಯಮಂತ್ರಿಗಳಿಗೆ ಹೂಗುಚ್ಛ ನೀಡುವ ಮೂಲಕ ಆತ್ಮೀಯವಾಗಿ ಬರಮಾಡಿಕೊಂಡರು. ನಂತರ ಜಿಲ್ಲಾ ಪೊಲೀಸ್ ಸಶಸ್ತ್ರ ದಳದ ಸಿಬ್ಬಂದಿ ಗೌರವ ವಂದನೆ ಸಲ್ಲಿಸಿದರು.

ಕೊಡಗಿನ ಮೊಟ್ಟ ಮೊದಲ ಮೇಲ್ಸೇತುವೆ ಉದ್ಘಾಟನೆ

ಭಾಗಮಂಡಲದಲ್ಲಿ ಲೋಕಾರ್ಪಣೆಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಭಾಗಮಂಡಲದ ಮೇಲ್ಸೇತುವೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

> ಜನರು ಮೈಕ್ರೋ ಫೈನಾನ್ಸ್‌ನಿಂದ ಅನುಭವಿಸುತ್ತಿರುವ ಕಿರುಕುಳವನ್ನು ತಪ್ಪಿಸಲು ಹಾಗೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣಕ್ಕಾಗಿ ಸದ್ಯದಲ್ಲೇ ಸುಗ್ರೀವಾಜ್ಞೆ ಜಾರಿಗೊಳಿಸಲಾಗುವುದು.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ಮಡಿಕೇರಿ, ಜ.31–ಜಲಸಂಪನ್ಮೂಲ ಇಲಾಖೆ ಮತ್ತು ಕಾವೇರಿ ನೀರಾವರಿ ನಿಗಮದ ವತಿಯಿಂದ 30 ಕೋಟಿ ರೂ. ವೆಚ್ಚದಲ್ಲಿ ಭಾಗಮಂಡಲದ ತ್ರಿವೇಣಿ ಸಂಗಮದ ಬಳಿ ನಿರ್ಮಿಸಿರುವ ಕೊಡಗಿನ ಮೊಟ್ಟ ಮೊದಲ ಮೇಲ್ಸೇತುವೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಭಾಗಮಂಡಲದಲ್ಲಿ ಕಾವೇರಿ, ಕನ್ನಿಕೆ ಹಾಗೂ ಸುಜ್ಯೋತಿ ನದಿಗಳ ಸಂಗಮ ಕ್ಷೇತ್ರದಲ್ಲಿ ಇದೀಗ ಮೇಲ್ಸೇತುವೆ ಲೋಕಾರ್ಪಣೆ ಮಾಡುತ್ತಿರುವುದು ಸಂತೋಷ ತಂದಿದೆ. ಇದರಿಂದ ಈ ಕ್ಷೇತ್ರದ ಜನರು ಮಳೆಗಾಲದ ಪ್ರವಾಹದಲ್ಲಿ ಅನುಭಸುತ್ತಿದ್ದ ಸಂಕಷ್ಟಗಳಿಗೆ ಮುಕ್ತಿ ದೊರಕಿದಂತಾಗಿದೆ ಎಂದು ಹೇಳಿದರು.

2016ರಲ್ಲಿ ಅಂದಿನ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕೆ.ಜೆ.ಜಾರ್ಜ್ ಭಾಗಮಂಡಲದಲ್ಲಿ ಮೇಲ್ಸೇತುವೆ ಅನಿವಾರ್ಯತೆ ಕುರಿತು ನನ್ನ ಗಮನಕ್ಕೆ ತಂದಿದ್ದರು. ಬಳಿಕ ಹಂತ ಹಂತವಾಗಿ ಅನುದಾನ ಬಿಡುಗಡೆಗೊಳಿಸಿ, 2017ರಲ್ಲಿ ಅಧಿಕೃತವಾಗಿ ಕಾಮಗಾರಿ ಆರಂಭಿಸಲಾಗಿತ್ತು. ಹಿಂದಿನ ನಮ್ಮ ಸರ್ಕಾರದ ಅವಧಿಯಲ್ಲಿ ಕೊಡಗಿನ ಅಭಿವೃದ್ಧಿಗೆ ಸಾಕಷ್ಟು ಅನುದಾನ ಒದಗಿಸಲಾಗಿತ್ತು. ಈ ಬಾರಿಯೂ ಕೊಡಗಿನ ರಸ್ತೆ ಹಾಗೂ ಇತರೆ ಮೂಲಸೌಕರ್ಯ ಅಭಿವೃದ್ಧಿಗೆ ಇಬ್ಬರೂ ಶಾಸಕರ ಕೋರಿಕೆಯಂತೆ ಹೆಚ್ಚಿನ ಅನುದಾನ ನೀಡಲಾಗುವುದು ಎಂದರು.

ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಕೊಡಗಿನ ಮತದಾರರು ಕಾಂಗ್ರೆಸ್‌ಗೆ ಮತ ನೀಡಿ ಪಕ್ಷದ ಇಬ್ಬರೂ ಶಾಸಕರನ್ನು ಆಯ್ಕೆ ಮಾಡಿದ್ದಾರೆ. ಇದ್ದಕ್ಕೆ ಕೊಡಗಿನ ಜನತೆಗೆ ಮತ್ತೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ಕೊಡಗು ಎಂದರೆ ಬಿಜೆಪಿ ಎಂಬ ಅನ್ವರ್ಥ ನಾಮವಿತ್ತು ಆದರೆ, ಇಲ್ಲಿನ ಜನತೆ ಕಾಂಗ್ರೆಸ್‌ನಿಂದ ವಿರಾಜಪೇಟೆಯಿಂದ ಪೊನ್ನಣ್ಣ ಮತ್ತು ಮಡಿಕೇರಿಯಿಂದ ಡಾ.ಮಂತರ್‌ಗೌಡ ಅವರನ್ನು ಶಾಸಕರಾಗಿ ಆಯ್ಕೆ ಮಾಡುವ ಮೂಲಕ ಅನ್ವರ್ಥ ನಾಮವನ್ನು ಬದಲಿಸಿದ್ದಾರೆ. ಈ ಮೂಲಕ ಕಾಂಗ್ರೆಸ್‌ಗೆ ಆಶೀರ್ವಾದ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಂತಸ ವ್ಯಕ್ತಪಡಿಸಿದರು.

ನುಡಿದಂತೆ ನಡೆದ ಕಾಂಗ್ರೆಸ್: ಕಾಂಗ್ರೆಸ್ ನುಡಿದಂತೆ ನಡೆಯುವ ಪಕ್ಷವಾಗಿದ್ದು, ಕಾಂಗ್ರೆಸ್ ನೀಡಿದ ಭರವಸೆಗಳನ್ನು ಈಡೇರಿಸಿದೆ. 2013–18ರ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ನೀಡಿದ್ದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದೆ. ಆದರೆ, 2018ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ತಾನು ನೀಡಿದ್ದ ಭರವಸೆಗಳಲ್ಲಿ ಶೇ.10ರಷ್ಟು ಕೂಡ ಈಡೇರಿಸಲಿಲ್ಲ ಎಂದು ಸಿಎಂ ಆರೋಪಿಸಿದರು.

ಗ್ಯಾರಂಟಿ ಯೋಜನೆಗಳಿಂದ ಬಡವರಿಗೆ ಆರ್ಥಿಕ ಹಾಗೂ ಸಾಮಾಜಿಕವಾಗಿ ಶಕ್ತಿ ತುಂಬಲಾಗಿದೆ. ಯಾವ ಪಕ್ಷ ನುಡಿದಂತೆ ನಡೆಯುತ್ತದೆ, ಜನಪರವಾಗಿದೆ ಎನ್ನುವುದನ್ನು ಜನ ಅರ್ಥ ಮಾಡಿಕೊಳ್ಳಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 1ವರ್ಷ 8 ತಿಂಗಳಲ್ಲಿ ಪ್ರಮುಖವಾಗಿ ಭರವಸೆ ನೀಡಿದ್ದ 5 ಗ್ಯಾರಂಟಿ ಯೋಜನೆಗಳನ್ನು 1 ವರ್ಷದೊಳಗೆ ಈಡೇರಿಸಿದೆ. ಪಂಚ ಯೋಜನೆಗಳನ್ನು ಜಾರಿಗೆ ತಂದು ಸಮಾಜದಲ್ಲಿನ ಎಲ್ಲಾ ಬಡವರಿಗೆ ಆರ್ಥಿಕ, ಸಾಮಾಜಿಕವಾಗಿ ಶಕ್ತಿ ತುಂಬುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಐದು ಗ್ಯಾರಂಟಿಗಳನ್ನು ಜಾರಿಗೆ ತಂದು ಸಮಾಜದಲ್ಲಿ ಸಮಾನತೆ ತರುವ ಪ್ರಯತ್ನ ಮಾಡಿದ್ದೇವೆ ಎಂದರು.

ನಮ್ಮ ಧರ್ಮವನ್ನು ಪ್ರೀತಿಸಿ ಗೌರವಿಸಬೇಕು. ಆದರೆ, ಇನ್ನೊಂದು ಧರ್ಮವನ್ನು ಅಲ್ಲಗಳೆಯಬಾರದು. ಅದನ್ನೇ ಸಹಿಷ್ಣುತೆ ಎನ್ನುತ್ತಾರೆ. ನಾವೆಲ್ಲರೂ ವಿಶ್ವಮಾನವರಾಗುವ ಪ್ರಯತ್ನ ಮಾಡಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು, ಶಾಸಕರಾದ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಅರುಣ್ ಮಾಚಯ್ಯ, ಹೆಚ್.ಎಸ್.ಚಂದ್ರಮೌಳಿ ವಿವಿಧ ಬ್ಲಾಕ್ ಅಧ್ಯಕ್ಷರು ಹಾಜರಿದ್ದರು.

ಮೇಘಾಲಯ ರಾಜ್ಯಪಾಲರಿಂದ ಕನಕ ಬಂಡೆಗೆ ಪೂಜೆ

ಕ್ಷೇತ್ರವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಭರವಸೆ



ಕಾವೇರಿ ನದಿ ತೀರದ ಕನಕ ಬಂಡೆಗೆ ಪೂಜೆ ಸಲ್ಲಿಸಿದ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಮಾತನಾಡಿದರು.

ಶ್ರೀರಂಗಪಟ್ಟಣ, ಜ.31– ಕೇಂದ್ರ ಅಥವಾ ರಾಜ್ಯ ಸರ್ಕಾರ ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ ಶೀಘ್ರ ಕನಕ ಬಂಡೆ ಸ್ಥಳವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ತಿಳಿಸಿದ್ದಾರೆ.

ತಾಲೂಕಿನ ಮಹದೇವಪುರ ಗ್ರಾಮದ ಕಾವೇರಿ ನದಿ ತೀರದ ಕನಕ ಬಂಡೆಗೆ ಪೂಜೆ ಸಲ್ಲಿಸಿ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರತಿನಿತ್ಯ ಬೆಳಗ್ಗೆ ಯೋಗ ಮಾಡುವ ಅಭ್ಯಾಸವಿದ್ದು, ಧ್ಯಾನದಲ್ಲಿ ನಿರತನಾಗಿದ್ದ ನನಗೆ ಸಾಕ್ಷಾತ್ ಮಹದೇವನೇ ಬಂದು ಕನಕ ದರ್ಶನ ಮಾಡುವಂತೆ ಆದೇಶಿಸಿದ್ದಾನೆ. ಹಾಗಾಗಿ ಇಂದು ಕನಕ ಬಂಡೆಯ ದರ್ಶನ ಪಡೆದು, ಕೂಡಲ ಸಂಗಮ ಮಾದರಿಯಲ್ಲಿ ಕನಕಧಾಮ ನಿರ್ಮಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವುದಾಗಿ ತಿಳಿಸಿದರು.

ಇಂದಿಗೂ ಈ ಗ್ರಾಮದಲ್ಲಿ ಕನಕ ಬಂಡೆ ಎಂಬ ಜಾಗವಿದ್ದು, ಕನಕದಾಸರ ದೇವಾಲಯ ಇರುವುದು ವಿಶೇಷ. ಈ ದೇವಾಲಯಕ್ಕೆ ನೂರಾರು ವರ್ಷಗಳಿಂದ ಗ್ರಾಮಸ್ಥರು ಪೂಜೆ ಸಲ್ಲಿಸುತ್ತಾ ಬಂದಿದ್ದು, ಕನಕ ಬಂಡೆಯ ಬಗ್ಗೆ ಹಿರಿಯರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿಕೊಂಡು ಬರುತ್ತಲೇ ಇದ್ದಾರೆ. ಜೊತೆಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಿಲ್ಲಾಧಿಕಾರಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ಕರೆದಿದ್ದೇನೆ, ಅಲ್ಲಿ ಕನಕ ಬಂಡೆ ಅಭಿವೃದ್ಧಿ ಸಂಬಂಧ ಚರ್ಚಿಸಲಿದ್ದೇನೆ ಎಂದರು.

ಕನಕ ಶ್ರೀ ಗಾಮೀಭಾಭಿವೃದ್ಧಿ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಸಿದ್ದರಾಜು ಮಾತನಾಡಿದರು. ನಂತರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಈ ವೇಳೆ ಕಾಗೇನೆಲೆ ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ಡಾ.ರವಿ, ತಹಸೀಲ್ದಾರ್ ಪರುಶುರಾವ್ ಸತ್ತಿಗೇರಿ, ಬಿಜೆಪಿ ಮುಖಂಡ ಸಚ್ಚಿದಾನಂದ, ಪೀ.ಹಳ್ಳಿ ರಮೇಶ್ ಸೇರಿದಂತೆ ಇತರರು ಇದ್ದರು.

ನಾಳೆ ಮನ್‌ಮುಲ್‌ನ 12 ನಿರ್ದೇಶಕ ಸ್ಥಾನಕ್ಕೆ ಚುನಾವಣೆ

• ಕಾಂಗ್ರೆಸ್‌ಗೆ ಪ್ರತಿಷ್ಠೆ, ಜೆಡಿಎಸ್‌ಗೆ ಅಸ್ತಿತ್ವದ ಪ್ರಶ್ನೆ • ಕಣದಲ್ಲಿ ಒಬ್ಬ ಹಾಲಿ, ಒಬ್ಬ ಮಾಜಿ ಶಾಸಕರು • ಹಾಲಿ ಅಧ್ಯಕ್ಷ ಸೇರಿ, ನಾಲ್ಕು ಮಂದಿ ಮಾಜಿ ಅಧ್ಯಕ್ಷರು ಕಣದಲ್ಲಿ

ಮಂಡ್ಯ, ಜ.31– ಪ್ರತಿಷ್ಠಿತ ಮನ್‌ಮುಲ್(ಮಂಡ್ಯ ಜಿಲ್ಲಾ ಹಾಲು ಒಕ್ಕೂಟ)ದ ಐದು ವರ್ಷಗಳ ಆಡಳಿತ ಮಂಡಳಿಯ 12 ನಿರ್ದೇಶಕರ ಚುನಾವಣೆ ನಾಳೆ (ಭಾನುವಾರ) ನಡೆಯಲಿದ್ದು, ಜಿಲ್ಲೆಯಲ್ಲಿ ಐದು ಶಾಸಕರನ್ನು ಹೊಂದಿರುವ ಕಾಂಗ್ರೆಸ್‌ಗೆ ಪ್ರತಿಷ್ಠೆಯಾದರೆ, ಒಬ್ಬರು ಶಾಸಕ ಮತ್ತು ಸಂಸದರನ್ನು ಹೊಂದಿರುವ ಜೆಡಿಎಸ್‌ಗೆ ಈ ಚುನಾವಣೆ ಅಸ್ತಿತ್ವದ ಪ್ರಶ್ನೆಯಾಗಿದೆ.

ಮನ್‌ಮುಲ್ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ತೀವ್ರ ಪೈಪೋಟಿ ಎದುರಾಗಿದೆ. 12 ಸ್ಥಾನಗಳ ಪೈಕಿ ಹತ್ತು ನಿರ್ದೇಶಕ ಸ್ಥಾನಗಳಿಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಇನ್ನುಳಿದ ಎರಡು ನಿರ್ದೇಶಕ ಸ್ಥಾನಗಳಿಗೆ ಜೆಡಿಎಸ್‌ನಿಂದ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿರುವವರಿಗೆ ಬೆಂಬಲ ಸೂಚಿಸಿದೆ. ಇನ್ನು ಜೆಡಿಎಸ್ 11 ಕಡೆ ಸ್ಪರ್ಧಿಸಿದ್ದು, ಒಂದು ಸ್ಥಾನವನ್ನು ಬಿಜೆಪಿಗೆ ಬಿಟ್ಟು ಕೊಟ್ಟಿದೆ.

ಈಗಾಗಲೇ ಮತದಾನ ಹಕ್ಕು ಪಡೆದಿರುವ ಡೆಲಿಗೇಟ್ಸ್(ಪ್ರತಿನಿಧಿ)ಗಳಿಗೆ ಬೇಡಿಕೆ ಹೆಚ್ಚಿದ್ದು, ಅದರಂತೆ ಚುನಾವಣೆಯು ಇಡೀ ಜಿಲ್ಲೆಯ ರಾಜಕೀಯ ಚಿತ್ರಣವನ್ನು ಬದಲಿಸಿದೆ. ಅಭ್ಯರ್ಥಿಗಳು ಗೆಲ್ಲಲೇಬೇಕು ಎಂಬ ಹಠಕ್ಕೆ ಬಿದ್ದವರಂತೆ ಜಿದ್ದಾಜಿದ್ದಿನಿಂದ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸುವ ಮೂಲಕ ಒಬ್ಬರಿಗೊಬ್ಬರು ತೊಡೆ ತಟ್ಟುತ್ತಿದ್ದಾರೆ.

ಚುನಾವಣೆಯಲ್ಲಿ ಬಹುತೇಕ ಈಗಾಗಲೇ ಹಾಲಿ ನಿರ್ದೇಶಕರಾಗಿರುವವರೇ ಸ್ಪರ್ಧೆಗಿಳಿಯುತ್ತಿದ್ದಾರೆ. ಅದರ ಜೊತೆಗೆ ಎರಡ್ಮೂರು ಕ್ಷೇತ್ರಗಳಲ್ಲಿ ಹೊಸಬರು ಹಳೇ ಹುಲಿಗಳಿಗೆ ಪೈಪೋಟಿ ನೀಡಲು ಮುಂದಾಗಿದ್ದಾರೆ. ಕಾಂಗ್ರೆಸ್‌ನಲ್ಲಿ ಬಹುತೇಕ ಹಿಂದಿನ ಚುನಾವಣೆಯಲ್ಲಿ ಸೋತವರೇ ಮತ್ತೊಮ್ಮೆ ಪರೀಕ್ಷೆಗಿಳಿದಿದ್ದಾರೆ. ಇದೀಗ ಯಾರು ಯಾರನ್ನು ಸೋಲಿಸಿ ಜಿಲ್ಲೆಯ ಹೈನುಗಾರಿಕೆಯ ಬಹುದೊಡ್ಡ ಸಹಕಾರಿ ಕ್ಷೇತ್ರವಾಗಿರುವ ಮನ್ ಮುಲ್ ಆಡಳಿತ ಮಂಡಳಿಗೇರಲಿದ್ದಾರೆ ಎಂಬುದು ಕುತೂಹಲ ಕೆರಳಿಸಿದೆ.



ತಾಲೂಕಿನಲ್ಲಿ ಮೂರು ಕ್ಷೇತ್ರಗಳಿವೆ. ಕಾಂಗ್ರೆಸ್ ಬೆಂಬಲಿತರಾಗಿ ಮತ್ತೆ ಹಾಲಿ ನಿರ್ದೇಶಕ ಯು.ಸಿ.ಶಿವ ಕುಮಾರ್ ಕಣಕ್ಕಿಳಿದಿದ್ದಾರೆ. ಇವರ ಜೊತೆಗೆ ಹೊಸ ಮುಖಗಳಾದ ಕೆಬ್ಬಳ್ಳಿ ರಾಜು, ಕಾಳೇಗೌಡ ಹೆಮ್ಮಿಗೆ ಕಣದಲ್ಲಿದ್ದಾರೆ. ಜೆಡಿಎಸ್ ಬೆಂಬಲಿತರಾಗಿ ಹಾಲಿ ನಿರ್ದೇಶಕರೂ ಆಗಿರುವ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಹಾಲಿ ಉಪಾಧ್ಯಕ್ಷ ಎಂ.ಎಸ್.ರಘುನಂದನ್ ಜೊತೆಗೆ ಹೊಸ ಮುಖ ಕನ್ನಲಿ ವಿಜಯ್ ಕಣಕ್ಕಿಳಿದಿದ್ದಾರೆ. ಈಗಾಗಲೇ ಕಾಂಗ್ರೆಸ್–ಜೆಡಿಎಸ್ ನಡುವೆ ತೀವ್ರ ಪೈಪೋಟಿ ಎದುರಾಗಿದ್ದು, ಗೆಲುವಿಗಾಗಿ ಅಭ್ಯರ್ಥಿಗಳು ಕಡೆ ಹಂತದ ಪ್ರಚಾರದಲ್ಲಿ ತೊಡಗಿದ್ದಾರೆ.

ಕೆ.ಆರ್.ಪೇಟೆಯಲ್ಲಿ ದಳ ಬಂಡಾಯದ ಲಾಭದ ನಿರೀಕ್ಷೆಯಲ್ಲಿ ಕೈ: ಕೆ.ಆರ್.ಪೇಟೆ ತಾಲೂಕಿನಲ್ಲಿ ಎರಡು ಸ್ಥಾನಗಳಿಗೆ ತೀವ್ರ ಪೈಪೋಟಿ ನಡೆಯುತ್ತಿದೆ. ಕಾಂಗ್ರೆಸ್ ಈ ವಿಚಾರದಲ್ಲಿ ಬುದ್ಧಿವಂತಿಕೆ ನಡೆ ಅನುಸರಿಸುತ್ತಿದೆ. ಜೆಡಿಎಸ್‌ನ ಬಂಡಾಯವನ್ನು ಲಾಭ ಮಾಡಿಕೊಳ್ಳಲು ಮುಂದಾಗಿದೆ. ಜೆಡಿಎಸ್ ಬೆಂಬಲಿತರಾಗಿ ಹಾಲಿ ನಿರ್ದೇಶಕರು ಆಗಿರುವ ಶಾಸಕ ಹೆಚ್.ಟಿ.ಮಂಜು ಹಾಗೂ ಹೊಸ ಮುಖ ನಾಟನಹಳ್ಳಿ ಮಹೇಶ್ ಕಣದಲ್ಲಿದ್ದಾರೆ. ಅದೇ ಜೆಡಿಎಸ್ ಬಂಡಾಯಗಾರ ರಾಗಿ ಹಾಲಿ ನಿರ್ದೇಶಕ ಡಾಲು ರವಿ ಹಾಗೂ ಮಾಜಿ ಅಧ್ಯಕ್ಷ ಎಂ.ಬಿ.ಹರೀಶ್ ಸ್ಪರ್ಧಿಸಿದ್ದು, ಜೆಡಿಎಸ್ ಬಂಡಾಯ ವನ್ನು ಲಾಭ ಮಾಡಿಕೊಂಡಿರುವ ಕಾಂಗ್ರೆಸ್ ಬೆಂಬ ಲಿತ ಅಭ್ಯರ್ಥಿಗಳನ್ನು ಕಣಕ್ಕಿಳಿಸದೆ ಜೆಡಿಎಸ್‌ನ ಬಂಡಾಯ ಅಭ್ಯರ್ಥಿಗಳಿಗೆ ಬೆಂಬಲ ಸೂಚಿಸಿದೆ.

ಪಾಂಡವಪುರದಲ್ಲಿ ರಾಮಚಂದ್ರು ಸೋಲಿಸಲು ಸಿಎಸ್ಪಿ ಸಂಬಂಧಿ ಎಂಟ್ರಿ: ಪಾಂಡವಪುರ ತಾಲೂಕಿನ ಒಂದು ಸ್ಥಾನಕ್ಕೆ ಪೈಪೋಟಿ ಎದುರಾಗಿದೆ. ಕಳೆದ ಬಾರಿ ಜೆಡಿಎಸ್ ಬೆಂಬಲಿತರಾಗಿ ಸ್ಪರ್ಧಿಸಿದ್ದ ಕಾಡೇನಹಳ್ಳಿ ರಾಮಚಂದ್ರು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ನಡುವಿನ ವೈಮನಸ್ಸಿನಿಂದ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದು, ಕಾಂಗ್ರೆಸ್ ಬೆಂಬಲಿತರಾಗಿ ಕಣಕ್ಕಿಳಿದಿದ್ದಾರೆ. ರಾಮಚಂದ್ರು ಸೋಲಿಸಲು ಜೆಡಿಎಸ್ ಅಭ್ಯರ್ಥಿಯಾಗಿ ಪುಟ್ಟರಾಜು ಸಹೋದರ ಪುತ್ರ ಶಿವಕುಮಾರ್ ಅವರನ್ನು ಕಣಕ್ಕಿಳಿಸಿದ್ದಾರೆ. ಇದರಿಂದ ಇಬ್ಬರ ನಡುವೆ ನೇರಾನೇರ ಸ್ಪರ್ಧೆ ಏರ್ಪಟ್ಟಿದೆ.

ಮದ್ದೂರಿನಲ್ಲಿ ಇಬ್ಬರು ಮೈತ್ರಿ ಬೆಂಬಲಿತರು ಕಣಕ್ಕೆ: ಮದ್ದೂರು ತಾಲೂಕಿನ ಎರಡು ಸ್ಥಾನಗಳಿಗೆ ಜೆಡಿಎಸ್–ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾಗಿ ಇಬ್ಬರನ್ನು ಕಣಕ್ಕಿಳಿಸಲಾಗಿದೆ. ಮೈತ್ರಿ ಧರ್ಮ ಪಾಲಿಸಲು ಜೆಡಿಎಸ್ ಒಂದು ಸ್ಥಾನವನ್ನು ಬಿಜೆಪಿಗೆ ಬಿಟ್ಟುಕೊಟ್ಟು ಒಂದರಲ್ಲಿ ತಾನು ಸ್ಪರ್ಧಿಸಿದೆ.

ಅದರಂತೆ ಹಾಲಿ ನಿರ್ದೇಶಕಿ ಬಿಜೆಪಿಯ ರೂಪಾ ಹಾಗೂ ಹೊಸ ಮುಖ ಮಹೇಶ್ ಕಣದಲ್ಲಿದ್ದರೆ, ಬಿಜೆಪಿಯ ಬೆಂಬಲ ಸಿಗದ ಕಾರಣ ಹಾಲಿ ನಿರ್ದೇಶಕ ಎಸ್.ಪಿ.ಸ್ವಾಮಿ ಬಂಡಾಯವಾಗಿ ಕಣಕ್ಕಿಳಿದಿದ್ದಾರೆ. ಮೊದಲು ಜೆಡಿಎಸ್‌ನಲ್ಲಿಯೇ ಇದ್ದ ಸ್ವಾಮಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ನಡುವಿನ ಭಿನ್ನಾಭಿಪ್ರಾಯದಿಂದ ಪಕ್ಷ ತೊರೆದು ಬಿಜೆಪಿ ಸೇರ್ಪಡೆಯಾಗಿದ್ದರು. ಇದು ಡಿ.ಸಿ.ತಮ್ಮಣ್ಣ ಸಿಡಿದೇಳುವಂತೆ ಮಾಡಿತ್ತು. ಇದರಿಂದ ಈ ಬಾರಿಯ ಮೈತ್ರಿ ಟಿಕೆಟ್ ತಪ್ಪಿರುವ ಹಿನ್ನಲೆಯಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಅತ್ತ ಕಾಂಗ್ರೆಸ್‌ನಿಂದ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ ಹಾಗೂ ಶಾಸಕ ಕೆ.ಎಂ.ಉದಯ್ ಸಂಬಂಧಿ ಹರೀಶ್‌ಬಾಬು ಕಣಕ್ಕಿಳಿದಿದ್ದಾರೆ.

ಮಳವಳ್ಳಿಯಲ್ಲಿ ದಳ ಬಂಡಾಯ ಶಮನ: ಮಳವಳ್ಳಿ ತಾಲೂಕಿನ ಒಂದು ಸ್ಥಾನಕ್ಕೆ ಜೆಡಿಎಸ್‌ನಿಂದ ಇಬ್ಬರ ಹೆಸರು ಕೇಳಿ ಬಂದಿತ್ತು. ಹಾಲಿ ನಿರ್ದೇಶಕ ವಿಶ್ವನಾಥ್ ಹಾಗೂ ವಿಷಕಂಠ ಅವರು ಸ್ಪರ್ಧಿಸಲು ಮುಂದಾಗಿದ್ದರು. ಆದರೆ ದಳಪತಿಗಳ ಮಧ್ಯಪ್ರವೇಶದಿಂದ ಇಬ್ಬರ ನಡುವೆ ಭಿನ್ನಮತ ಶಮನಗೊಳಿಸಿದ್ದು, ಜೆಡಿಎಸ್ ಅಭ್ಯರ್ಥಿಯಾಗಿ ವಿಶ್ವನಾಥ್ ಹೆಸರು ಅಂತಿಮವಾಗಿ ಕಣದಲ್ಲಿದ್ದಾರೆ. ಇತ್ತ ಕಾಂಗ್ರೆಸ್ ಬೆಂಬಲಿತರಾಗಿ ಕೃಷ್ಣೇಗೌಡ ಸ್ಪರ್ಧಿಸುತ್ತಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ಮುಂದುವರೆಯಲಿದೆಯೇ ಕೈ ನಾಗಾಲೋಟ: ಶ್ರೀರಂಗಪಟ್ಟಣ ತಾಲೂಕಿನಲ್ಲಿ ಒಂದು ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತರಾಗಿ ಈಗಾಗಲೇ ನಾಲ್ಕು ಬಾರಿ ಗೆಲುವು ಸಾಧಿಸಿ ಅಧ್ಯಕ್ಷರಾಗಿರುವ ಬೋರೇಗೌಡ ಮತ್ತೊಮ್ಮೆ ಸ್ಪರ್ಧಿಸಿದ್ದು, ಮತ್ತೆ ಗೆಲುವಿನ ನಾಗಾಲೋಟ ಮುಂದುವರೆಸಲಿದ್ದಾರೆಂಬ ಪ್ರಶ್ನೆ ಉದ್ಭವವಾಗಿದೆ. ಇತ್ತ ಅವರ ವಿರುದ್ಧ ಪುಟ್ಟಸ್ವಾಮಿಗೌಡ ಮತ್ತು ಕಿಶೋರ್ ಎಂಬುವವರು ಕಣದಲ್ಲಿದ್ದಾರೆ.

ನಾಗಮಂಗಲದಲ್ಲೂ ಜಿದ್ದಾಜಿದ್ದಿನ ಪೈಪೋಟಿ: ನಾಗಮಂಗಲ ತಾಲೂಕಿನ ಎರಡು ಸ್ಥಾನಗಳಿಗೆ ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ಪೈಪೋಟಿ ಎದುರಾಗಿದೆ. ಈಗಾಗಲೇ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ವಿಧಾನ ಪರಿಷತ್ ಮಾಜಿ ಸದಸ್ಯ ಅಪ್ಪಾಜಿಗೌಡ ಹಾಗೂ ಹಾಲಿ ನಿರ್ದೇಶಕ ಲಕ್ಷ್ಮೀನಾರಾಯಣ ಅಖಾಡದಲ್ಲಿ ಹೋರಾಡುತ್ತಿದ್ದರೆ, ಇತ್ತ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಕಳೆದ ಬಾರಿ ನಿರ್ದೇಶಕರಾಗಿ ನಂತರ ನ್ಯಾಯಾಲಯದಿಂದ ಅನರ್ಹಗೊಂಡಿದ್ದ ನೆಲ್ಲಿಗೆರೆ ಬಾಲು ಮತ್ತೊಮ್ಮೆ ಸ್ಪರ್ಧೆಗಿಳಿದ್ದಿದ್ದರೆ, ಇನ್ನೊಂದು ಸ್ಥಾನಕ್ಕೆ ಹೊಸ ಮುಖ ಎನ್.ಎಂ.ದೇವೇಗೌಡ ಎಂಬುವವರು ಕಣದಲ್ಲಿದ್ದಾರೆ.

ಪೌರಕಾರ್ಮಿಕರ ಸೇವೆ ಅನನ್ಯ, ಅಮೂಲ್ಯ

• ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಮತ • ಚಾ.ನಗರದಲ್ಲಿ ಪೌರಕಾರ್ಮಿಕರ ದಿನಾಚರಣೆ



ಚಾ.ನಗರದ ಮಹರ್ಷಿ ವಾಲ್ಮೀಕಿ ಭವನದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

> ಪೌರಕಾರ್ಮಿಕರಿಗೆ ಮನೆ ನೀಡುವ ಸಲುವಾಗಿ ಈಗಾಗಲೇ ನಿವೇಶನ ಮಂಜೂರು ಮಾಡಲಾಗಿದ್ದು, 40 ಎಕರೆ ಜಾಗದಲ್ಲಿ 800 ರಿಂದ 1 ಸಾವಿರ ನಿವೇಶನಗಳನ್ನು ನೀಡಲು ಜಿಲ್ಲಾಡಳಿತ ಕ್ರಮವಹಿಸಿದೆ.
>
> –ಸಿ.ಪುಟ್ಟರಂಗಶೆಟ್ಟಿ, ಶಾಸಕ

ಚಾಮರಾಜನಗರ, ಜ.31–ಮಳೆ, ಚಳಿ, ಬಿಸಿಲೆನ್ನದೇ ಹಗಲು–ರಾತ್ರಿ ಹಾಗೂ ತುರ್ತು ಸಂದರ್ಭಗಳಲ್ಲಿ ನಗರ ಸ್ವಚ್ಛತೆ ಕಾಯಕ ಮಾಡುವ ಪೌರಕಾರ್ಮಿಕರ ವೃತ್ತಿ ಅನನ್ಯ ಹಾಗೂ ಬಹಳ ಅಮೂಲ್ಯವಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದ ಸಭಾಂಗಣದಲ್ಲಿ ಶುಕ್ರವಾರ ಪೌರಾಡಳಿತ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ನಗರಸಭೆ ಸಹಯೋಗದಲ್ಲಿ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪೌರಕಾರ್ಮಿಕರು ಊರು, ನಗರಗಳ ಸ್ವಚ್ಛಗೊಳಿಸುವ ಮೂಲಕ ಶುದ್ಧ ಗಾಳಿ ಮತ್ತು ಪರಿಸರ ನೀಡುವಲ್ಲಿ ಮುಂದಿದ್ದಾರೆ. ಪೌರಕಾರ್ಮಿಕರ ವೃತ್ತಿಯನ್ನು ಲಘುವಾಗಿ ಪರಿಗಣಿಸಬಾರದು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದಲ್ಲಿ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಸಾಕಷ್ಟು ಕಾನೂನುಗಳನ್ನು ಅಡಕಗೊಳಿಸಿದ್ದಾರೆ. ಅದರನ್ವಯ ಸರ್ಕಾರಗಳು ಪೌರಕಾರ್ಮಿಕರಿಗೆ ವಸತಿ ಯೋಜನೆ, ಆರೋಗ್ಯ ಭಾಗ್ಯ, ಕನಿಷ್ಠ ವೇತನ ಸೌಲಭ್ಯ, ಅವರ ಮಕ್ಕಳಿಗೆ ವಿದ್ಯಾರ್ಥಿವೇತನ, ವಿದೇಶಿ ವ್ಯಾಸಂಗ ಇನ್ನಿತರೆ ಯೋಜನೆಗಳನ್ನು ಜಾರಿಗೊಳಿಸಿವೆ. ಇಲಾಖೆಗಳಲ್ಲಿ ಶೇ.5ರಷ್ಟು ಅನುದಾನ ಪೌರಕಾರ್ಮಿಕರಿಗಾಗಿಯೇ ಮೀಸಲಿದೆ. ಅವುಗಳ ಸದ್ಬಳಕೆಯಾಗಬೇಕು ಎಂದು ತಿಳಿಸಿದರು.

ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ಪೌರಕಾರ್ಮಿಕರು ಅವಿರತವಾಗಿ ದುಡಿದಿದ್ದಾರೆ. ಪೌರಕಾರ್ಮಿಕರ ಅಭಿವೃದ್ಧಿಗಾಗಿ ಸರ್ಕಾರ ಹಲವು ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿದೆ. ಪೌರಕಾರ್ಮಿಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಸಮಾಜದ ಸತ್ಪ್ರಜೆಗಳನ್ನಾಗಿ ರೂಪಿಸಬೇಕು ಎಂದರು.

ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಉಪಾಧ್ಯಕ್ಷೆ ಮಮತಾ, ಸದಸ್ಯರಾದ ಮಹೇಶ್, ಬಸವಣ್ಣ, ಕುಮುದಾ ಮಾತನಾಡಿದರು. ಇದೇ ವೇಳೆ ಪೌರಕಾರ್ಮಿಕರಿಗಾಗಿ ನಡೆಸಿದ್ದ ಕ್ರೀಡಾಕೂಟದ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ನಿವೃತ್ತ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಜಿಲ್ಲಾ ಕಾರ್ಮಿಕ ಅಧಿಕಾರಿ ಡಾ.ಎಂ.ಸವಿತಾ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಎಂ.ವಿ.ಸುಧಾ, ಕಾರ್ಯಪಾಲಕ ಅಭಿಯಂತರ ಅಲ್ತಾಫ್, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸುಬ್ರಾಯ, ನಗರಸಭೆ ನಾಮನಿರ್ದೇಶಿತ ಸದಸ್ಯರಾದ ಸ್ವಾಮಿ, ಸಿದ್ದರಾಜು, ಬಾಲಸುಬ್ರಮಣ್ಯಂ ಇತರರು ಕಾರ್ಯಕ್ರಮದಲ್ಲಿ ಇದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರಸಭಾ ಕಾರ್ಯಲಯ ಮುಂಭಾಗದಿಂದ ವಿವಿಧ ಆಕರ್ಷಕ ಕಲಾತಂಡಗಳೊಂದಿಗೆ ಏರ್ಪಡಿಸಿದ್ದ ಜಾಥಾಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಚಾಲನೆ ನೀಡಿದರು. ನಗರದ ಪ್ರಮುಖ ಬೀದಿಗಳಲ್ಲಿ ಸಾಗಿದ ಜಾಥಾ ವಾಲ್ಮೀಕಿ ಭವನದಲ್ಲಿ ಅಂತ್ಯಗೊಂಡಿತು.

ಇಂದು ಭೋಗಯ್ಯನಹುಂಡಿಯಲ್ಲಿ ಶನಿದೇವರ ಆರಾಧನೆ

ಬೇಗೂರು, ಜ.31– ಗುಂಡ್ಲುಪೇಟೆ ತಾಲೂಕಿನ ಸಮೀಪದ ಭೋಗಯ್ಯನಹುಂಡಿ ಗ್ರಾಮದಲ್ಲಿ ಫೆ.1ರಂದು ಶನಿದೇವರ ಆರಾಧನಾ ಮಹೋತ್ಸವ ನಡೆಯಲಿದೆ.

ಅಂದು ಬೆಳಗ್ಗೆ 7.30ಕ್ಕೆ ದೇವರ ಮೂರ್ತಿಯನ್ನು ಕಬ್ಬಳ್ಳಿ ಗಡಿಯಿಂದ ಬಿರುದು, ಕಂಬ ಮೆರವಣಿಗೆಯೊಂದಿಗೆ ಮೂಡಗುಂಡ ಕಾಶಿ ತಮಡಪ್ಪನವರ ಕುಣಿತದೊಂದಿಗೆ ತರಲಾಗುವುದು. ಮಧ್ಯಾಹ್ನ 12.30ಕ್ಕೆ ಪ್ರಸಾದ ವಿನಿಯೋಗಿಸಲಾಗುವುದು ಎಂದು ದೇವಸ್ಥಾನ ಮಂಡಳಿ ತಿಳಿಸಿದೆ.

ಬದನಗುಪ್ಪೆ ಗ್ರಾಪಂ ಅಧ್ಯಕ್ಷರಾಗಿ ಮಲ್ಲೇಶ್ ಆಯ್ಕೆ

ಬದನಗುಪ್ಪೆ: ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಮಲ್ಲೇಶ್ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಮಲ್ಲೇಶ್ ಹಾಗೂ ಕಾಂಗ್ರೆಸ್ ಬೆಂಬಲಿತ ದಾಕ್ಷಾಯಿಣಿ ನಾಮಪತ್ರ ಸಲ್ಲಿಸಿದರು. ಗ್ರಾಪಂನಲ್ಲಿ ಒಟ್ಟು 21 ಸದಸ್ಯರಿದ್ದು, ಮಲ್ಲೇಶ್ 13 ಮತ ಪಡೆದು ಗೆಲುವು ಸಾಧಿಸಿದರೇ, ದಾಕ್ಷಾಯಿಣಿ 8 ಮತ ಗಳಿಸಿ ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ತೋಟಗಾರಿಕೆ ಇಲಾಖೆ ಹಿರಿಯ ನಿರ್ದೇಶಕ ಶಶಿಧರ್ ಕರ್ತವ್ಯ ನಿರ್ವಹಿಸಿದರು. ಈ ವೇಳೆ ಬಿಜೆಪಿ ಮುಖಂಡರು, ಗ್ರಾಪಂ ಸದಸ್ಯರು, ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ತಾಪಂ ಮಾಜಿ ಅಧ್ಯಕ್ಷ ಜಿ.ಬಸವಣ್ಣ, ಗ್ರಾಪಂ ಉಪಾಧ್ಯಕ್ಷೆ ರಾಜಮ್ಮ, ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಬಿ.ಸೂರ್ಯಕುಮಾರ್, ಪಿಡಿಒ ಮಹದೇವಸ್ವಾಮಿ, ಕಾರ್ಯದರ್ಶಿ ಲೋಕೇಶ್ ಇದ್ದರು.



ಬದನಗುಪ್ಪೆ ಗ್ರಾಪಂ ಅಧ್ಯಕ್ಷರಾಗಿ ಆಯ್ಕೆಯಾದ ಮಲ್ಲೇಶ್ ಅವರನ್ನು ಬಿಜೆಪಿ ಕಾರ್ಯಕರ್ತರು ಅಭಿನಂದಿಸಿದರು.

ಆದಿ ಕರ್ನಾಟಕ ಸಂಘಕ್ಕೆ ಆಡಳಿತಾಧಿಕಾರಿ ನೇಮಕ

ಚಾಮರಾಜನಗರ, ಜ.31–ತಾಲೂಕು ಆದಿ ಕರ್ನಾಟಕ ಸಂಘಕ್ಕೆ ಆಡಳಿತಾಧಿಕಾರಿಯಾಗಿ ಕೊಳ್ಳೇಗಾಲ ಉಪವಿಭಾಗಾಧಿಕಾರಿಯನ್ನು ನೇಮಕ ಮಾಡಿ ಸರ್ಕಾರ ಆದೇಶಿಸಿದೆ.

ಆಡಳಿತಾಧಿಕಾರಿ ಮುಂದಿನ ಆರು ತಿಂಗಳವರೆಗೆ ಕರ್ತವ್ಯ ನಿರ್ವಹಿಸಲು ಆದೇಶದಲ್ಲಿ ಸೂಚಿಸಲಾಗಿದೆ. ತಾಲೂಕು ಆದಿ ಕರ್ನಾಟಕ ಸಂಘದ ಆಸ್ತಿ ಸಂರಕ್ಷಣಾ ಸಮಿತಿ ವತಿಯಿಂದ ಸಂಘದಲ್ಲಿ ಅವ್ಯವಹಾರ ನಡೆದಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಹಾಗೂ ಜಿಲ್ಲಾ ನೋಂದಣಾಧಿಕಾರಿಗೆ ದೂರು ಸಲ್ಲಿಸಲಾಗಿತ್ತು.

ಈ ದೂರಿನನ್ವಯ ಜಿಲ್ಲಾಧಿಕಾರಿ, ಕೊಳ್ಳೇಗಾಲ ಉಪವಿಭಾಗಾಧಿಕಾರಿ ಅಧ್ಯಕ್ಷತೆಯಲ್ಲಿ ಇತರೆ ಇಲಾಖಾಧಿಕಾರಿಗಳನ್ನು ಒಳಗೊಂಡಂತೆ ತನಿಖಾ ಸಮಿತಿ ರಚಿಸಿದ್ದರು. ಸಮಿತಿ ವಿಚಾರಣೆ ನಡೆಸಿ ಸಲ್ಲಿಸಿರುವ ವರದಿಯಲ್ಲಿ ಸಂಘದ ಆಸ್ತಿಯನ್ನು 3 ಹಿಸ್ಸಾಗಳಲ್ಲಿ ಅಕ್ರಮವಾಗಿ ಕ್ರಯವಾಗಿರುವುದು ಕಂಡುಬಂದಿದೆ. ಹಿಸ್ಸಾಗಳ ಮೇಲೆ ನಡೆದಿರುವ ಎಲ್ಲಾ ಕ್ರಯ ವಹಿವಾಟು ರದ್ದುಪಡಿಸಿ ಅಸಿಂಧುಗೊಳಿಸುವುದು ಸೂಕ್ತ ಎಂದು ತಿಳಿಸಲಾಗಿದೆ.

ಅಲ್ಲದೆ, ಸಂಘದ ಜಾಗದಲ್ಲಿ ಹಾಲಿ ತಾಲೂಕು ಆದಿ ಕರ್ನಾಟಕ ಅಭಿವೃದ್ಧಿ ಸಂಘವಿದ್ದು, ಈ ಜಾಗವನ್ನು ಸಂಘಕ್ಕೆ ಸರ್ಕಾರದಿಂದ ಹಸ್ತಾಂತರ ಮಾಡಿರುವ ಬಗ್ಗೆ ಯಾವುದೇ ದಾಖಲಾತಿ ಇಲ್ಲದಿರುವುದರಿಂದ ಸೂಕ್ತ ದಾಖಲಾತಿ ಹಾಜರುಪಡಿಸಿ ದೃಢೀಕೃತಗೊಳ್ಳುವವರೆಗೆ ಆ ಜಾಗವನ್ನು ಸಮಾಜ ಕಲ್ಯಾಣ ಇಲಾಖೆಗೆ ವಹಿಸುವುದು ಸೂಕ್ತವಾಗಿರುತ್ತದೆ ಎಂದು ತಿಳಿಸಲಾಗಿದೆ.

ಇದರೊಂದಿಗೆ ಸಂಘದ ಎಲ್ಲಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ, ಜಿಲ್ಲಾ ಹಂತದ ಒಬ್ಬ ಅಧಿಕಾರಿಯನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡುವುದು ಸೂಕ್ತವಾಗಿರುತ್ತದೆ ಎಂದು ತನಿಖಾಧಿಕಾರಿಗಳು ಶಿಫಾರಸು ಮಾಡಿದ್ದರು. ಈ ವರದಿ ಅನ್ವಯ ಸಹಕಾರ ಇಲಾಖೆ ಜಂಟಿ ಕಾರ್ಯದರ್ಶಿ ಹಾಗೂ ವಿಶೇಷ ಕರ್ತವ್ಯಾಧಿಕಾರಿ ಎ.ಸಿ.ದಿವಾಕರ್ ಆದಿ ಕರ್ನಾಟಕ ಸಂಘಕ್ಕೆ ಆಡಳಿತಾಧಿಕಾರಿಯನ್ನು ಮುಂದಿನ 6 ತಿಂಗಳವರೆಗೆ ನೇಮಕ ಮಾಡಿ ಆದೇಶಿಸಿದ್ದಾರೆ.

ಆಡಳಿತಾಧಿಕಾರಿ ತಕ್ಷಣ ಸಂಘದ ಪ್ರಭಾರ ವಹಿಸಿಕೊಂಡು, ನ್ಯೂನತೆ ಸರಿಪಡಿಸಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಬೇಕು. ಅಲ್ಲದೆ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

REQUIRED FOR A REPUTED DISTRIBUTING COMPANY IN HEBBAL INDUSTRIAL AREA
Marketing Executives - 3 Post
Qualification - Dip.in Mech/ Any Degree - Male Candidates
9448246695
9972029007

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ Infosys/Schneder ಕಂಪನಿಯಲ್ಲಿ Security Gaurd ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಯಸ್ಸು 19 ರಿಂದ 50
ವಿದ್ಯಾಭ್ಯಾಸ: SSLC PUC Any Degree
8HRS/26 Days-18250/- Gross Salary
9880116412
9741300222

Kannada and English Typist Required for Documents
9741370680
9448246291

ಬೇಕಾಗಿದ್ದಾರೆ
24 ಅಡಿ ಸಿಎನ್‌ಜಿ ಮತ್ತು 11–10 ಕಂಟೈನರ್ ವಾಹನಗಳಿಗೆ ಮೈಸೂರಿನ ಲೋಕಲ್‌ಗೆ ಟ್ರಕ್ ಡ್ರೈವರ್ ಬೇಕಾಗಿದ್ದಾರೆ. ಪಿಎಫ್ & ಇಎಸ್‌ಐ ಸೌಲಭ್ಯವಿರುತ್ತದೆ. 50 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ.
Mob: 9341623350

ಬೇಕಾಗಿದೆ
ಲಕ್ಷ್ಮೀಪುರಂನಲ್ಲಿ ಅಪಾರ್ಟ್‌ಮೆಂಟ್ 3BHK ಅಗತ್ಯವಿದೆ. ಹಳೆಯದು ಹೊಸದು ಅಥವಾ ನಿರ್ಮಿಸಲಾಗುತ್ತಿರುವುದು.
9986756866

House For Sale
20/40 EAST
Ground 2 BHK + 1st floor Room
MUDA with Clear Documents
Own Borewell & Vastu
Police layout 2nd Stage
9380284276

MUDA KHATHA SITE SALE
East facing corner site Near Dadada Halli, E-khata Done, Jnanbharathi Layout Highway road behind Airport Direct Owner, 8.7 Mtrs x 12 Mtrs (Totally 1124 Sq.ft)
9342123373

3 ACRES LAND FOR SALE
WITH 30 COCONUT TREES TAR ROAD ATTACHED AT RAMANATHPURHUNDI NEAR GARGESHWARI.
9066102267
Brokers Excuse

ಹೊಸ ಮನೆ ಭೋಗ್ಯಕ್ಕಿದೆ
ಶ್ರೀರಾಂಪುರ 2ನೇ ಹಂತ, LIC ಲೇಔಟ್ ಭೋಗ್ಯ ರೂ. 15 ಲಕ್ಷ (Nego)
ಎರಡನೇ ಅಂತಸ್ತಿನ ಮನೆ
ಹೊಸ ಮನೆ – ಭೋಗ್ಯ 'E' ಫೇಸಿಂಗ್
ಸ್ವಾಮಿ: 9845570573
ಸತೀಶ್: 9113612442

ಹೊಸ ಮನೆ ಮಾರಾಟಕ್ಕಿದೆ
3 BHK, 30x40
EAST FACE
MUDA APPROVED
Near St. Joseph School, Yelwala, Mysore
Mob: 8217851695

PRAKRUTHI PROPERTIES
SITES FOR SALE
40x60 Commercial Site Nr Bramharamba Chitry,
40x60 House @ Ramakrishna Nagar
50x80 Site @ Kuvempu Nagar
20x30, 30x40 Sites & House @ Dattagalli, Ramakrishna Nagar
100 Sites Available @ Bilikere
Sites also available Near RT Nagar, Bogadi in & around Mysore
95386 90359, 90359 90359

VILLA PLOTS FOR SALE
MUDA APPROVED
30X40
Near Infosys & BEML
Free Site Visit Call Now
MCIL www.mcil.in
99168 44857
97314 00249

WANTED
Wanted Immediately Female Receptionist and Therapist with Good Looking Experience or Fresher Immediately Appointment. Age 20 To 35 yrs Salary up to 15000
7090655790
7019911976

MARKS CARD LOST
I, Mohan D S/o Devaraju, #253, Dasanakoppalu Village, Bogadi Post, Jayapura Hobli, Mysuru Taluk, Mysuru District.
Lost My
1) SSLC Marks Card, 2) Diploma in Civil Engineering, I, II, III, IV, V and VI Semesters Marks Card
Finders Call: Suitably Rewarded
8951373272

ಮನೆ ಮಾರಾಟಕ್ಕಿದೆ
ಮೈಸೂರು ನಗರದ ಅಶೋಕಪುರಂ 4ನೇ ಕ್ರಾಸ್‌ನಲ್ಲಿರುವ 2BHK ರಲ್ಲಿ ಕಟ್ಟಿರುವ 17x55 ಹೊಂದಿರುವ 2 ಮನೆ ಎಲ್ಲಾ ರೀತಿಯ ದಾಖಲಾತಿ ಹಾಗೂ ಕಾರ್ಪೋರೇಷನ್ ಖಾತೆ ಹೊಂದಿರುವ ಮನೆ ಮಾರಾಟಕ್ಕಿದೆ
9113523954
9019484156

SITE FOR SALE
50X80
North Face, 60ft Road, Semi Commercial
VIMANANagar
Dadadahalli
9739703467
9686895205

ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರ, ಮೈಸೂರು
21 ದಿನಗಳ ಕುಡಿತ ಬಿಡಿಸುವ ಮತ್ತು ಯೋಗ ಶಿಬಿರ
ಫೆ. 9 ರಿಂದ ಪ್ರಾರಂಭ
ಶುಲ್ಕ: 6 + 6 ಸಾವಿರ ರೂ.
9742010101,
9742919191, 8803344999

ಸುವರ್ಣ ಯಾತ್ರಾ
8 ದಿನಗಳ ಕಾಮಾಕ್ಯ, ಗುವಹಾಟಿ, ಶಿಲ್ಲಾಂಗ್ ಪ್ರವಾಸ 11/2/25.
8 ದಿನಗಳ ಗುಜರಾತ್, ನಾಗೇಶ್ವರ, ಸೋಮನಾಥ, ವಡ್ಡೋದರ ಪ್ರವಾಸ 12/2/25.
9 ದಿನಗಳ ನೇಪಾಳ ಕಟ್ಮಂಡು, ಪೋಕ್ರ, ಮುಕ್ತಿನಾಥ ಪ್ರವಾಸ 16/2/25.
7 ದಿನಗಳ ಕಾಶಿ, ಗಾಯ, ಅಯೋಧ್ಯಾ ಬಾಬಾ ಬೈದ್ಯನಾಥ ಪ್ರವಾಸ 4/3/25.
9019462508
6360146483

ಶ್ರೀ ಗೌರೀಶಂಕರ್ ಟ್ರಾವೆಲ್ಸ್
ಮಹಾಕುಂಭ ಯಾತ್ರೆ – 05 ದಿನಗಳು
ಪ್ರಯಾಗ್‌ರಾಜ್, ಕಾಶಿ, ಆಯೋಧ್ಯ
ದಿನಾಂಕ: 19–02–2025, 24–02–2025
(ವಿಮಾನ, ಬಸ್ಸು, ರೂಂ, ಊಟ)
9620002114

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ ಮತ್ತು ಹೂಟಗಳ್ಳಿ, ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: ಸೂಪರ್‌ವೈಸರ್: 22000+W/o (8hrs)
ಗಾರ್ಡ್: 20000+W/o (8hrs)
ವಯೋಮಿತಿ : 47 ವರ್ಷದೊಳಗಿರಬೇಕು
ಊಟ ತಿಂಡಿ ಸೌಲಭ್ಯವಿರುತ್ತದೆ
9880727819, 9620667819

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮೀಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಸಂಪರ್ಕಿಸಿ: ಡಾ.ಗುರುಪ್ರಸಾದ್
9036284426

ವಧು–ವರರ ಅನ್ವೇಷಣೆ
ಬಲಮುರಿ ಗಣಪತಿ ದೇವಸ್ಥಾನದ ಎದುರು, ತ್ರಿವೇಣಿ ಸರ್ಕಲ್ ಹತ್ತಿರ, ರಾಜಕುಮಾರ್ ರಸ್ತೆ, ಶಕ್ತಿನಗರ, ಮೈಸೂರು
ಕ್ರಿಶ್ಚಿಯನ್, ಎಸ್.ಸಿ, ಎಸ್.ಟಿ, ಲಿಂಗಾಯತ್, ಕುರುಬ, ಮರಾಠರು ಮತ್ತು ಎಲ್ಲಾ ಜನಾಂಗದ ವಧು–ವರರ ಮಾಹಿತಿ ಮತ್ತು ಅನ್ವೇಷಣೆಗೆ ನಮ್ಮನ್ನು ಸಂಪರ್ಕಿಸಿ:
ವಿಜಯಕುಮಾರ್: 9844396822
ಎಂ.ಮಹೇಂದ್ರಕುಮಾರ್: 9164596155

ಬಾಡಿಗೆಗೆ/ಭೋಗ್ಯಕ್ಕೆ ಇದೆ
100x50 + 80x30
ವಾಣಿಜ್ಯ ಶೆಡ್
ಚಿಕ್ಕಹಳ್ಳಿ, ಟಿ.ಎನ್.ಪುರ ರೋಡ್, ಮೈಸೂರು
8971433033

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ರೂಂ ಊಟ, ವಸತಿಯೊಂದಿಗೆ ಸಂಬಳ – ಟಿ.ಟಿ. 15200 – 36,000
7337645977, 7892046990

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

100% TEAK WOOD
FACTORY FINISH DOORS & FRAMES
@ FACTORY DEPOT RATES



10 YEARS WARRANTY ISI
9845426862
9901291267

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

FOR SALE
20x30 Duplex house, Dattagalli, Mysore.
Genuine buyers only.
(BROKERS EXCUSE)
Mob: 9481073733

ಗೃಹಿಣಿಯರಿಗೆ ಉದ್ಯೋಗ
ಪ್ರತಿಷ್ಠಿತ ಕಂಪನಿಯಲ್ಲಿ ಗೃಹಿಣಿಯರಿಗೆ ಉದ್ಯೋಗ, (Work at Home)
ಕನಿಷ್ಠ ವಿದ್ಯಾರ್ಹತೆ : SSLCಯಲ್ಲಿ ಉತ್ತೀರ್ಣ ವೇತನ : ರೂ. 10000/– ರಿಂದ 30000/– ಹಾಗೂ ಇತರೆ ಭತ್ಯೆಗಳು ಹಾಗೂ ಉಚಿತ ವಿದೇಶ ಪ್ರವಾಸ
9886647852

HOUSE, SITE FOR SALE
30X40 Duplex at Srirampura, 40x60 G/F House at Ramakrishna Nagar & Banker's Layout, Bogadi, 40x60 Independent at Vijayanagar, 40x60 Site at Dattagalli, R.K.Nagar, Kuvempunagar
7353430309

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ವಿಳಾಸ: ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

HOUSE FOR SALE
24x30 North face, LIG 123, 4ನೇ ಕ್ರಾಸ್, ಗಂಗೋತ್ರಿ ಹುಡ್ಕೋ ಲೇಔಟ್, ಮಾರುತಿ ದೇವಸ್ಥಾನದ ಹತ್ತಿರ.
Mob: 9008423578

Job Opportunity
Agritech Company.
Diploma E&C/E&E
Sales Representative
E-mail: opportunities@oscillomachines.com
Contact Us:
7899818241

CORRIGENDUM
Public Notice which was published on behalf of our client and appeared in both Star of Mysore dated 30.01.2025 Page 7 & Mysuru Mithra dated 31.01.2025 Page 5, in the name of PUBLIC NOTICE at both advt one of the Legal heir may kindly be read & corrected as Smt. Chinmayee Rahul, wife of Sri. Rahul M.
Sd/- Srilatha Dixit, Advocate, SLD LAW FIRM, No. 1416, N.S. Road, Near Sapna Book House, Mysuru, Mob: +919844640641

WANTED
Female Graduates for Pre-school in bogadi
6364227636

ತಕ್ಷಣ ಬೇಕಾಗಿದ್ದಾರೆ
ಮೈಸೂರು–ಕೊಡಗು–ಮಂಗಳೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಕೆಲಸ ಮಾಡಲು ಹೆವಿ ಡ್ರೈವರ್ 21,000, ಡೆಲಿವರಿ ಬಾಯ್ 15,000, ಮೈಸೂರು ಕಚೇರಿಯಲ್ಲಿ ಕೆಲಸ ಮಾಡಲು ಪಾರ್ಟ್ ಟೈಂ ಆಫೀಸ್ ಬಾಯ್ ಕೆಲಸಕ್ಕೆ 6,000 ಫುಲ್ ಟೈಂ ಆಫೀಸ್ ಬಾಯ್ ಕೆಲಸಕ್ಕೆ 12,000
9740408488

HOUSE FOR SALE
Measuring 21x48 (1,008 sq.ft.), West facing, G/F - 2 shops & house. F/F - House, opposite to Lakshmi Theatre, K.R. Mohalla, walkable distance to Mysore Palace, Mysuru.
Genuine buyers may contact:
Mob: 9901248318

ಬೇಕಾಗಿದ್ದಾರೆ
ಸ್ಟಾರ್ ಬಜಾಜ್ Star Bajaj (Authorised Main Dealer for Bajaj Two Wheeler-Mysore)
* ಮಾರ್ಕೆಟಿಂಗ್ ಅಂಡ್ ಸೇಲ್ಸ್ ಎಕ್ಸಿಕ್ಯೂಟಿವ್
Qualification: Any degree- fresher or experienced
Place of work - Mysore
ಕೂಡಲೇ ಸಂಪರ್ಕಿಸಿ: 9980751999

R S CONSTRUCTION
ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009
7019151884

ಬೇಕಾಗಿದ್ದಾರೆ
Photoshop and Coreldraw ತಿಳಿದಿರುವ ಅನುಭವ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: ಹೆಬ್ಬಾಳ್, More Megastore ಹತ್ತಿರ.
Mob: 9731305656

ಬೇಕಾಗಿದ್ದಾರೆ
Radium Sticker ಅಂಗಡಿಯಲ್ಲಿ ಕೆಲಸ ಮಾಡಲು ಅನುಭವಿ ಹುಡುಗರು ಬೇಕಾಗಿದ್ದಾರೆ. ಸ್ಥಳ: ಹೆಬ್ಬಾಳ್ More Megastore ಹತ್ತಿರ.
Mob: 9731305656

SK Construction
ಹೊಸ ಮನೆ ಕಟ್ಟಿಸಬೇಕೇ, ಚಿಂತೆ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿಕೊಡುತ್ತೇವೆ.
9620528490

ಕಮರ್ಷಿಯಲ್ ಜಾಗ ಬಾಡಿಗೆಗೆ /ಭೋಗ್ಯಕ್ಕೆ
ನೆಲ ಅಂತಸು
1200 ಚ.ಅಡಿಗಳು
ಶ್ರೀ ವಿನಾಯಕ ಗಾರ್ಡನ್ ಸಿಟಿ ಬಡಾವಣೆ, ಇಲವಾಲ
8495926884
8495024544

ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು 18 / 49. Day / night / 24 hrs. ವಾರದ ಸಂಬಳ ಅಥವಾ 15 ದಿನದ ಸಂಬಳ ದೊರೆಯುತ್ತದೆ.
8123252840, 8123630683

Wanted Site / Old House
Site / old house required for immediate registration in Hootagalli, Belavadi and Yelwal surroundings.
30x50, 40x50, 40x60
(Direct owners only). *Contact:*
Mob: 8867779326

ಸೈಟು ಬೇಕಾಗಿದೆ
ಬಸವೇಶ್ವರ ಲೇಔಟ್, ನಿರ್ಮಾಣ ಲೇಔಟ್, ಬ್ಯಾಂಕರ್ಸ್ ಲೇಔಟ್, ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಲೇಔಟ್, ಚಿಕ್ಕಹಳ್ಳಿ, ವರುಣ ಹಾಗೂ ಅಕ್ಕಪಕ್ಕದ ಲೇಔಟ್‌ಗಳಲ್ಲಿ ಟಿ. ನರಸೀಪುರ ರಸ್ತೆ / ಬನ್ನೂರ್ ರಸ್ತೆ.
Mob: 9686071750

SITE FOR SALE
60x80, W/F, 40 ft. tar road (commercial / residential).
SUNCITY HOMES
Seegally Road. DTCP Approved. 250 mtrs from Hunsur Road NH.
Mob: 9019746369

SITE FOR SALE
40x50 N/W Corner
Roopa Nagar, Bogadi
9742421313
9945779947

ಮನೆ ಭೋಗ್ಯಕ್ಕಿದೆ
ಸುಭಾಶ್‌ನಗರ (ಎನ್.ಆರ್.ಮೊಹಲ್ಲಾ ಹತ್ತಿರ) 3 ಬೆಡ್ ರೂಂ, ಎಲ್ಲಾ ರೀತಿಯ ಸೌಕರ್ಯವಿರುವ ಮನೆ ಮೈಸೂರಿನಲ್ಲಿ ಸಂಪರ್ಕಿಸಿ:
7348831599

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಕಂಪನಿ office & Showroom 7th 10th puc, ITI. Dipolmo Anydegree pass & fail ಆದವರಿಗೆ helpers, packing, Security, Driving, Data Entry Admin HR ಮುಂತಾದ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ.
9164052361
6364103418

SITE FOR SALE
50x70 North face, 40 feet road, Roopa Nagar, 4000 per sq. feet, Bank loan available.
8073300783, 8792235466

SITE FOR SALE
45x60 Commercial site on 60 ft. road for sale in KBL Gardenia Layout. Attached to Vijayanagara 4th Stage. Total 2630 sqft, 4750 per sqft. Price 1.25 crore.
8884616461, 8792235466

30x40 site is available
in Zuari Garden City, KRS road Mysore. Near KBL Silicon City. Gated community. Club House
3500 /sqft.
Rs. 42 Lakh only
Call 8884616461

30x40 site is available
For sale in Vishwaprajna attached layout in Hale Kesare Mysore. Just 7km from Mysore city Bus stop. Just 2km from Manipal hospital. Price is 36 lakh
8884616461, 8073300783

ಭೋಗ್ಯಕ್ಕೆ ಮನೆ ಇದೆ
1st Floor ಪೂರ್ವದಿಕ್ಕು (12 ಲಕ್ಷ)
Ground Floor ದಕ್ಷಿಣ ದಿಕ್ಕು (12 ಲಕ್ಷ)
ಕೆ.ಜಿ.ಕೊಪ್ಪಲ್, ಮೈಸೂರು
ಸತೀಶ್: 9113612442
ಸ್ವಾಮಿ: 9845570573

FOR SALE
30X40
SITE
VIJAYANAGAR 4TH STAGE
7899214181

ಬ್ರಾಹ್ಮಣ ವರ ಬೇಕಾಗಿದೆ
ಬ್ರಾಹ್ಮಣ ವಧುವಿನ ವಯಸ್ಸು 24, PUC ಕಲಿತಿರುವ/
ವಯಸ್ಸು 28, SSLC/
ವಯಸ್ಸು, 34, PUC
ವಯಸ್ಸು, 29, ಟೀಚರ್/
ವಯಸ್ಸು, 38, SSLC ಕಲಿತಿರುವ
ವಧುವಿಗೆ ವರ ಬೇಕಾಗಿದೆ. (ವಿವಾಹ ವೇದಿಕೆ)
8792731562



Solar Water Heater
SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಮೈಸೂರಿನ ಭೋಗಾದಿಯಲ್ಲಿ ಫ್ಲೆಕ್ಸ್ ಪ್ರಿಂಟಿಂಗ್ ಕಂಪನಿಯಲ್ಲಿ ಕೆಲಸ ನಿರ್ವಹಿಸಲು ಹುಡುಗರು ಬೇಕಾಗಿದ್ದಾರೆ.
ಕೋರೆಲ್ ಡ್ರಾ/ಫೋಟೋಶಾಪ್/ಗ್ರಾಫಿಕ್ಸ್ ಡಿಸೈನರ್ –2 (1 Year Experience)
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ –1 (1 Year Experience)
ಮಾರ್ಕೆಟಿಂಗ್ ಮ್ಯಾನೇಜರ್ –1 (1 Year Experience)
ಫ್ಲೆಕ್ಸ್ ಪ್ರಿಂಟಿಂಗ್‌ಮಾಡಲು ಹಾಗೂ ಫ್ಲೆಕ್ಸ್ ಅಂಟಿಸಲು ಹುಡುಗರು –2 (1 Year Experience)
8884140303/9980429367

ವಧು–ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ.
(IInd Marriages also)
Mob: 9343175000

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
N/E Corner
60x70
Suvarna Nagar
Bhogadi Road
8050821108

ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ
ಕುವೆಂಪುನಗರ (ಮಹಿಳೆ)
9972805819

ಬಾಡಿಗೆಗೆ ಇದೆ
ರೂಂಗಳು PG ಅಥವಾ ಕೋಚಿಂಗ್ ಸೆಂಟರ್ ನಡೆಸಲು ಸೂಕ್ತವಾಗಿವೆ.
ಹಳೇ ಬೋಗಾದಿ
9611539396
9980160399

S/W 28x40
ಕಾರ್ನರ್ ಸೈಟು ಮಾರಾಟಕ್ಕಿದೆ
14 ಲಕ್ಷದ 60 ಸಾವಿರಗಳು
DTCP "A" ಖಾತೆ
GSS ಲೇಔಟ್ TVS ಫ್ಯಾಕ್ಟರಿ ತಳೂರು ಹತ್ತಿರ, ಮೈಸೂರು
9972557534

MUDA ALLOTED SITE FOR SALE
30x40
SHANTHAVERI GOPALGOWDA NAGAR
9980658612

2BHK HOUSE AVAILABLE FOR RENT
#2215, 3rd main, 4th A cross, Dattagalli, mysore -570023 Near yahoo laundry,
Built up area - 1200 Sq ft.,
Bedrooms- 2 Nos,
Car parking -1 Nos
Water - Kaveri + bore {solar water}
9886979485
9741209383

LEASE
30X40
2BHK, EAST FACING NEAR VIVEKANANDA NAGAR CIRCLE
8884133677

ಭಾರತದ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ನಿವೃತ್ತರಿಗೆ ವಿಶೇಷ ಅವಕಾಶ ಸೆಮಿನಾರ್
ಆಹ್ವಾನಿತರಿಗೆ ಗೌರವ ಪೂರ್ವಕ ಸನ್ಮಾನ
ದಿನಾಂಕ: 03–01–2025 ಸೋಮವಾರ 11 am
ಸ್ಥಳ: ಹೋಟೆಲ್ ಮಂಸೂರ್ ಹೊಯ್ಸಳ (ಮೆಟ್ರೋಪೋಲ್, ಹೊಟೆಲ್ ಎದುರು, ಗೃಹಿಣಿಯರಿಗೆ ಹಾಗೂ ಬಿಜಿನೆಸ್ ವಲಯದವರಿಗೂ ಅವಕಾಶ ರಾಜ್ಯ/ಕೇಂದ್ರ/ಬ್ಯಾಂಕಿಂಗ್/ಸಾರ್ವಜನಿಕ/ಖಾಸಗಿ ಕ್ಷೇತ್ರದ VRS ಹಾಗೂ ನಿವೃತ್ತರು ಸ್ಯಾಲರಿ, ವಿದೇಶಕ್ಕೆ ಪ್ರಯಾಣಿಸುವ ಅವಕಾಶ ಇನ್ಸೆಂಟೀವ್ ಇತ್ಯಾದಿ ಸೌಲಭ್ಯ
7349052084, 8660954613
9669136318

30x40/30x50/Corner/ Middle ಸೈಟ್ ನಮ್ಮ ಬಡಾವಣೆಗಳಲ್ಲಿ ಲಭ್ಯವಿದೆ.
1) ಆರ್.ಟಿ.ನಗರ–ಶ್ರೀರಾಂಪುರ ರಿಂಗ್ ರಸ್ತೆ ಸಮೀಪ 55 ರಿಂದ 68 ಲಕ್ಷ
2) ಬನ್ನೂರು ರಸ್ತೆ–ವಾಜಮಂಗಲ ಗೇಟ್ & ವಿದ್ಯಾವಿಕಾಶ ಕಾಲೇಜ್ ಎದುರು 30–45 ಲಕ್ಷ
3) ವಿಜಯನಗರ 4ನೇ ಸ್ಟೇಜ್ – 48 ಲಕ್ಷ
4) ಪೊಲೀಸ್ –ಜೆಎಸ್‌ಎಸ್ ಹತ್ತಿರ
ಮಧ್ಯವರ್ತಿಗಳು ಕ್ಷಮಿಸಿ
8123075038

ಬೇಕಾಗಿದ್ದಾರೆ
ಕಲೆಕ್ಷನ್ ಏಜೆನ್ಸಿಗೆ ಫೀಲ್ಡ್ ಎಕ್ಸಿಕ್ಯೂಟಿವ್ (ಹುಡುಗರು) ಮತ್ತು ಟೆಲಿಕಾಲರ್‌ಗಳು (ಮೈಸೂರು ಸಿಟಿ, ಶ್ರೀರಂಗಪಟ್ಟಣ, ಚಾಮರಾಜನಗರ, ಕೊಳ್ಳೇಗಾಲ, ಪಾಂಡವಪುರ, ನಂಜನಗೂಡು, ಹುಲ್ಲಹಳ್ಳಿ, ಮಂಡ್ಯ, ಮಳವಳ್ಳಿ, ಮದ್ದೂರು) ಕೆಲಸಕ್ಕೆ ಬೇಕಾಗಿದ್ದಾರೆ
990/1, Tank bund Road, Ittigegudu, (Near Excibition Road, Mysuru-10
9972044442 ರಾಘವೇಂದ್ರ
8861357697 ಕವಿತಾ

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ Technical Helper ಕೆಲಸ ಮಾಡಲು ITI/Diploma ಮಾಡಿರುವ ಯುವಕರು ಬೇಕಾಗಿದ್ದಾರೆ.
ESI, PF ಸೌಲಭ್ಯವಿದೆ.
9945537353
8310990980

5 ಲಕ್ಷ ಪಾವತಿಸಿ (ಉಳಿಕೆ ಲೋನ್ ಲಭ್ಯ) ಹಾಗೂ ಖರೀದಿಸಿ 20x30/ 30x40/30x50 Site
ಅಭಿವೃದ್ಧಿಯಾದ ನಮ್ಮ ಬಡಾವಣೆಗಳಲ್ಲಿ ಲಭ್ಯ
1) ಟಿ.ನರಸೀಪುರ ರಸ್ತೆ – 21.6 ಲಕ್ಷ
2) ಬೋಗಾದಿ ರಸ್ತೆ – 31.2 ಲಕ್ಷ
3) ಹುಣಸೂರು ರಸ್ತೆ, ಇಲವಾಲ–25.5 ಲಕ್ಷ
4) ಲಲಿತಾದ್ರಿ ರಿಂಗ್ ರಸ್ತೆ ಸಮೀಪ–20 ಲಕ್ಷ
Brokers Excuse
7892445689

ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದ ಮನೆಯೊಂದರಲ್ಲಿ ಮನೆ ಕೆಲಸ ಮತ್ತು ಹೌಸ್ ಕೀಪಿಂಗ್ ಮಾಡಲು ನುರಿತ, ತಾಳ್ಮೆಯ ಅನುಭವಿ ಮಹಿಳೆಯರು ಬೇಕಾಗಿದ್ದಾರೆ.
ಕುವೆಂಪುನಗರದ ಸುತಮುತ್ತಲಿರುವ ಹಾಗೂ ದ್ವಿಚಕ್ರ ವಾಹನ ಇರುವವರಿಗೆ ಮೊದಲ ಆದ್ಯತೆ (ಆಕರ್ಷಕ ಸಂಬಳದೊಂದಿಗೆ)
9902508150
9902508150, 7406833379

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ



ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ಆಂಬುಲೆನ್ಸ್ ಮತ್ತು ಬಿಳಿಕೆರೆ ಮಂಜು ಅವರಿಗೆ ಗೂಡ್ಸ್ ಆಟೋ ವಿತರಿಸಲಾಯಿತು.

ವಿವಿಧ ಸೇವಾ ಕಾರ್ಯಗಳೊಂದಿಗೆ

ಶಾಸಕ ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬ ಅರ್ಥಪೂರ್ಣ ಆಚರಣೆ



ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಲಾಯಿತು.

ಹುಣಸೂರು, ಜ.31– ವಿವಿಧ ಸೇವಾ ಕಾರ್ಯಗಳೊಂದಿಗೆ ಶಾಸಕ ಜಿ.ಡಿ.ಹರೀಶ್ ಗೌಡರ 38ನೇ ಹುಟ್ಟುಹಬ್ಬವನ್ನು ಶುಕ್ರವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಾಸಕ ಜಿ.ಡಿ.ಹರೀಶ್‌ಗೌಡರ ಅಭಿಮಾನಿಗಳು ತಮ್ಮ ನೆಚ್ಚಿನ ನಾಯಕನ ಹುಟ್ಟುಹಬ್ಬದ ಅಂಗವಾಗಿ ಹಲವು ಸೇವಾ ಕಾರ್ಯಗಳಿಗೆ ಚಾಲನೆ ನೀಡಿದರು. ಶುಕ್ರವಾರ ಬೆಳಗ್ಗೆ ಕುಟುಂಬದ ಸದಸ್ಯರೊಂದಿಗೆ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಶಾಸಕ ಜಿ.ಡಿ.ಹರೀಶ್‌ಗೌಡ ಮಧ್ಯಾಹ್ನದ ವೇಳೆಗೆ ಬಿಳಿಕೆರೆಗೆ ಆಗಮಿಸಿದರು. ಈ ವೇಳೆ ನೆರೆದಿದ್ದ ಅಭಿಮಾನಿಗಳು, ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಶಾಸಕರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಬಳಿಕ ನಗರದ ಅರಸು ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ ವೇದಿಕೆ ಸಮಾರಂಭಕ್ಕೆ ಆಗಮಿಸಿದರು.

ಆಂಬುಲೆನ್ಸ್ ಕೊಡುಗೆ: ಶಾಸಕ ಜಿ.ಡಿ. ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ಮುಖಂಡರಾದ ಹರವೆ ಶ್ರೀಧರ್ ಮತ್ತು ಸತೀಶ್ ಪಾಪಣ್ಣ ಅವರು 7.5 ಲಕ್ಷ ರೂ. ಮೌಲ್ಯದ ಸುಸಜ್ಜಿತ ಆಂಬುಲೆನ್ಸ್ ಅನ್ನು ನಗರದ ಡಿ.ದೇವರಾಜ ಅರಸು ಸಾರ್ವಜನಿಕ ಆಸ್ಪತ್ರೆಗೆ ಕೊಡುಗೆ ನೀಡಿದರು. ಈ ವೇಳೆ ಮಾತನಾಡಿದ ಮುಖಂಡರು ಶಾಸಕರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ಆಂಬುಲೆನ್ಸ್ ನೀಡಿದ್ದೇವೆ ಎಂದು ಸಂತಸ ವ್ಯಕ್ತಪಡಿಸಿದರು.

ಅನಾಥ ಶವಗಳ ಮುಕ್ತಿದಾತನಿಗೆ ಆಟೋ ಕೊಡುಗೆ: ತಾಲೂಕಿನ ಬಿಳಿಕೆರೆ ಗ್ರಾಮದ ಅನಾಥ ಶವಗಳಿಗೆ ಮುಕ್ತಿ ಕಾಣಿಸುತ್ತಿದ್ದ ಬಿಳಿಕೆರೆ ಮಂಜು ಅವರಿಗೆ ಗ್ರಾಮದ ಜೆಡಿಎಸ್ ಮುಖಂಡ ಗೌರಿಶಂಕರ್(ಮಧು ಬಿಳಿಕೆರೆ) 3.5 ಲಕ್ಷ ರೂ. ಮೌಲ್ಯದ ಆಟೋ ಕೊಡುಗೆ ನೀಡಿ ಮಾನವೀಯತೆ ಮೆರೆದರು. ಶಾಸಕರ ಜನುಮದಿನ ಸಾರ್ಥಕತೆ ಪಡೆಯಬೇಕೆನ್ನುವ ಉದ್ದೇಶದಿಂದ ಈ ಕೆಲಸ ಮಾಡಿದ್ದೇನೆ ಎಂದು ಗೌರಿಶಂಕರ್ ಹರ್ಷ ವ್ಯಕ್ತಪಡಿಸಿದರು.

ಪ್ರಶ್ನೋತ್ತರ ಕೈಪಿಡಿ, ವೃದ್ಧರಿಗೆ ಕನ್ನಡಕ, ಮಹಿಳೆಯರಿಗೆ ಹೊಲಿಗೆ ಯಂತ್ರ: ಶಾಸಕರ ಹುಟ್ಟುಹಬ್ಬ ಅಂಗವಾಗಿ ಜೆಡಿಎಸ್ ಕಾರ್ಯಕರ್ತರು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ತಾಲೂಕಿನ 4500 ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ 6 ವಿಷಯಗಳನ್ನು ಒಳಗೊಂಡ ಪ್ರಶ್ನೋತ್ತರ ಕೈಪಿಡಿ ವಿತರಿಸಿದರು. ಇದೇ ವೇಳೆ 500ಕ್ಕೂ ಹೆಚ್ಚು ವೃದ್ಧರಿಗೆ ಉಚಿತವಾಗಿ ಕನ್ನಡಕ, 50ಕ್ಕೂ ಹೆಚ್ಚು ಮಹಿಳೆಯರಿಗೆ ಹೊಲಿಗೆ ಯಂತ್ರ ಹಾಗೂ 50ಕ್ಕೂ ಹೆಚ್ಚು ಮಂದಿಗೆ ತಳ್ಳುವ ಗಾಡಿ ವಿತರಿಸಲಾಯಿತು.

ಗಿರಿಜನರ ಹಾಡಿಯಲ್ಲಿ ಆರೋಗ್ಯ ಶಿಬಿರ: ಮೈಸೂರಿನ ವಿಸ್ತಾರ್ ಆಸ್ಪತ್ರೆ ಮತ್ತು ಹುಣಸೂರಿನ ಕಾವೇರಿ ಸೂಪರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ನಾಗಪುರ ಗಿರಿಜನ ಪುನರ್ವಸತಿ ಕೇಂದ್ರದ 3ನೇ ಬ್ಲಾಕ್‌ನಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ಉಚಿತ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. 350ಕ್ಕೂ ಹೆಚ್ಚು ಮಂದಿ ತಪಾಸಣೆಗೊಳಗಾದರು. ಬಳಿಕ ಉಚಿತವಾಗಿ ಔಷಧ ವಿತರಿಸಲಾಯಿತು. 10ಕ್ಕೂ ಹೆಚ್ಚು ಮಂದಿಗೆ ಕಣ್ಣಿನ ಶಸ್ತ್ರಚಿಕಿತ್ಸೆಗೆ ಅಗತ್ಯ ನೆರವು ಕಲ್ಪಿಸಲಾಯಿತು.

38 ಕೆಜಿ ತೂಕದ ಕೇಕ್: ಶಾಸಕ ಹರೀಶ್‌ಗೌಡರ 38ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳು 38 ಕೆಜಿ ತೂಕದ ಕೇಕ್ ಕತ್ತರಿಸಿ ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಶಾಸಕರ ಪತ್ನಿ ವರ್ಷಾ ಹರೀಶ್‌ಗೌಡ, ನಗರಸಭಾಧ್ಯಕ್ಷ ಎಸ್.ಶರವಣ, ಸದಸ್ಯರಾದ ಕೃಷ್ಣರಾಜ ಗುಪ್ತ, ದೇವರಾಜ್, ಹೆಚ್.ಪಿ.ಸತೀಶ್ ಕುಮಾರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಸವಲಿಂಗಯ್ಯ, ಶ್ರೀನಾಥ್, ಮುಖಂಡರಾದ ಪ್ರೇಮ್‌ಕುಮಾರ್, ದೇವರಾಜ ಒಡೆಯರ್ ಇತರರಿದ್ದರು.

ಉಕ್ಕಲಗೆರೆ ಡೈರಿಗೆ ಪರಮೇಶ್ವರ ಅಧ್ಯಕ್ಷ, ಜಯಂತಿ ಉಪಾಧ್ಯಕ್ಷೆ



ಉಕ್ಕಲಗೆರೆ ಡೈರಿ ಅಧ್ಯಕ್ಷರಾಗಿ ಪರಮೇಶ್ವರ, ಉಪಾಧ್ಯಕ್ಷೆಯಾಗಿ ಜಯಂತಿ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಜ.31– ತಾಲೂಕಿನ ಉಕ್ಕಲಗೆರೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಪರಮೇಶ್ವರ ಹಾಗೂ ಉಪಾಧ್ಯಕ್ಷೆಯಾಗಿ ಜಯಂತಿ ಸಿದ್ದರಾಮು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದ ಸಹಕಾರ ಸಂಘದಲ್ಲಿ ಶುಕ್ರವಾರ ನಡೆದ ಚುನಾವಣೆ ವಿಶೇಷ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪರಮೇಶ್ವರ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಜಯಂತಿ ಸಿದ್ದರಾಮು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸಿದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹಸೀನಾ ಪ್ರಕಟಿಸಿದರು. ಚುನಾವಣೆ ಪ್ರಕ್ರಿಯೆಯಲ್ಲಿ ಸದಸ್ಯರಾದ ಮಲ್ಲೇಗೌಡ, ನಾಗೇಶ, ಶಿವಸ್ವಾಮಿ, ಮಹದೇವಪ್ಪ, ಮಹದೇವಸ್ವಾಮಿ, ಜಯಮ್ಮ, ಉಷಾ, ಜಿ.ಮಹದೇವಪ್ಪ ಹಾಗೂ ನಾಗೇಂದ್ರ ಹಾಜರಿದ್ದು ಅಧ್ಯಕ್ಷ –ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಪರಮೇಶ್ವರ ಹಾಗೂ ಉಪಾಧ್ಯಕ್ಷೆ ಜಯಂತಿ ಮಾತನಾಡಿ, ಮೈಮುಲ್‌ನಿಂದ ಸಹಕಾರ ಸಂಘಕ್ಕೆ ಬರಬೇಕಾದ ಸವಲತ್ತುಗಳನ್ನು ತಂದು ಹಾಲು ಉತ್ಪಾದಕರಿಗೆ ಅನುಕೂಲ ಕಲ್ಪಿಸಿಕೊಡುವ ಜೊತೆಗೆ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಅನುದಾನ ತರಲು ಮುಂದಾಗುವುದಾಗಿ ತಿಳಿಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಉಕ್ಕಲಗೆರೆ ಬಸವಣ್ಣ ಮಾತನಾಡಿದರು. ಈ ವೇಳೆ ಸಂಘದ ಸಿಇಓ ಮಣಿಕಂಠಸ್ವಾಮಿ, ಮುಖಂಡರಾದ ಮಂಜುನಾಥ್, ರವಿಶಂಕರ್, ನಾಗೇಂದ್ರ ಪಾಪಣಿ, ನಾಗರಾಜು, ರವಿ, ಮಹದೇವಸ್ವಾಮಿ, ಹಾಸಪ್ಪ ಮನು, ನಿಂಗರಾಜು, ಸಿದ್ದರಾಮು, ಪ್ರಭುಸ್ವಾಮಿ, ಡೈರಿ ಮಹದೇವಸ್ವಾಮಿ, ಮಲ್ಲೇಶ್, ಮಹದೇವಶೆಟ್ಟಿ, ನಾಗೇಂದ್ರ, ಮಹಾದೇವಪ್ಪ, ಮಾಧು, ನಾಗರಾಜಪ್ಪ, ರುದ್ರ, ಮಹದೇವಸ್ವಾಮಿ, ಯುಬಿಎಂ ಮಹಾದೇವಪ್ಪ, ಡೈರಿ ಹಾಲು ಪರೀಕ್ಷಕ ನಂದೀಶ್, ಸಹಾಯಕ ಚಂದ್ರಶೇಖರ್ ಸೇರಿದಂತೆ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

ಅಪಘಾತದಲ್ಲಿ ಒಂದೇ ಕುಟುಂಬದ ಮೂವರ ಸಾವು

ಮೃತರ ಕುಟುಂಬಕ್ಕೆ ಶಾಸಕರಿಂದ ಸಾಂತ್ವನ



ಮೃತರ ಕುಟುಂಬಕ್ಕೆ ಶಾಸಕ ದರ್ಶನ್ ಸಾಂತ್ವನ ಹೇಳಿದರು.

ನಂಜನಗೂಡು, ಜ.31– ಕಳೆದ 3 ದಿನಗಳ ಹಿಂದೆ ಹಿರೀಕಾಟಿ ಗೇಟ್ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ತಾಲೂಕಿನ ಕೂಡ್ಲಾಪುರ ಗ್ರಾಮದ ಒಂದೇ ಕುಟುಂಬದ ಮೂವರು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಶಾಸಕ ದರ್ಶನ್ ಗ್ರಾಮಕ್ಕೆ ತೆರಳಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಅಮಾವಾಸ್ಯೆ ಹಿನ್ನೆಲೆಯಲ್ಲಿ ಗ್ರಾಮದ ಭಾಗ್ಯ, ಅವರ ಮಗ ಶಶಿಧರ್, ಸೊಸೆ ಶಾಲಿನಿ ಚಿಕ್ಕದೇವಮ್ಮನ ಬೆಟ್ಟಕ್ಕೆ ತೆರಳಿ ಪೂಜೆ ಸಲ್ಲಿಸಿದ ಬಳಿಕ ವಾಪಸ್ ಮನೆಗೆ ಹಿಂತಿರುಗುವ ಸಂದರ್ಭ ರಸ್ತೆ ಅಪಘಾತ ಸಂಭವಿಸಿ ಸ್ಥಳದಲ್ಲೇ ಸಾವನ್ನಪ್ಪಿದ್ದರು.

ನಗರದ 6ನೇ ವಾರ್ಡ್‌ನ ನಯನ ಕ್ಷತ್ರಿಯ ಬೀದಿಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮನೆ ಸುಟ್ಟು ಹೋಗಿದ್ದ ಹಿನ್ನೆಲೆಯಲ್ಲಿ ಸ್ಥಳಕ್ಕೆ ತೆರಳಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಸರ್ಕಾರದಿಂದ ಪರಿಹಾರ ದೊರಕಿಸುವ ಭರವಸೆ ನೀಡಿದರು.

ಈ ವೇಳೆ ಮಾಜಿ ಶಾಸಕ ಕೇಶವ ಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ. ಶಂಕರ್ ಹಲವರಿದ್ದರು.

ಬಡವರಿಗೆ ಸರ್ಕಾರದ ಸೌಲಭ್ಯ ತಲುಪಿಸಲು ಮುಂದಾಗಿ

ಸಂಸದ ಸುನೀಲ್ ಬೋಸ್ ಕರೆ



ಸಂಸದ ಸುನೀಲ್‌ಬೋಸ್ ಅವರನ್ನು ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದಿಂದ ಸನ್ಮಾನಿಸಲಾಯಿತು.

ತಿ.ನರಸೀಪುರ, ಜ.31– ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇರುವುದರಿಂದ ಬಡವರಿಗೆ ಸರ್ಕಾರದ ಸವಲತ್ತುಗಳು ತಲುಪಿಸಲು ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಸದಸ್ಯರು ಮುಂದಾಗಬೇಕು ಎಂದು ಸಂಸದ ಸುನೀಲ್ ಬೋಸ್ ಸೂಚಿಸಿದರು.

ತಮ್ಮ ಕಚೇರಿಯಲ್ಲಿ ಅಭಿನಂದನೆ ಸ್ವೀಕರಿಸಿ, ಅಖಿಲ ಕರ್ನಾಟಕ ಡಾ.ಹೆಚ್.ಸಿ. ಮಹದೇವಪ್ಪ ಅಭಿಮಾನಿ ಬಳಗದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ನಮ್ಮದೇ ಸರ್ಕಾರ ಇರುವುದರಿಂದ ಬಡಜನರಿಗೆ ಸರ್ಕಾರದ ಸವಲತ್ತು ದೊರಕಿಸಿಕೊಡಲು ಪ್ರಾಮಾಣಿಕವಾಗಿ ಶ್ರಮಿಸಬೇಕು. ಅಲ್ಲದೇ ಪಕ್ಷ ಸಂಘಟನೆಯಲ್ಲಿ ಪ್ರತಿಯೊಬ್ಬರೂ ತೊಡಗಿಸಿಕೊಳ್ಳಬೇಕು ಎಂದರು.

ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗ ಸ್ಥಾಪಿಸಿರುವುದು ಶ್ಲಾಘನೀಯ ಎಂದ ಸಂಸದರು ಅಭಿಮಾನಿ ಬಳಗಕ್ಕೆ ಯಾವುದೇ ಚ್ಯುತಿ ಬಾರದಂತೆ ಕಾರ್ಯನಿರ್ವಹಿಸಬೇಕು. ನನ್ನ ತಂದೆ, ಸಚಿವ ಹೆಚ್.ಸಿ.ಮಹದೇವಪ್ಪನವರು ಕಳೆದ 40 ವರ್ಷಗಳಿಂದ ರಾಜಕೀಯ ಕ್ಷೇತ್ರದ್ದು, ಜನ ಸೇವೆಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದು, ರಾಜ್ಯಾದ್ಯಂತ ಪ್ರವಾಸ ಮಾಡಿ ಬಡವರ ಸಮಸ್ಯೆ ಆಲಿಸಿ ಅವರ ಪರ ದನಿ ಎತ್ತಿದ್ದಾರೆ. ಹೀಗಾಗಿ ಅವರ ಅಭಿಮಾನಿ ಬಳಗ ಸ್ಥಾಪಿಸಿರುವ ನೀವು ಸಮಾಜದಲ್ಲಿ ಹಿಂದುಳಿದವರ, ಬಡವರ ದನಿಯಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಇದೇ ವೇಳೆ ಅಖಿಲ ಕರ್ನಾಟಕ ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ ಅವರ ನೇತೃತ್ವದಲ್ಲಿ ಮೈಸೂರು ಜಿಲ್ಲಾಧ್ಯಕ್ಷ ಕಗ್ಗಲೀಪುರ ಕೆ.ಎಂ.ಮಧುಕುಮಾರ್ ಮತ್ತು ಅಭಿಮಾನಿ ಬಳಗದ ಸದಸ್ಯರು ಸಂಸದ ಸುನೀಲ್ ಬೋಸ್ ಅವರನ್ನು ಸನ್ಮಾನಿಸಿದರು. ಅಭಿಮಾನಿ ಬಳಗದ ಕಾರ್ಯಾಧ್ಯಕ್ಷ ಡಾ.ಕೆ.ಎನ್.ಬಸವರಾಜು, ಉಪಾಧ್ಯಕ್ಷ ಭರತ್ ಕಡಕೊಳ, ಪ್ರಧಾನ ಕಾರ್ಯದರ್ಶಿಗಳಾದ ಬಿ.ಆರ್ ನಾಗರಾಜು, ಖಜಾಂಚಿ ದಡದಹಳ್ಳಿ ಮಹದೇವು, ಮಾಧ್ಯಮ ಸಲಹೆಗಾರ ಮಂಜುನಾಥ್, ಕಾರ್ಯದರ್ಶಿ ಹರದನಹಳ್ಳಿ ಮಹೇಶ್, ನಿರ್ದೇಶಕರಾದ ಮಾವಿನಹಳ್ಳಿ ನಾಗೇಶ್, ಹುಲ್ಲಹಳ್ಳಿ ಬಾಬು, ಬೆನಕನಹಳ್ಳಿ ಹರೀಶ್, ಚಾಮರಾಜನಗರ ಜಿಲ್ಲಾಧ್ಯಕ್ಷ ಮಾಲಂಗಿ ಮಹೇಶ್ ಉಪಸ್ಥಿತರಿದ್ದರು.

ಕಾರ್ಯಾಧ್ಯಕ್ಷರಾಗಿ ಆಯ್ಕೆ



ಪಿರಿಯಾಪಟ್ಟಣ, ಜ.31– ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಮೈಸೂರು ಜಿಲ್ಲಾಧ್ಯಕ್ಷ ಕುಮಾರ್ ಹಾಗೂ ತಾಲೂಕು ಅಧ್ಯಕ್ಷ ಕೆ.ಎಸ್.ಸ್ವಾಮಿಗೌಡರ ಆದೇಶದೊಂದಿಗೆ ಪಿರಿಯಾಪಟ್ಟಣ ರೈತ ಸಂಘದ ಕಾರ್ಯಾಧ್ಯಕ್ಷರಾಗಿ ಕೆ.ಜಿ.ರಘುಪತಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೆರೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ಕೆರೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನಡೆಯಿತು.

ಮೂಗೂರು, ಜ.31– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಯೋಗದಲ್ಲಿ ಕೊತ್ತೇಗಾಲ ಗ್ರಾಪಂ ವ್ಯಾಪ್ತಿಯ ಕನ್ನಹಳ್ಳಿ ಗ್ರಾಮದ ಸರ್ಕಾರಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಯೋಜನೆಯ ಪ್ರಾದೇಶಿಕ ವಿಭಾಗದ ನಿರ್ದೇಶಕ ಬಿ.ಜಯರಾಮ ನೆಲ್ಲಿತ್ತಾಯ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಕೆರೆ ಪುನಶ್ಚೇತನ ಕಾರ್ಯಕ್ರಮದಿಂದ ಜನಜಾನುವಾರುಗಳ ಕುಡಿಯುವ ನೀರಿಗೆ, ಕೃಷಿಗೆ ಅನುಕೂಲವಾಗುತ್ತದೆ. ಜನತೆ ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದರು. ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎನ್. ಪ್ರಭುಸ್ವಾಮಿ ಮಾತನಾಡಿದರು. ಕೊತ್ತೇಗಾಲ ಗ್ರಾಪಂ ಅಧ್ಯಕ್ಷೆ ಪುಷ್ಪ, ಮಾಜಿ ಅಧ್ಯಕ್ಷ ಲಕ್ಷ್ಮಣ್, ಕೆರೆ ಸಮಿತಿ ಅಧ್ಯಕ್ಷ ಬಸವರಾಜು, ಸೋಮಣ್ಣ ಕ್ಷೇತ್ರ ಯೋಜನಾಧಿಕಾರಿ ಹನುಮಂತಪ್ಪ, ಮಂಟಯ್ಯ, ಬಸವಣ್ಣ, ಶಿವ ಕುಮಾರ್, ನಂಜಪ್ಪ, ಪುಟ್ಟಸ್ವಾಮಿ, ಮಾಲತಿ, ಜಯಮ್ಮ, ಕೃಷಿ ಮೇಲ್ವಿಚಾರಕ ಕುಮಾರ್, ವಲಯ ಮೇಲ್ವಿಚಾರಕಿ ಕುಮಾರಿ, ಯಜಮಾನ್ ಸಿದ್ದರಾಜು, ಪಾಪಣ್ಣ, ಸಿ.ಕುಮಾರ್, ರಾಜಪ್ಪ, ಮಾಧುಸ್ವಾಮಿ, ಮಹೇಶ್, ಕುಮಾರ್, ಬಸಪ್ಪ, ಮಹದೇವಯ್ಯ ಗ್ರಾಮಸ್ಥರು ಹಾಜರಿದ್ದರು.

ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ

ಅಮಿತ್ ಶಾ ಬಂಧನಕ್ಕೆ ಒತ್ತಾಯಿಸಿ ಬೃಹತ್ ಪ್ರತಿಭಟನೆ



ಅಮಿತ್ ಶಾ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಹುಣಸೂರು, ಜ.31– ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹಸಚಿವ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸಿ ಬಂಧಿಸುವಂತೆ ಒತ್ತಾಯಿಸಿ ಡಾ.ಬಿ.ಆರ್.ಅಂಬೇಡ್ಕರ್ ಹೋರಾಟ ಸಮಿತಿ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಸಂವಿಧಾನ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ನಗರದ ಪ್ರಮುಖ ಬೀದಿಗಳಲ್ಲಿ ನೀಲಿ ಬಾವುಟಗಳನ್ನು ಹಿಡಿದು ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿರುವ ಅಮಿತ್ ಶಾಗೆ ಧಿಕ್ಕಾರ. ಕೂಡಲೇ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು. ದಲಿತ ವಿರೋಧಿ ಕೇಂದ್ರ ಸರ್ಕಾರಕ್ಕೆ ಧಿಕ್ಕಾರ, ಅಂಬೇಡ್ಕರ್ ಜಿಂದಾಬಾದ್ ಮುಂತಾದ ಘೋಷಣೆ ಕೂಗುತ್ತಾ ಉಪವಿಭಾಗಾಧಿಕಾರಿ ಕಚೇರಿವರೆಗೂ ಮೆರವಣಿಗೆ ನಡೆಸಿದರು.

ಹಿರಿಯ ದಲಿತ ಹೋರಾಟಗಾರ ಆನಂದಸ್ವಾಮಿ ಮಾತನಾಡಿ, ಅಂಬೇಡ್ಕರ್ ಅವರು ಆಧುನಿಕ ಭಾರತದ ನಿರ್ಮಾತೃ. ಭಾರತೀಯ ಪ್ರಜಾಪ್ರಭುತ್ವವೆಂಬ ಭವ್ಯ ಸೌಧ ಸಂವಿಧಾನ ಶಿಲ್ಪಿ. ಆದರೂ ಅಮಿತ್ ಶಾ ಅವರು ಅಂಬೇಡ್ಕರ್ ಬಗ್ಗೆ ಕೇವಲವಾಗಿ ಮಾತನಾಡಿರುವುದು ಸಂವಿಧಾನ ವಿರೋಧಿಯಾಗಿದೆ. ಕೂಡಲೇ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ಒತ್ತಾಯಿಸಿದರು.

ಸಿಪಿಎಂ ಜಿಲ್ಲಾ ಸಮಿತಿ ಮುಖಂಡ ಕೆ.ಬಸವರಾಜು ಮಾತನಾಡಿ, ಅಂಬೇಡ್ಕರ್ ಅವರ ಸಾಧನೆ ಮತ್ತು ಸಂವಿಧಾನ ರಚಿಸಿರುವುದನ್ನು ಸಹಿಸದ ಮನುವಾದಿಗಳು ಅವರ ವಿರುದ್ಧ ದಾಳಿಗೆ ಮುಗಿಬಿದ್ದಿದ್ದಾರೆ. ಇದರ ವಿರುದ್ಧ ಸಂಘಟಿತ ಹೋರಾಟಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.


ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ಮಹಿಳಾ ಸಂಘದ ಅಧ್ಯಕ್ಷೆ ರೇಣುಕಾ, ನಿಂಗರಾಜ ಮಲ್ಲಾಡಿ, ದೇವರಾಜು ಒಡೆಯರ್, ಬಸವರಾಜು, ವಕೀಲ ಪುಟ್ಟರಾಜು, ವರದರಾಜು, ಕುಮಾರ್, ರಾಮಕೃಷ್ಣ ಮಾತನಾಡಿ, ಕೇಂದ್ರ ಗೃಹ ಸಚಿವರನ್ನು ಸಂಪುಟದಿಂದ ವಜಾಗೊಳಿಸಬೇಕಾದ ಪ್ರಧಾನ ಮಂತ್ರಿಗಳು ಅವರ ಮಾತುಗಳನ್ನು ಸಮರ್ಥಿಸಿಕೊಂಡು ಅವರ ಬೆನ್ನಿಗೆ ನಿಂತಿರುವುದು ಅಪಾಯಕಾರಿ ಬೆಳವಣಿಗೆ ಎಂದರು.

ಅಂಬೇಡ್ಕರ್ ಅವರು ದಲಿತರ ಅಭಿವೃದ್ಧಿಗಾಗಿಯೇ ದುಡಿದವರು. ಆದರೆ ಎಲ್ಲಾ ವರ್ಗದ ಮಹಿಳೆಯರು, ಕಾರ್ಮಿಕರು ಅನುಭವಿಸಿದ ಅಪಮಾನ ನೋವುಗಳನ್ನು ಯಾರೂ ಕೂಡ ಅನುಭವಿಸಬಾರದೆಂದು ದೃಢ ಸಂಕಲ್ಪ ತಳೆದು ಹೋರಾಟ ಮಾಡಿ ತಮ್ಮ ಬದುಕನ್ನೇ ಸಮರ್ಪಿಸಿಕೊಂಡವರು ಎಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ಶಿವರಾಜು, ಬಸವಲಿಂಗಯ್ಯ, ಕುನ್ನೇಗೌಡ, ರಾಜು, ಸಿದ್ದೇಶ್, ದೇವರಾಜು ಮಲ್ಲಾಡಿ, ಸ್ವಾಮಿ, ಗೋವಿಂದರಾಜು, ರಾಘು, ಕುಮಾರ, ಪ್ರಸನ್ನ, ಡಿಎಚ್‌ಎಸ್‌ನ ಶಿವರಾಮು, ಹೆಚ್.ಎಸ್‌ಮಹದೇವಮ್ಮ, ನಾರಾಯಣ, ಪುಟ್ಟರಾಜು, ಚೆಲುವರಾಜು, ಕೃಷ್ಣ, ಪರಮೇಶ್, ರಾಧಕೃಷ್ಣ ರಾಮಚಂದ್ರ ರಾಮೇಗೌಡ ಇತರರಿದ್ದರು.

ಕೆ.ಆರ್.ನಗರ ಕ್ಷೇತ್ರದ ಗ್ರಾಮಗಳ ಅಭಿವೃದ್ಧಿಗೆ ಸರ್ಕಾರ ಬದ್ಧ

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಸತೀಶ್ ಜಾರಕಿಹೊಳಿ ಚಾಲನೆ ನೀಡಿದರು.

ಕೆ.ಆರ್.ನಗರ, ಜ.31– ಅಭಿವೃದ್ಧಿಯಿಂದ ವಂಚಿತವಾಗಿರುವ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಗ್ರಾಮಗಳ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ತಾಲೂಕಿನ ಹೆಬ್ಬಾಳು ಗ್ರಾಮದಿಂದ ಕೆಸ್ತೂರು ಗೇಟ್, ಚುಂಚನಕಟ್ಟೆ ಮಾರ್ಗ ಸಾಲಿಗ್ರಾಮ ಮತ್ತು ಹೊಳೆನರಸೀಪುರ ಸಂಪರ್ಕ ಕಲ್ಪಿಸುವ ರಸ್ತೆಯ ಮರು ಡಾಂಬರೀಕರಣಕ್ಕಾಗಿ ಲೋಕೋಪಯೋಗಿ ಇಲಾಖೆ ವತಿಯಿಂದ 6 ಕೋಟಿ ರೂ. ಮಂಜೂರಾಗಿದ್ದು, ಶುಕ್ರವಾರ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಮಧುವನಹಳ್ಳಿ, ಕೆ.ಆರ್. ನಗರ ಮತ್ತು ಚೀರ್ನಹಳ್ಳಿ ಗ್ರಾಮದ ಕೂಡು ರಸ್ತೆ ಬಳಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಕಳೆದ 20 ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾಣದ ಗ್ರಾಮಗಳನ್ನು ಗುರುತಿಸಿ ಆಗಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪಟ್ಟಿ ಮಾಡಿ ಅನುದಾನಕ್ಕಾಗಿ ಶಾಸಕ ಡಿ.ರವಿಶಂಕರ್ ಈಗಾಗಲೇ ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಸಲ್ಲಿಸಿದ್ದಾರೆ. ಶಾಸಕರ ಬೇಡಿಕೆಗೆ ತಕ್ಕಂತೆ ಸರ್ಕಾರ ಅನುದಾನ ಮಂಜೂರು ಮಾಡಲಿದೆ. ಇದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಸಿಎಂ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕೆ.ಆರ್.ನಗರ ಕ್ಷೇತ್ರಕ್ಕೆ ಲೋಕೋಪಯೋಗಿ ಇಲಾಖೆಯಿಂದ 58 ಕೋಟಿ ನೀಡಲಾಗಿದ್ದು, ಇದರ ಜೊತೆಗೆ ಇತರ ಇಲಾಖೆಯಿಂದಲೂ ಅಭಿವೃದ್ಧಿ ಕಾರ್ಯಕ್ಕಾಗಿ ಹಣ ನೀಡಲಾಗಿದೆ. ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳಿಗಾಗಿ 56 ಸಾವಿರ ಕೋಟಿ ರೂ.ಗಳನ್ನು ಪ್ರತ್ಯೇಕವಾಗಿ ಮೀಸಲಿಟ್ಟಿದ್ದು, ಅಭಿವೃದ್ಧಿ ಕಾಮಗಾರಿಗಳಿಗೂ ಅಗತ್ಯ ಅನುದಾನ ನೀಡುತ್ತಿದೆ. ವಿಪಕ್ಷದವರು ಮಾಡುವ ಅಪಪ್ರಚಾರಕ್ಕೆ ಜನತೆ ಕಿವಿಗೊಡಬಾರದು ಎಂದು ಮನವಿ ಮಾಡಿದರು.

ಗ್ರಾಮ ಪರಿಮಿತಿ ರಸ್ತೆಗಳ ಅಭಿವೃದ್ಧಿಗಾಗಿ ಶಾಸಕರಿಗೆ ತಲಾ 10 ಕೋಟಿ ನೀಡುವುದಾಗಿ ಮುಖ್ಯಮಂತ್ರಿಗಳು ಈಗಾಗಲೇ ಘೋಷಿಸಿದ್ದು, ಶೀಘ್ರ ಅನುದಾನ ಬಿಡುಗಡೆಗೊಳ್ಳಲಿದೆ. ಅಲ್ಪ ಸಂಖ್ಯಾತ ಅಭಿವೃದ್ಧಿ ನಿಗಮದಿಂದಲೂ ಆ ಬಡಾವಣೆಗಳ ಅಭಿವೃದ್ಧಿಗಾಗಿ ಅನುದಾನ ನೀಡಲಾಗಿದೆ ಏಪ್ರಿಲ್ ತಿಂಗಳಿನಲ್ಲಿ ಗ್ರಾಪಂಗಳಿಗೆ ಆಶ್ರಯ ಮನೆಗಳನ್ನು ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ಕನಸನ್ನು ನನಸು ಮಾಡುವ ಸಂಕಲ್ಪ ಹೊಂದಿರುವ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಬಡವರ ಪರ ಕೆಲಸ ಮಾಡುತ್ತಿದ್ದು, 2028ರ ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಅಧಿಕಾರದ ಗದ್ದುಗೆ ಏರುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಕೆ.ಆರ್.ನಗರ ಕ್ಷೇತ್ರದ ಜನತೆ ರವಿಶಂಕರ್ ಅವರನ್ನು ಅತ್ಯಧಿಕ ಬಹುಮತಗಳಿಂದ ಮತ್ತೆ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಶಾಸಕರ ಮನವಿ ಮೇರೆಗೆ ಇಲ್ಲಿನ ವಕೀಲರ ಸಂಘದ ಕಟ್ಟಡ ನಿರ್ಮಾಣ ಮತ್ತು ಶಿಥಿಲಗೊಂಡಿರುವ ಪ್ರವಾಸಿ ಮಂದಿರ ಕೆಡವಿ ಹೊಸ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡುವ ಜೊತೆಗೆ ಲೋಕೋಪಯೋಗಿ ಇಲಾಖೆ ವಸತಿ ಗೃಹಗಳನ್ನು ಕೆಡವಿ ವಾಣಿಜ್ಯ ಮಳಿಗೆ ನಿರ್ಮಾಣ ಮಾಡಲು ನೀಲಿನಕ್ಷೆ ತಯಾರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಪುರಸಭೆ ಅಧ್ಯಕ್ಷ ಶಿವುನಾಯಕ್, ಉಪಾಧ್ಯಕ್ಷೆ ವಸಂತಮ್ಮ, ಸದಸ್ಯರಾದ ಪ್ರಕಾಶ್, ನಟರಾಜು, ಶಂಕರ್, ಸೈಯದ್ ಸಿದ್ಧಿಕ್, ಜಾವೀದ್ ಪಾಷ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ನಿರ್ದೇಶಕ ಸೈಯದ್ ಜಾಬೀರ್, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಹಕಾರ ಮಹಾ ಮಂಡಳದ ಅಧ್ಯಕ್ಷ ರಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ಮುಖಂಡರಾದ ಜಿ.ಎಸ್.ವೆಂಕಟೇಶ, ಶ್ರೀನಿವಾಸ್, ಗೀತಾ, ಲತಾ, ಶಿವಣ್ಣ ನಾಗರಾಜು, ಎಂ.ಎಸ್. ಅನಂತು, ಡಿ.ಜೆ.ಬಸವರಾಜು ಮತ್ತಿತರರಿದ್ದರು.

ಹೆಬ್ಬಾಳು ಗ್ರಾಮದಿಂದ ಗಂಧನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸಲು ಕಪ್ಪಡಿ ಕ್ಷೇತ್ರದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡಲು 25 ಕೋಟಿಗಳಿಗೆ ಸರ್ಕಾರದಿಂದ ಮಂಜೂರಾತಿ ದೊರೆತಿದ್ದು, ಕಳೆದ ಬಜೆಟ್‌ನಲ್ಲಿ ಘೋಷಣೆಯಾದಂತೆ ಕೆಸ್ತೂರು ಏತ ನೀರಾವರಿಗೆ 60 ಕೋಟಿ ರೂ. ಬಿಡುಗಡೆಯಾಗಿದೆ. ಜೊತೆಗೆ ಇತರ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಮಾ.1 ರಂದು ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಇತರ ಇಲಾಖಾ ಸಚಿವರು ಆಗಮಿಲಿದ್ದು, ಕೆ.ಆರ್.ನಗರ ಪಟ್ಟಣ ಪುರಸಭೆಯ ಬಯಲು ರಂಗಮಂದಿರದಲ್ಲಿ ಬೃಹತ್ ಸಮಾವೇಶ ನಡೆಯಲಿದೆ.
– ಡಿ.ರವಿಶಂಕರ್, ಶಾಸಕ.

ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 17 ನೇ ಪದವೀಧರ ದಿನಾಚರಣೆ

ಕೌಶಲ್ಯ, ಪರಿಣಿತಿ ಇದ್ದರೆ ಉದ್ಯೋಗ ದೊರೆಯಲಿದೆ– ಸೆಲ್ವ ಜಯರಾಮನ್



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಶುಕ್ರವಾರ ನಡೆದ 17 ನೇ ಪದವೀಧರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಮೈಸೂರು, ಜ.31(ಬಿಎಲ್‌ಯು)– ಕೌಶಲ್ಯ ಹಾಗೂ ಪರಿಣಿತಿ ಇದ್ದರೆ ಉದ್ಯೋಗ ದೊರೆಯುತ್ತದೆ ಎಂದು ಅಮೇರಿಕಾದ ಬಿಸಿನೆಸ್ ಇಂಟೆಗ್ರಾದ ಸಹ ಸಂಸ್ಥಾಪಕ ಸೆಲ್ವ ಜಯರಾಮನ್ ಅಭಿಪ್ರಾಯಪಟ್ಟರು.

ನಗರದ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಇಂದು ನಡೆದ 17ನೇ ಪದವೀಧರ ದಿನಾಚರಣೆ ಕಾರ್ಯಕ್ರಮದಲ್ಲಿ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ದೇಶ ಅಭಿವೃದ್ಧಿಯಾಗಬೇಕಾದರೆ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು ಎಂದು ಸ್ವಾತಂತ್ರ್ಯ ದೊರೆತ ಆರಂಭದಲ್ಲೇ ದೇಶದ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಸಲಹೆ ನೀಡಿದ್ದರು ಎಂದರು.

ಇಡೀ ವಿಶ್ವದಲ್ಲಿ ಇಂದು ಶೇಕಡ 30 ಮಂದಿ ಪದವೀಧರರಾದರೂ ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಕೌಶಲ್ಯ ಮತ್ತು ಯಾವುದಾದರೊಂದು ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ್ದರೆ ಉದ್ಯೋಗ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ನಿರುದ್ಯೋಗದಿಂದ ಮುಕ್ತರಾಗಲು ಏನು ಮಾಡಬೇಕು ಎಂಬ ವಾಸ್ತವತೆಯನ್ನು ಯುವ ಸಮೂಹ ಅರಿಯಬೇಕು ಎಂದು ಸೆಲ್ವ ಜಯರಾಮನ್ ಹೇಳಿದರು.

ಭಾರತ ಇತ್ತೀಚಿಗೆ ತಂತ್ರಜ್ಞಾನದಲ್ಲಿ ಅಭಿವೃದ್ಧಿ ಹೊಂದುತ್ತಿದೆ. ಐಟಿ ಸೇರಿದಂತೆ ವೃತ್ತಿಪರ ಕಾಲೇಜುಗಳು ಹೆಚ್ಚಾಗುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಸೋಲು ಗೆಲುವಿನ ಮೆಟ್ಟಿಲು. ಈ ನಿಟ್ಟಿನಲ್ಲಿ ನಾನು ಸೋತೆ ಎಂದು ಕೂರದೆ ಗೆಲುವಿನ ಮೆಟ್ಟಿಲು ಹತ್ತಲು ಪ್ರಯತ್ನ ಮಾಡಬೇಕು. ಸೋಲಿಗೆ ಕಾರಣವಾದ ತಪ್ಪು ತಿದ್ದಿಕೊಳ್ಳಬೇಕು ಎಂದರು.

ಈ ವೇಳೆ ತಮ್ಮ ಕಷ್ಟದ ಬದುಕನ್ನು ಮೆಲುಕು ಹಾಕಿದ ಸೆಲ್ವ ಜಯರಾಮನ್, ಅಮೇರಿಕಾದಲ್ಲಿ ಯಶಸ್ವಿ ಹಾದಿಯಲ್ಲಿ ಸಾಗಿದ ವಿಚಾರವನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಉತ್ತೇಜಿಸಿದರು.

ಹೆಚ್ಚು ಅಂಕ ಪಡೆದ ವಿವಿಧ ತರಗತಿಯ ವಿದ್ಯಾರ್ಥಿಗಳಿಗೆ ಇದೇ ವೇಳೆ ಸೆಲ್ವ ಜಯರಾಮನ್ ಮೆಡಲ್, ಬಹುಮಾನ ಮತ್ತು ಪದವಿ ಪ್ರದಾನ ಮಾಡಿದರು. ಬಿಎ ವಿಭಾಗದಲ್ಲಿ ಕೆ.ಜೆ.ಸಂಜನಾ, ಎಂ.ಬಿ.ದೇವಿಕಾ, ಹೆಚ್.ಎಸ್.ಸಹನ, ಬಿಎಸ್ ಸಿ ವಿಭಾಗದಲ್ಲಿ ತನುಶ್ರೀ, ಬಿ.ದೀಕ್ಷಾ, ಎಲ್. ಚೇತನ, ಬಿಕಾಂ ವಿಭಾಗದಲ್ಲಿ ಎನ್. ಅಪೇಕ್ಷ, ಎನ್.ಎಸ್. ನಮ್ರತಾ, ಹೆಚ್.ಎಸ್.ರಮ್ಯ, ಬಿಬಿಎ ವಿಭಾಗದಲ್ಲಿ ಎಸ್.ಜೆ. ಭಾವನಾ, ಹೆಚ್.ಆರ್.ಲಕ್ಷ್ಮಿ, ಚಂದನಾ ಕುಮಾರಿ, ಜಿ.ಪಿ.ಇಂದು, ಬಿಸಿಎ ವಿಭಾಗದಿಂದ ಎಂ.ಎಂ.ದೀಪ್ತಿ, ಸಿ.ಜ್ಯೋತಿ, ಎನ್.ಎಸ್.ಜಯಶ್ರೀಗೆ ಪದವಿ ನೀಡಲಾಯಿತು.

ಎಂ.ಎ ಅರ್ಥಶಾಸ್ತ್ರದಲ್ಲಿ ಡಿ.ದಿವ್ಯಾ, ಎಂ.ಪಾರ್ವತಮ್ಮ, ಎಂ.ಕಾಂ ನಲ್ಲಿ ಪಿ.ಕೆ. ಚೈತ್ರ ಆರ್.ಮಹೇಶ್ವರಿ, ಎಂ.ಎಸ್ಸಿ ರಸಾಯನ ಶಾಸ್ತ್ರದಲ್ಲಿ ಹೆಚ್.ಜಿ.ರಾಧಿಕಾ, ಬಿ.ರೋಜಾ ಅವರಿಗೆ ಕೂಡ ಮೆಡಲ್, ಬಹುಮಾನ ಹಾಗೂ ಪ್ರದಾನ ಮಾಡಲಾಯಿತು. ಒಟ್ಟಾರೆ ಕಾಲೇಜಿನ 653 ವಿದ್ಯಾರ್ಥಿಗಳು ಪದವಿ ಪಡೆದರು.

ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜೆ. ಬೆಟಸೂರ ಮಠ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಜೆಎಸ್‌ಎಸ್ ವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್. ಮುರುಗೇಶಪ್ಪ, ಪರೀಕ್ಷಾ ವಿಭಾಗದ ಮುಖ್ಯಸ್ಥ ಎಂ.ಎಂ.ಸ್ವಾಮಿ, ಪ್ರಾಂಶುಪಾಲ ಡಾ.ರೇಚಣ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾ ಮಂಡಳದ ಸದಸ್ಯರಾಗಿ ಎಸ್.ಚಂದ್ರಶೇಖರ್ ಆಯ್ಕೆ



ಮೈಸೂರು, ಜ.31–ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾ ಮಂಡಳದ ಆಡಳಿತ ಮಂಡಳಿಯ ಸದಸ್ಯರಾಗಿ ಮೈಸೂರು ವಿಭಾಗದಿಂದ ಎಸ್.ಚಂದ್ರಶೇಖರ್ ಆಯ್ಕೆಯಾಗಿದ್ದಾರೆ. ಹಿರಿಯ ಸಹಕಾರಿಗಳೂ ಆದ ಎಸ್.ಚಂದ್ರಶೇಖರ್, ಜನತಾ ಬಜಾರ್ ಅಧ್ಯಕ್ಷರಾಗಿ ಅಕ್ಕಿಮೇಳದ ಮೂಲಕ ಹೆಸರುವಾಸಿಯಾಗಿದ್ದರು. ನಂತರ ಮೈಸೂರು ಹಾಗೂ ಚಾಮರಾಜನಗರ ಸಹಕಾರಿ ಕೇಂದ್ರೀಯ ಬ್ಯಾಂಕ್ ಅಧ್ಯಕ್ಷರಾಗಿದ್ದರು.

ಇವರೊಂದಿಗೆ ಹೆಚ್.ಅಶೋಕ್, ಚಂದ್ರಶೇಖರ್ ಕೋಲ್ಹಾರ್ ಸಹ ಚುನಾಯಿತರಾಗಿದ್ದಾರೆ. ರಾಜ್ಯದಲ್ಲಿ ಐದು ವಿಭಾಗಗಳಿದ್ದು, ಗ್ರೂಪ್–1ನಲ್ಲಿ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ, ಡಾ. ನಾಗೇಂದ್ರ ಡಿ.ಎಲ್., ಸಿ.ಎಂ.ಮಾರೇಗೌಡ, ವೈ.ಶ್ರೀನಿವಾಸಗೌಡ, ನರೇಂದ್ರ ಕುಮಾರ್ ಎಂ.ಜೆ., ಕೆ.ಕೃಷ್ಣ ಮೂರ್ತಿ, ಗ್ರೂಪ್–2ರಿಂದ ಕೆ.ಜಗದೀಶ್ ಕಂದೀಕೆರೆ, ಬಿ.ಡಿ.ಭೂಕಾಂತ್, ರಾಜೇಶ್ ಟಿ., ಜಿ.ಮಲ್ಲಿಕಾರ್ಜುನಯ್ಯ, ಗ್ರೂಪ್–3ರಿಂದ ಡಾ. ಸಂಜಯ್ ಪಂಚಾಕ್ಷರಿ ಹೊಸಮಠ, ಉಮೇಶ ಶಿವಕುಮಾರ್ ಬಾಳಿ, ತಮ್ಮಣ್ಣ ಬಾಲಪ್ಪ ಕೆಂಚರೆಡ್ಡಿ, ಗ್ರೂಪ್–4ರಿಂದ ರವೀಂದ್ರ ಪ್ರಹ್ಲಾದ್ ಕಲಬುರಗಿ, ಶಿವಕುಮಾರ್ ಬಸವರಾಜ್ ಬಾದವಾಡಗಿ, ಧರೆಪ್ಪ ಮಹದೇವ ಅಲಗೂರ, ಶಿವಾನಂದ ಬಸಪ್ಪ ನ್ಯಾಮಗೌಡ, ಹೊನ್ನಯ್ಯ ವೀರಭದ್ರಯ್ಯ ಹಿರೇಮಠ ಆಯ್ಕೆಯಾಗಿದ್ದಾರೆ.

ಇವರ ಅಧಿಕಾರಾವಧಿ ಐದು ವರ್ಷಗಳಾಗಿವೆ ಎಂದು ಚುನಾವಣಾಧಿಕಾರಿ ಡಾ. ಹರೀಶ್ ಬಿ.ಆರ್.ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.7ಕ್ಕೆ 'ಮಿಸ್ಟರ್ ರಾಣಿ' ಚಿತ್ರ ಬಿಡುಗಡೆ


ಮೈಸೂರು, ಜ.31(ಜಿಎ)– ಎಕ್ಸೆಲ್ ಆರ್ಬಿಟ್ ಕ್ರಿಯೇಶನ್ಸ್ ಅಡಿ ನಿರ್ಮಾಣಗೊಂಡಿರುವ 'ಮಿಸ್ಟರ್ ರಾಣಿ' ಚಲಚಿತ್ರವು ಫೆ.7ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರದ ನಟ ದೀಪಕ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಲಕ್ಷ್ಮೀನಿವಾಸ ಧಾರವಾಹಿಯ ಜಯಂತ್ ಪಾತ್ರದ ಮೂಲಕ ಹಾಗೂ 11 ಚಲನಚಿತ್ರಗಳ ಮೂಲಕ ಜನರ ಮನದಲ್ಲಿ ವಿಶೇಷ ಸ್ಥಾನ ಗಳಿಸಿರುವ ನಾನು ಈ ಚಿತ್ರದ ವಿಭಿನ್ನ ಕಥೆಯನ್ನು ಒಪ್ಪಿಕೊಂಡು 'ಮಿಸ್ಟರ್ ರಾಣಿ' ನಟಿಸಿದ್ದೇನೆ ಎಂದರು.

ಚಿತ್ರದಲ್ಲಿ ಹೆಣ್ಣು ಪಾತ್ರಧಾರಿಯಾಗಿ ನಟಿಸುತ್ತಿದ್ದೇನೆ. ಈಗಾಗಲೇ ಚಿತ್ರದ ಟ್ರೈಲರ್, ಸಾಂಗ್ಸ್ ಜನರ ಮೆಚ್ಚುಗೆ ಪಡೆದು ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕ್ರೌಡ್ ಫಂಡಿಂಗ್‌ದಲ್ಲಿ ಚಿತ್ರ ನಿರ್ಮಾಣವಾಗಿದ್ದು, 186 ಮಂದಿ ನಿರ್ಮಾಪಕರು ಇದ್ದಾರೆ. ಈ ಹಿನ್ನೆಲೆಯಲ್ಲಿ ಟಿಕೆಟ್ ದರವನ್ನು 99 ರೂ.ಗೆ ನಿಗದಿ ಪಡಿಸಲಾಗಿದೆ. ಕನ್ನಡ ಮಾತ್ರವಲ್ಲದೇ ಇತರ ಭಾಷೆಗಳಲ್ಲಿಯೂ ಮುಂದಿನ ದಿನಗಳಲ್ಲಿ ಚಿತ್ರ ತೆರೆಕಾಣಲಿದೆ ಎಂದ ತಿಳಿಸಿದರು.

ಟಿ.ಎಸ್.ರವಿಶಂಕರ್ ನಿವಾಸಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ

ಕುಟುಂಬ ಸದಸ್ಯರಿಗೆ ಸಾಂತ್ವನ




ಮೈಸೂರು, ಜ.31(ಎಸ್‌ಪಿಎನ್)– ಇತ್ತೀಚೆಗೆ ನಿಧನರಾದ ಕಾಂಗ್ರೆಸ್ ಮಾಜಿ ನಗರಾಧ್ಯಕ್ಷ ಟಿ.ಎಸ್.ರವಿಶಂಕರ್ ಅವರ ವಿದ್ಯಾರಣ್ಯಪುರಂನಲ್ಲಿರುವ ಮನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವ ಹೆಚ್.ಕೆ.ಪಾಟೀಲ್ ಸೇರಿದಂತೆ ಇತರೆ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭ ಹಾರೈಕೆ



ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅವರ ಹುಟ್ಟುಹಬ್ಬದ ಪ್ರಯುಕ್ತ ಅವರನ್ನು ಮೈಸೂರು ಪಾಲಿಕೆ 44ನೇ ವಾರ್ಡಿನ ಜೆಡಿಎಸ್ ಮುಖಂಡರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಟಿಎಪಿಸಿಎಂಎಸ್ ಸದಸ್ಯ ಚಂದ್ರಶೇಖರ್, ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸುರೇಶ್, ವಕೀಲ ಸಿದ್ದರಾಜು, ಆನಂದ್, ಕೇಬಲ್ ರವಿ, ಲೋಕೇಶ್, ಶಂಭೇಗೌಡ, ಮಂಜು ಇನ್ನಿತರರಿದ್ದರು.



ಹುಣಸೂರು ಕ್ಷೇತ್ರದ ಶಾಸಕರಾದ ಜಿ.ಡಿ.ಹರೀಶ್‌ಗೌಡ ಅವರ 38ನೇ ಹುಟ್ಟುಹಬ್ಬದ ಪ್ರಯುಕ್ತ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಆ ನಂತರ ದೇವಸ್ಥಾನದ ಮುಂಭಾಗ ಅವರಿಗೆ ಅಭಿಮಾನಿಗಳು ಭಾರೀ ಹಾರ ಹಾಕಿ, ಕೇಕ್ ಕತ್ತರಿಸಿ ಸಂಭ್ರಮಿಸಿದರು. ಈ ವೇಳೆ ಹಂಚ್ಯಾ ಗ್ರಾಪಂ ಅಧ್ಯಕ್ಷ ಜಿ.ಟಿ.ಆರ್ ಮಂಜು, ಜೆಡಿಎಸ್ ಮುಖಂಡರಾದ ನಾಡನಹಳ್ಳಿ ಮಧುಸೂದನ್, ಕುಪ್ಪೇಗಾಲ ಬಾಬು, ರಮೇಶ್, ಕಿರಣ್ ಗೌಡ, ವಿಠ್ಠಲ್, ಹರೀಶ್ ಮತ್ತಿತರರಿದ್ದರು.

ಇಂದು ಮೈಸೂರಲ್ಲಿ ಶ್ರೀ ಮಡಿವಾಳ ಮಾಚಿದೇವರ ಜಯಂತಿ ಆಚರಣೆ



ಮೈಸೂರು, ಜ.31(ಜಿಎ)– ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಡಿವಾಳ ಮಾಚಿದೇವರ ಜಯಂತ್ಯೋತ್ಸವ ಆಚರಣಾ ಸಮಿತಿ ವತಿಯಿಂದ ಫೆ.1ರಂದು ಬೆಳಗ್ಗೆ 10.30ಕ್ಕೆ ಕಲಾಮಂದಿರದಲ್ಲಿ ಶ್ರೀ ಮಡಿವಾಳ ಮಾಚಿ ದೇವರ ಜಯಂತಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಡಿವಾಳ ಸಮುದಾಯದ ಮುಖಂಡರಾದ ರವಿನಂದನ್ ಈ ವಿಷಯ ತಿಳಿಸಿ, ನಗರದ ಮಡಿವಾಳ ಸಮುದಾಯದವರು ತಮ್ಮ ಕೆಲಸ ಕಾರ್ಯಗಳ ನಡುವೆ ಬಿಡುವು ಮಾಡಿಕೊಂಡು ಭಾಗವಹಿಸಬೇಕೆಂದು ಸಮುದಾಯದ ವಿವಿಧ ಸಂಘ ಸಂಸ್ಥೆಗಳ ಮುಖಂಡರು ಮನವಿ ಮಾಡಿದರು.

ಅಂದು ಬೆಳಗ್ಗೆ 9 ಗಂಟೆಗೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಹೊರಡುವ ಮೆರವಣಿಗೆಗೆ ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಜಿ.ಟಿ. ದೇವೇಗೌಡ ಹಾಗೂ ಇನ್ನಿತರ ಗಣ್ಯರು ಚಾಲನೆ ನೀಡುವರು. ನಂತರ ಕಲಾಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಸಿಎಂ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಘನ ಉಪಸ್ಥಿತರಿರುವರು. ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಯುವ ಸಾಹಿತಿ ವಿ.ಶ್ರೀಧರ್ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದರು.

ಅನ್ನಸಂತರ್ಪಣೆ : ಕುಕ್ಕರಹಳ್ಳಿಯ ವೀರ ಮಡಿವಾಳ ಮಾಚಿದೇವರ ಸಂಘದ ಬಿ.ಜಿ. ಕೇಶವ್ ಮಾತನಾಡಿ, ಕಲಾ ಮಂದಿರದ ಕಾರ್ಯಕ್ರಮಕ್ಕೆ ಆಗಮಿಸುವವರಿಗೆ ಕುಕ್ಕರಹಳ್ಳಿಯಲ್ಲಿರುವ ಮಡಿ ಕಟ್ಟೆಯಲ್ಲಿ ಎಲ್ಲರಿಗೂ ಅನ್ನ ಸಂತರ್ಪಣೆ ಆಯೋಜಿಸಲಾಗಿದೆ ಸುಮಾರು ಒಂದೂವರೆ ಸಾವಿರ ಜನಕ್ಕೆ ಇದರ ವ್ಯವಸ್ಥೆ ಮಾಡಿದ್ದು, ಮಡಿವಾಳ ಸಮುದಾಯದವರು ಮಾತ್ರವಲ್ಲ, ಸಾರ್ವಜನಿಕರೂ ಸ್ವೀಕರಿಸಬಹುದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಚನ್ನಕೇಶವ, ಬಿ.ಜಿ. ಕೇಶವ, ಚಿಕ್ಕಣ್ಣ, ಎಚ್.ಪಿ. ಬಸವರಾಜು, ಮಂಜುಶೆಟ್ಟಿ, ನಾಗೇಶ್, ಸಿದ್ದಪ್ಪಾಜಿ, ಎನ್. ಜಗದೀಶ್‌ಕುಮಾರ್, ಚೌಡಯ್ಯ, ಶ್ರೀನಿವಾಸ್, ಶಿವಶಂಕರ್ ಉಪಸ್ಥಿತರಿದ್ದರು.

ಸಹಕಾರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ

ಮೈಸೂರು, ಜ.31–ಶ್ರೀ ಮಲೈ ಮಹದೇಶ್ವರ ಪತ್ತಿನ ಸಹಕಾರ ಸಂಘದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಚಿಕ್ಕಹಳ್ಳಿ ಎಂ.ಕುಮಾರ, ಉಪಾಧ್ಯಕ್ಷರಾಗಿ ಗೆಜ್ಜಗಳ್ಳಿ ಡಿ.ಮೋಹನ್‌ಕುಮಾರ್, ನಿರ್ದೇಶಕರಾಗಿ ದೇವಲಾಪುರ ರಾಜು, ಕೀಳನಪುರ ಕೆ.ಎಸ್.ಮಾದಪ್ಪ, ಕೇರ್ಗಳ್ಳಿ ಎಂ.ಬಸವ ರಾಜು, ನಾಗವಾಲ ಎನ್.ಬಿ.ರಾಜು, ಗುರೂರು ಶ್ರೀಕಂಠಮೂರ್ತಿ, ಚಿಕ್ಕಕಾನ್ಯ ಎಸ್.ಶಿವಮೂರ್ತಿ, ದೇವಲಾಪುರ ಎನ್.ಸೋಮಣ್ಣ, ಹಡಜನ ದಾಕ್ಷಾ ಯಿಣಿ, ದೇವಲಾಪುರ ಎನ್.ಬಿ.ಭಾಗ್ಯ, ಕೂಡನಹಳ್ಳಿ ನಾಗರಾಜು, ಮೈಸೂರು ಯತಿರಾಜು ಆಯ್ಕೆಯಾಗಿದ್ದಾರೆ.

ಶಾಲೆಗಳಲ್ಲಿ ವಿಷಯವಾರು ಶಿಕ್ಷಕರಿಲ್ಲದೆ ಗುಣಮಟ್ಟ ಕುಸಿತ

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್



ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಸಮಾರೋಪದಲ್ಲಿ ಮೈಸೂರು ವಿವಿ ಕುಲಪತಿ ಪ್ರೊಎನ್.ಕೆ.ಲೋಕನಾಥ್ ಮಾತನಾಡಿದರು.

ಮೈಸೂರು,ಜ.31(ಎಸ್‌ಪಿಎನ್)– ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ವಿಷಯವಾರು ಶಿಕ್ಷಕರ ನೇಮಕ ಮಾಡದ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಜ್ಞಾನದ ಗುಣಮಟ್ಟ ಕುಸಿಯುತ್ತಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟರು.

ಮೈಸೂರು ರಿಜಿನಲ್ ಇನ್ಸ್ಟಿಟ್ಯೂಟ್ ಆಫ್ ಎಜ್ಯುಕೇಷನ್ ಆವರಣದ ಟೆಕ್ನಾಲಜಿ ಬ್ಲಾಕ್‌ನಲ್ಲಿ ನವದೆಹಲಿಯ ಎನ್‌ಸಿಇಆರ್‌ಟಿ ಹಾಗೂ ಆರ್‌ಐಇ ಸಹಯೋಗದೊಂದಿಗೆ ಏರ್ಪಡಿಸಿದ್ದ 'ವಿದ್ಯಾರ್ಥಿಗಳಿಗೆ ಶಾಲಾ ಆಧಾರಿತ, ವೃತ್ತಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ನವೀನ ಅನುಭವಗಳು ಮತ್ತು ಅಭ್ಯಾಸಗಳ' ಕುರಿತಾದ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಸಮಾರೋಪದಲ್ಲಿ ಮಾತನಾಡಿದರು.

ಸ್ನಾತಕೋತ್ತರ ಪದವಿಯಲ್ಲಿ ಭೌತಶಾಸ್ತ್ರ ಓದಿದ ವಿದ್ಯಾರ್ಥಿ, ಪ್ರೌಢಶಾಲೆಗಳಲ್ಲಿ ಕೆಲಸಕ್ಕೆ ಸೇರಿದ ನಂತರ ರಸಾಯನಶಾಸ್ತ್ರ ಜೀವಶಾಸ್ತ್ರ ಗಣಿತ, ಇಂಗ್ಲಿಷ್ ವಿಷಯಗಳನ್ನು ಬೋಧಿಸುವ ಅನಿವಾರ್ಯತೆ ಎದುರಾಗಿದೆ. ಭೌತಶಾಸ್ತ್ರ ಓದಿ, ಸಂಬಂಧವಲ್ಲದ ವಿಷಯ ಬೋಧಿಸಲು ಹೇಗೆ ಸಾಧ್ಯ. ಹಾಗಾಗಿ ತಳಮಟ್ಟದ ಶಿಕ್ಷಣದಲ್ಲೇ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತ್ತಿಲ್ಲ. ಆದ ಕಾರಣ ವಿಷಯವಾರು ಶಿಕ್ಷರ ನೇಮಕವಾಗಬೇಕು ಎಂದು ಪ್ರತಿಪಾದಿಸಿದರು.

ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ವೃತ್ತಿ ಕೌಶಲ್ಯ ಮೈಗೂಡಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಶಿಕ್ಷಕರು ತುಂಬಾ ಮುಖ್ಯವಾಗಿದ್ದಾರೆ. ಹಿಂದಿನ ಕಾಲದಲ್ಲಿ 'ಶಿಕ್ಷಕ ಸ್ನೇಹಿ ನೀತಿ' ಜಾರಿಯಿತ್ತು. ಪ್ರಸ್ತುತ 'ವಿದ್ಯಾರ್ಥಿ ಸ್ನೇಹಿ ಶಿಕ್ಷಣ ನೀತಿ' ರೂಪಿಸಿರುವುದರಿಂದ ಮಕ್ಕಳು ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನ ಹರಿಸುತ್ತಿಲ್ಲ. ಹಾಗಾಗಿ ಸ್ನಾತಕೋತ್ತರ ಪದವಿ ಮುಗಿಸಿದ ವಿದ್ಯಾರ್ಥಿಗಳಲ್ಲೂ ವೃತ್ತಿ ಕೌಶಲ್ಯ ಬೆಳೆಸಿಕೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇತ್ತೀಚಿನ ದಿನಗಳಲ್ಲಿ ಎಲ್ಲಾ ಮಾಹಿತಿಗಳು ಮೊಬೈಲ್‌ನಲ್ಲಿ ಸಿಗುತ್ತಿವೆ. ಹಾಗಾಗಿ ವಿದ್ಯಾರ್ಥಿಗಳು ಪುಸ್ತಕ ತೆಗೆದು ಓದುತ್ತಿಲ್ಲ. ಪುಸ್ತಕ ಓದದೇ ಜ್ಞಾನ ಬೆಳೆಯಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಕುಲಪತಿಗಳು, ಪ್ರಸ್ತುತ ನೂತನ ಶಿಕ್ಷಣ ನೀತಿ–2020ರಲ್ಲಿ ವಿದ್ಯಾರ್ಥಿಗಳ ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಅಲ್ಲದೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 77 ವರ್ಷ ಕಳೆದಿದೆ. ಆದರೆ, ಉತ್ತಮ ಸಾರಿಗೆ, ಆರೋಗ್ಯ, ಶಿಕ್ಷಣ ಪಡೆಯುವಲ್ಲಿ ವಿಫಲರಾಗುತ್ತಿದ್ದೇವೆ ಎಂದರು.

ಯುರೋಪ್, ಜಪಾನ್ ದೇಶಗಳಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆಯಬೇಕಾದರೆ, ಕೆಳ ಹಂತದ ತರಗತಿಗಳಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯ. ಆದರೆ, ನಮ್ಮ ದೇಶದಲ್ಲಿ ವಿದ್ಯಾರ್ಥಿ ಸ್ನೇಹಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿರುವುದರಿಂದ ಶೇ.100ರಷ್ಟು ವಿದ್ಯಾರ್ಥಿಗಳು ಶಿಕ್ಷಣ ಪಡೆದರೂ ಎಲ್ಲರೂ ವಿದ್ಯಾವಂತರಾಗಿರುವುದಿಲ್ಲ. ಹಾಗಾಗಿ ಶೇ.100ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ ಎಂದು ಭಾವಿಸುವ ಬದಲು ದೇಶದ ಪ್ರಗತಿಗೆ ಅನುಕೂಲವಾಗುವ ಜ್ಞಾನವಂತ ವಿದ್ಯಾರ್ಥಿಗಳನ್ನು ದೇಶಕ್ಕೆ ಕೊಡುಗೆ ನೀಡುವ ಪದ್ಧತಿ ಜಾರಿಗೆ ಬರಬೇಕು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪ್ರೊ.ವೈ ಶ್ರೀಕಾಂತ್, ಪ್ರೊ. ಕಲ್ಪನಾ ವೇಣುಗೋಪಾಲ್, ಪ್ರೊ.ಕೆ.ಅನಿಲ್‌ಕುಮಾರ್ ಸೇರಿದಂತೆ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮದಗಜರಾಜ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಾರ್ಕೋ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೇಗೂರು ಕಾಲೋನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ದೇವ (ಹಿಂ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ಗಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮದಗಜರಾಜ (ತ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರಾಯಲ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ರಾ.7.15ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4.15ಕ್ಕೆ, ಭೂ ಮಂತರ್ (ಕ): ರಾ.10.10ಕ್ಕೆ.
ಸ್ಕ್ರೀನ್ 2	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.35ಕ್ಕೆ, ಕುಟುಂಬಸ್ಥನ್ (ತ): ಮ.1ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.05ಕ್ಕೆ, ಭೂ ಮಂತರ್ (ಕ): ರಾ.7.05ಕ್ಕೆ, ಟ್ವೈಲೈಟ್ ಆಫ್ ದಿ ವಾರಿಯರ್ಸ್ ವಾಲ್ಡ್ ಇನ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.10.25ಕ್ಕೆ, ಮಿ. ಹೌಸ್‌ಕೀಪಿಂಗ್ (ತ): ಮ.1.05ಕ್ಕೆ, ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ (ಹಿಂ): ಸಂ.4.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.05ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ರಾ.10ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.20ಕ್ಕೆ, ಮ್ಯಾಕ್ಸ್ (ಕ): ಮ.1.20ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಳೆ ಪಿ. ಗೋವಿಂದರಾಜು ಪುಣ್ಯ ಸ್ಮರಣೆ



ಮೈಸೂರು, ಜ. 31– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಅಧ್ಯಕ್ಷ ದಿವಂಗತ ಪಿ. ಗೋವಿಂದರಾಜು ಅವರ ಪ್ರಥಮ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮ ಫೆ. 2ರಂದು ನಡೆಯಲಿದೆ.

ಮೈಸೂರು–ಬನ್ನೂರು ರಸ್ತೆಯಲ್ಲಿರುವ ರಂಗಾಚಾರಿ ಹುಂಡಿ ತೋಟದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ನಡೆಯಲಿದ್ದು, ಮಧ್ಯಾಹ್ನ 12.30ಕ್ಕೆ ಭೋಜನ ಇರುತ್ತದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ದೆಹಲಿ ಚುನಾವಣೆ ಹೊತ್ತಲ್ಲೇ ಆಮ್ ಆದ್ಮಿ ಪಕ್ಷಕ್ಕೆ ಐವರು ಶಾಸಕರು ರಾಜೀನಾಮೆ

ನವದೆಹಲಿ, ಜ.31– ದೆಹಲಿ ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳ ಮೊದಲು ಆಮ್ ಆದ್ಮಿ ಪಕ್ಷಕ್ಕೆ(ಎಎಪಿ) ಗಮನಾರ್ಹ ಹಿನ್ನಡೆಯಾಗಿದ್ದು, ಮೆಹ್ರೌಲಿಯ ನರೇಶ್ ಯಾದವ್ ಸೇರಿದಂತೆ ಐವರು ಶಾಸಕರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ರಾಜೀನಾಮೆ ನೀಡಿದ ಶಾಸಕರಲ್ಲಿ ಪಾಲಂನ ಭಾವನಾ ಗೌರ್, ಮೆಹ್ರೌಲಿಯ ನರೇಶ್ ಯಾದವ್, ಜನಕ್‌ಪುರಿಯ ರಾಜೇಶ್ ರಿಷಿ, ಕಸ್ತೂರ್ಬಾ ನಗರದ ಮದನ್ ಲಾಲ್, ತ್ರಿಲೋಕಪುರಿಯ ರೋಹಿತ್ ಮೆಹ್ರೌಲಿಯಾ, ಬಿಜ್ವಾಸನ್‌ನಿಂದ ಬಿಎಸ್ ಜೂನ್ ಮತ್ತು ಆದರ್ಶ ನಗರದ ಪವನ್ ಶರ್ಮಾ ಸೇರಿದ್ದಾರೆ.

ಪಾಲಂ ಶಾಸಕಿ ಭಾವನಾ ಗೌರ್, ಆಪ್ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರಿಗೆ ಬರೆದ ಪತ್ರದಲ್ಲಿ, ತಮ್ಮ ಮತ್ತು ಪಕ್ಷದ ಮೇಲಿನ ನಂಬಿಕೆಯನ್ನು ಕಳೆದುಕೊಂಡ ಕಾರಣ ಪಕ್ಷ ತ್ಯಜಿಸುತ್ತಿರುವುದಾಗಿ ತಿಳಿಸಿದ್ದಾರೆ.

ಆಪ್ ನಾಯಕಿ ಮತ್ತು ಮೆಹ್ರೌಲಿ ಶಾಸಕ ನರೇಶ್ ಯಾದವ್ ಪಕ್ಷ ತೊರೆದರು. 2025ರ ಚುನಾವಣೆಯಲ್ಲಿ ಯಾದವ್‌ಗೆ ಟಿಕೆಟ್ ನಿರಾಕರಿಸಲಾಯಿತು. ಈ ಎಲ್ಲಾ ಶಾಸಕರು 2025ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷದ ಟಿಕೆಟ್ ಪಡೆಯದವರಾಗಿದ್ದಾರೆ. ಏಕೆಂದರೆ ಎಎಪಿ ಇವರ ಕ್ಷೇತ್ರಗಳಲ್ಲಿ ಹೊಸ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಆಯ್ಕೆ ಮಾಡಿಕೊಂಡಿದೆ.

ಕುಂಭಮೇಳದಿಂದ ಯಾತ್ರಿಕರನ್ನು ಕರೆತರುತ್ತಿದ್ದ ವಾಹನಕ್ಕೆ ಟ್ರಕ್ ಡಿಕ್ಕಿ: 6ಕ್ಕೂ ಹೆಚ್ಚು ಮಂದಿ ದುರ್ಮರಣ

ಘಾಜಿಪುರ, ಜ.31– ಕುಂಭಮೇಳದಿಂದ ಯಾತ್ರಿಕರನ್ನು ಕರೆತರುತ್ತಿದ್ದ ವಾಹನಕ್ಕೆ ಟ್ರಕ್ ಡಿಕ್ಕಿಯಾಗಿ ಸಂಭವಿಸಿದ ಭೀಕರ ಅಪಘಾತದಲ್ಲಿ 6ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿರುವ ಘಟನೆ ಉತ್ತರ ಪ್ರದೇಶದ ಘಾಜಿಪುರದಲ್ಲಿ ನಡೆದಿದೆ. ಚಾಲಕನ ನಿಯಂತ್ರಣ ತಪ್ಪಿದ ಟ್ರಕ್, ಯಾತ್ರಿಕರನ್ನು ಕರೆತರುತ್ತಿದ್ದ ವಾಹನಕ್ಕೆ ಡಿಕ್ಕಿ ಹೊಡೆದಿದೆ. ನಂದಗಂಜ್ ಪೊಲೀಸ್ ಠಾಣೆ ವ್ಯಾಪ್ತಿಯ ಕುಸ್ಮಿಕಲಾ ಬಳಿ ಈ ಅಪಘಾತ ಸಂಭವಿಸಿದೆ. ಮೃತರು ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿದ್ದ ಮಹಾಕುಂಭ ಮೇಳದಲ್ಲಿ ಪಾಲ್ಗೊಂಡು ವಾಪಾಸ್ ಆಗುತ್ತಿದ್ದರು ಎಂದು ತಿಳಿದುಬಂದಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಪೊಲೀಸರು ದೌಡಾಯಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ.


ವೈ.ಎನ್.ಅರವಿಂದ್
ಅಧ್ಯಕ್ಷರು, ಕ.ರಾ.ಸ.ಮೀನುಗಾರಿಕೆ ಮಹಾಮಂಡಳಿ
ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕರಾದ
ಜಿ.ಡಿ.ಹರೀಶ್ ಗೌಡ
ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು